Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-19 | ಸಂಚಿಕೆ-33 | ಆಗಸ್ಟ್ 11-17, 2025 | ಪುಟ 16 | ರೂ.10
Volume-19 | Issue-33 | Aug 11-17, 2025 | Pages 16 | Price 10/-

ಕಲಬುರಗಿ ಕೇಂದ್ರೀಯ ವಿ.ವಿ. ಕೋಮುವಾದೀಕರಣದ ವಿರುದ್ಧ ಹೋರಾಟದ ಕಹಳೆ



ಸ್ವಾತಂತ್ರ್ಯದ 79ನೇ ವಾರ್ಷಿಕೋತ್ಸವ

ಒಕ್ಕೂಟ ವ್ಯವಸ್ಥೆ ಕಿತ್ತು ಹಾಕುವುದೇ RSS-BJP ಗುರಿ




ಬಿಹಾರ : ಒಂದು ಮಹಾ ಚುನಾವಣಾ ವಂಚನೆ



ಮಾಧ್ಯಮಗಳ ಮೇಲೆ ದಾಳಿ ಬಾಯಿ ಮುಚ್ಚಿಸುವ ಭಯ ಉತ್ಪಾದನೆ

ಕ್ರೈಸ್ತ ಸನ್ಯಾಸಿನಿಯರ ಬಂಧನ ವಿಷಪೂರಿತ ಹಿಂದುತ್ವ ರಾಷ್ಟ್ರ ಕಾರ್ಯಸೂಚಿ



ಜೆ.ಎನ್. ಕಾಲಂ

ಭಾಗ 34

ಅಹಾ! ಎಂತಹಾ ಪ್ರಜಾಪ್ರಭುತ್ವ!!

ಜಗತ್ತಿನ ಮೊದಲ ಪ್ರಜಾಪ್ರಭುತ್ವದ ನಿಜಸ್ವರೂಪ

ಪ್ರಜಾಪ್ರಭುತ್ವ ಸ್ಥಾಪನೆಯು ಮಾನವರ ಸಾಮಾಜಿಕ ಬೆಳವಣಿಗೆಯಲ್ಲಿ ಒಂದು ಮಹತ್ವದ ನೆಗೆತ ಎಂದು ಇತಿಹಾಸ ಸಾರಿದೆ. ಆದರೇಕೆ ಪ್ರಜಾಪ್ರಭುತ್ವ, ಇಂತಹ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ವೈಪರೀತ್ಯಗಳಿಗೆ ಕಾರಣವಾಗಿದೆ? ಪ್ರಜಾಪ್ರಭುತ್ವದ ಮೂಲದಲ್ಲಿಯೇ ಇದಕ್ಕೆ ಕಾರಣ ಅಡಗಿದೆಯೇ? ಬ್ರಿಟನ್‌ನಲ್ಲಿ ಜಗತ್ತಿನ ಮೊದಲ ಪ್ರಜಾಪ್ರಭುತ್ವ ಸ್ಥಾಪನೆಯಾದುದರಿಂದ ಅಲ್ಲಿಯ ಪ್ರಜಾಪ್ರಭುತ್ವದ ಸ್ವರೂಪ, ಅದರ ಬೆಳವಣಿಗೆಯನ್ನು ವಿಶ್ಲೇಷಣೆ ಮಾಡಿದರೆ ಏನಾದರೂ ತಿಳಿಯಬಹುದೇ?

ಟ್ರಂಪ್‌ನ ಹುಚ್ಚಾಟ, ಆರ್ಭಟ, ಮೆರೆದಾಟಗಳನ್ನು ನೋಡಿ ಇಡೀ ಜಗತ್ತು ಬೆಚ್ಚಿ ಬಿದ್ದಿದೆ. ಅವರು ಪ್ರಜಾಪ್ರಭುತ್ವವೊಂದರ ಅಧ್ಯಕ್ಷ. ಜಗತ್ತಿನ ಅತ್ಯಂತ ಹಳೆಯ ಪ್ರಜಾಪ್ರಭುತ್ವಗಳಲ್ಲಿ ಒಂದಾದ, ಆರ್ಥಿಕವಾಗಿ, ಸೈನಿಕವಾಗಿ ಅತ್ಯಂತ ಬಲಶಾಲಿ ರಾಷ್ಟ್ರದ ಅಧ್ಯಕ್ಷ. ಪ್ರಜಾಪ್ರಭುತ್ವದಲ್ಲಿ ಇಂತಹ ಮನುಷ್ಯ ಹೇಗೆ ಅಧ್ಯಕ್ಷರಾಗಿ ಆಯ್ಕೆಯಾದನಪ್ಪಾ, ಆಯ್ಕೆ ಮಾಡಿದ ಮತದಾರರು ಎಂತವರಪ್ಪಾ ಎಂದು ಜಗತ್ತಿನ ಜನ ಪ್ರಶ್ನೆ ಕೇಳಿಕೊಳ್ಳುತ್ತಿದ್ದಾರೆ. ಆದರೆ ಇಂದಿನ ವಿಶ್ವದಲ್ಲಿ ಟ್ರಂಪ್ ಏಕಾಂಗಿಯಲ್ಲ. ಇತ್ತೀಚೆಗೆ ಅವರ ಹುಚ್ಚಾಟಕ್ಕೆ ಬಲಿಯಾಗಿ ಕಕ್ಕಾಬಿಕ್ಕಿಯಾಗಿರುವ ಅವರ "ಆಪ್ತ ಮಿತ್ರ" ನಮ್ಮ ದೇಶದ ವಿಶ್ವಗುರುವೇ ಇದ್ದಾರಲ್ಲಾ. ಮೂರು ಪಂಚವಾರ್ಷಿಕ ಚುನಾವಣೆಗಳನ್ನು ಗೆದ್ದ ಅವರು ಮತ್ತು ಅವರ ಪಕ್ಷವನ್ನು 11 ವರ್ಷದಿಂದ ನೋಡುತ್ತಿದ್ದೇವೆ. ಆದರೆ ಅಷ್ಟೇ ಅಲ್ಲ, ಹತ್ತಾರು ಜನ ಇಂತಹ ಅಧ್ಯಕ್ಷ /ಪ್ರಧಾನಿಗಳು ಎದ್ದು ಕಾಣುತ್ತಿದ್ದಾರೆ. ಅಮೆರಿಕದಷ್ಟು ಬಲಶಾಲಿ ಅಲ್ಲದ್ದರಿಂದ ಅವರ ಹುಚ್ಚಾಟಗಳು ಅಷ್ಟೊಂದು ವಿಶ್ವ ಪ್ರಸಿದ್ಧ ಆಗಿಲ್ಲವಷ್ಟೇ.

ಇಂದು ಜಗತ್ತಿನಲ್ಲಿರುವ 196 ದೇಶಗಳಲ್ಲಿ ಕೆಲವೇ ದೇಶಗಳ ಹೊರತು, ಉಳಿದೆಲ್ಲ ದೇಶಗಳೂ ಪ್ರಜಾಪ್ರಭುತ್ವ ಎಂದು ಹೇಳಿಕೊಂಡಿವೆ. ಈ ಎಲ್ಲ ಪ್ರಜಾಪ್ರಭುತ್ವಗಳ ಕತೆಯೂ ಮೇಲಿನಂತಹ ದೇಶಗಳ ಬೆಳವಣಿಗೆಗಳ ಅಣ್ಣ ತಮ್ಮ, ಅಕ್ಕ ತಂಗಿಯರೇ ಎಂದು ಆಯಾ ದೇಶಗಳ ಜನರ ಕೆಟ್ಟ ಅನುಭವಗಳು ಹೇಳುತ್ತಿವೆ.


ಸುಮಾರು ನಾಲ್ಕು ಶತಮಾನದಷ್ಟು ಹಿಂದೆ ಜಗತ್ತು ರಾಜಪ್ರಭುತ್ವವನ್ನು ಕಿತ್ತೊಗೆದು ಪ್ರಜಾಪ್ರಭುತ್ವದ ಕಡೆಗೆ ಧಾವಿಸಿತು. ಈ 400 ವರ್ಷಗಳಲ್ಲಿ 25ನೆಯ ಶತಮಾನದ ಕೊನೆಯ ಅರ್ಧ ಶತಮಾನವೇ ಅದನ್ನು ವಿಶ್ವವ್ಯಾಪಿಯಾಗಿಸಿದ್ದು. ಪ್ರಜಾಪ್ರಭುತ್ವ ಸ್ಥಾಪನೆಯು ಮಾನವರ ಸಾಮಾಜಿಕ ಬೆಳವಣಿಗೆಯಲ್ಲಿ ಒಂದು ಮಹತ್ವದ ನೆಗೆತ ಎಂದು ಇತಿಹಾಸ ಸಾರಿದೆ. ಆದರೇಕೆ ಪ್ರಜಾಪ್ರಭುತ್ವ ಇಂತಹ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ವೈಪರೀತ್ಯಗಳಿಗೆ ಕಾರಣವಾಗಿದೆ? ಪ್ರಜಾಪ್ರಭುತ್ವದ ಮೂಲದಲ್ಲಿಯೇ ಇದಕ್ಕೆ ಕಾರಣ ಅಡಗಿದೆಯೇ? ಬ್ರಿಟನ್‌ನಲ್ಲಿ ಜಗತ್ತಿನ ಮೊದಲ ಪ್ರಜಾಪ್ರಭುತ್ವ ಸ್ಥಾಪನೆಯಾದುದರಿಂದ ಅಲ್ಲಿಯ ಪ್ರಜಾಪ್ರಭುತ್ವದ ಸ್ವರೂಪ, ಅದರ ಬೆಳವಣಿಗೆಯನ್ನು ವಿಶ್ಲೇಷಣೆ ಮಾಡಿದರೆ ಏನಾದರೂ ತಿಳಿಯಬಹುದೇ?

ಬ್ರಿಟನ್‌ನಲ್ಲಿ ಪ್ರಜಾಪ್ರಭುತ್ವದ ಸ್ವರೂಪ

ಬ್ರಿಟನ್‌ನಲ್ಲಿ 1640ರಿಂದ 1649ರವರೆಗೆ ನಾಲ್ಕಾರು ವರ್ಷದ ಯುದ್ಧ, ಹಲವರ ಪ್ರಾಣ ಬಲಿದಾನದ ಫಲವಾಗಿ ರಾಜರನ್ನು ಕಿತ್ತುಹಾಕಿದ್ದಾಯಿತು. ರಾಜನನ್ನು ಗಲ್ಲಿಗೇರಿಸಿದ್ದಾಯಿತು. ಮುಂದೆ! ಪ್ರಜಾಪ್ರಭುತ್ವ ಬಂತೇ? ರಾಜನನ್ನು ವಧಿಸಿದ ನಂತರ ಕ್ರೋಮ್‌ವೆಲ್ಲ ಸರ್ವಾಧಿಕಾರವನ್ನು ಸ್ಥಾಪಿಸಿದ. ಅವನ ನಿಧನದ ನಂತರ ಮತ್ತೆ ರಾಜಪ್ರಭುತ್ವದ ಸ್ಥಾಪನೆಯಾಯಿತು. 1688–89ರ ಸಮಯದಲ್ಲಿ ಹಾಲಂಡ್ ದೇಶದಿಂದ ಬ್ರಿಟಿಷ್ ರಾಜ ಮನೆತನಕ್ಕೆ ಸಂಬಂಧಿಸಿದ ರಾಜಮನೆತನದ ಕುಟುಂಬವೊಂದನ್ನು ಕರೆತಂದು, ಇಂಗ್ಲೆಂಡ್ ರಾಜ– ರಾಣಿಯರಾಗಿ ಪಟ್ಟಕ್ಕೇರಿಸಿದರು. ಅವರು ಪಾರ್ಲಿಮೆಂಟ್‌ನ ಅಧೀನದಲ್ಲಿ ಆಡಳಿತ ನಡೆಸಲು ಒಂದು ಶರತ್ತುಗಳ ಒಪ್ಪಂದಕ್ಕೆ ಸಹಿ ಹಾಕಿದರು.

ಇದನ್ನೇ ಬ್ರಿಟನ್‌ನ ಪ್ರಜಾಪ್ರಭುತ್ವ ಕ್ರಾಂತಿಯೆಂದು ಬ್ರಿಟಿಷ್ ಇತಿಹಾಸದಲ್ಲಿ ವೈಭವೀಕರಿಸಲಾಗಿದೆ. 1649ರಲ್ಲಿ ರಾಜನನ್ನು ಗಲ್ಲಿಗೇರಿಸಿ ಪ್ರಜಾಪ್ರಭುತ್ವ ಸ್ಥಾಪಿಸಲಾಯಿತು ಎಂಬ ವಿಚಾರವನ್ನು ಮರೆಮಾಚಲು 1688ರ ರಾಜನ ಜೊತೆ ರಾಜಿಯನ್ನು ವೈಭವೀಕರಿಸಲಾಗಿದೆ.

ಈ ರಾಜಿಯ ಭಾಗವಾಗಿ ವರ್ಷಕ್ಕೊಮ್ಮೆ ಪಾರ್ಲಿಮೆಂಟ್ ಸೇರಲೇಬೇಕು, ಬಜೆಟ್ ಅಂಗೀಕರಿಸಬೇಕು. ನಂತರ ಅಂಗೀಕೃತ ಬಜೆಟ್‌ಗೆ ಅನುಗುಣವಾಗಿಯೇ ತೆರಿಗೆ ಸಂಗ್ರಹಮಾಡಲು ಅಧಿಕಾರ ದೊರೆಯುತ್ತದೆ ಎಂಬ ಶರತ್ತುಗಳಿದ್ದವು. ವರ್ಷಕ್ಕೊಮ್ಮೆ ಸೇರಿ ಬಜೆಟ್ ಅಂಗೀಕರಿಸುವುದು ಆರಂಭವಾಯಿತು. ಆದರೆ ಈ ಪಾರ್ಲಿಮೆಂಟ್ ಎಂತಹುದು? ಪ್ರಜಾಪ್ರಭುತ್ವ ಕ್ರಾಂತಿಯ ಮೊದಲು ಯಾವ ಕಟ್ಟಲೆ, ಪದ್ಧತಿಗಳಗೆ ಅನುಗುಣವಾಗಿ ಪಾರ್ಲಿಮೆಂಟ್‌ನ ಎರಡೂ ಸದನಗಳು – ಸಾಮಂತರ, ಜಹಗೀರುದಾರರ ಸಭೆ – ಹೌಸ್ ಆಫ್ ಲಾರ್ಡ್ಸ್, – ಹೌಸ್ ಆಫ್ ಕಾಮನ್ಸ್ (ಇದನ್ನು ಸಾಮಾನ್ಯರ ಸಭೆ ಎಂದು ಅನುವಾದ ಮಾಡಲಾಗುವುದಿಲ್ಲ. ಏಕೆ ಎಂಬುದು ಮುಂದೆ ನಿಮಗೇ ತಿಳಿಯುತ್ತದೆ) ಸಭೆ ಸೇರುತ್ತಿದ್ದವು. ಹೌಸ್ ಆಫ್ ಕಾಮನ್ಸ್ ನಿರ್ದಿಷ್ಟ ತೆರಿಗೆ ನೀಡುವ ಸ್ವತಂತ್ರ ರೈತರು, ಭೂಮಾಲಿಕರಿಂದ, ನಗರ ಸಭೆಗಳ ಸದಸ್ಯರಿಂದ, ನಿರ್ದಿಷ್ಟ ಆದಾಯವುಳ್ಳ ಸ್ವತಂತ್ರ ವ್ಯವಹಾರ ನಡೆಸುವವರಿಂದ ಆಯ್ಕೆಯಾಗುತ್ತಿದ್ದರು. ಪ್ರತಿ ಜಿಲ್ಲೆಗೆ (ಕೌಂಟಿ) ಇಬ್ಬರಂತೆ, ನಗರಗಳಿಂದ ಒಬ್ಬರು, ಇಬ್ಬರಂತೆ ಆಯ್ಕೆ ಮಾಡುತ್ತಿದ್ದರು. ಪ್ರತಿ ಬಾರಿ ಈ ಪಾರ್ಲಿಮೆಂಟ್ ಸೇರುವ ಮೊದಲು ಕಾಮನ್ಸ್ ಸಭೆಯ ಸದಸ್ಯರನ್ನು ಆರಿಸಿ ಕಳಿಸಬೇಕೆಂದು ಆಯಾ ಜಿಲ್ಲೆಗಳ ಹಾಗೂ ನಗರಗಳ ಆಡಳಿತ ಮುಖ್ಯಸ್ಥರಿಗೆ ರಾಜನ ನಿರೂಪ ಕಳಿಸಲಾಗುತ್ತಿತ್ತು. ಅಂದರೆ ಪ್ರತಿ ವರ್ಷವೂ ಹೊಸ ಆಯ್ಕೆ. ಆಯ್ಕೆಯಾದ ಸದಸ್ಯರು ಒಂದು ಬಾರಿ ಮಾತ್ರ ಸಂಸತ್ ಸದಸ್ಯರಾಗಿರುತ್ತಿದ್ದರು.



ಈ ಆಸ್ತಿ, ಆದಾಯದ ನಿಬಂಧನೆಗಳಿಗೆ ಒಳಗಾಗಿ ಎಂಪಿಗಳನ್ನು ಆಯ್ಕೆಮಾಡುವ ಒಟ್ಟು ಮತದಾರರ ಸಂಖ್ಯೆ 10,000 ಮೀರುತ್ತಿರಲಿಲ್ಲ. ಇದು ಇಂಗ್ಲೆಂಡ್‌ನ ಒಟ್ಟು ಜನ ಸಂಖ್ಯೆಯ ಕೇವಲ ಶೇ. 1.5–2.0ರಷ್ಟಿತ್ತು. ಎಂದರೆ ಪ್ರಜಾಪ್ರಭುತ್ವ ಎಷ್ಟು ಘನಂದಾರಿ ಪ್ರಜಾಪ್ರಭುತ್ವವಾಗಿತ್ತು ಎಂಬುದು ಕಾಣುತ್ತದೆ. ಹೀಗೆ 1832ರವರೆಗೂ, ಅಂದರೆ ಒಂದೂವರೆ ಶತಮಾನದವರೆಗೂ ಮತದಾರರ ಪ್ರಮಾಣವನ್ನು ಇಷ್ಟೇ ಇರಿಸಲಾಗಿತ್ತು. ಲೆವಲರ್ಸ್ ದೇಶದ ಮತ್ತು ರಾಜಪ್ರಭುತ್ವವನ್ನು ಕಿತ್ತೆಸೆಯುವುದಕ್ಕಾಗಿ ಸೆಣೆಸಿದವರೆಲ್ಲರ ಮುಂದೆ ಮಂಡಿಸಿದ, ಜನತೆಯ ಸಾರ್ವಭೌಮತೆಯ ಹಕ್ಕು, 21 ವರ್ಷ ಮೇಲಿನ ಎಲ್ಲ ಪುರುಷರಿಗೂ ಸಾರ್ವತ್ರಿಕ ಮತದಾನದ ಹಕ್ಕಿಗೂ ಎಷ್ಟೊಂದು ಅಜಗಜಾಂತರ.

ಇತಿಹಾಸದ ವ್ಯಂಗ್ಯವೆಂದರೆ, ಕಾಮನ್ಸ್ ಸಭೆಯ ಸದಸ್ಯರು ಎಂದುಕೊಂಡವರಿಗೆ ಕಾಮನ್ ಜನತೆಯ, ದುಡಿಯುವ ಜನತೆಯ ನೈಜ ಪ್ರತಿನಿಧಿಗಳು ಕಾಮನ್ಸ್ ಸಭೆಗೆ ಪ್ರವೇಶಿಸಿಬಿಟ್ಟರೆ, ನೈಜ ಪ್ರಜಾಪ್ರಭುತ್ವ ಸ್ಥಾಪನೆಯಾಗಿಬಿಟ್ಟರೆ ಎಂಬ ಭಯ. ಅದರಿಂದಾಗಿ ಸಾಮಾನ್ಯ ಜನರು ಮತದಾರರಾಗದಂತೆ ಶತಮಾನಗಳ ಕಾಲ ತಡೆದರು. ಕಾಮನ್ಸ್ ಸಭೆ ಎಂಬ ಹೆಸರಿನ ಬೂಟಾಟಿಕೆಯನ್ನು ಇದು ಎತ್ತಿ ತೋರಿಸುತ್ತದೆ.

ಈ ಒಂದೂವರೆ ಶತಮಾನದಲ್ಲಿ ಆದ ಮುಖ್ಯ ಬದಲಾವಣೆಯೆಂದರೆ, 1694ರಲ್ಲಿ ಒಂದು ಕಾನೂನು ಅಂಗೀಕರಿಸಿ ಮೂರು ವರ್ಷಕ್ಕೊಮ್ಮೆ ಚುನಾವಣೆ ನಡೆಸಬೇಕೆಂದು, ಅದು ಹಿಂದಿನಂತೆಯೇ ವರ್ಷಕ್ಕೊಮ್ಮೆ ಸೇರಬೇಕೆಂದು ತೀರ್ಮಾನಿಸಲಾಯಿತು. ಅದರ ಪ್ರಕಾರ ಚುನಾವಣೆಗಳು ನಡೆಯಲಾರಂಭಿಸಿದವು. 1716ರಲ್ಲಿ ಏಳು ವರ್ಷಕ್ಕೊಮ್ಮೆ ಚುನಾವಣೆ ಎಂದು ತೀರ್ಮಾನಿಸಲಾಯಿತು. ಮತದಾರರ ಸಂಖ್ಯೆ ಎಂಬ ಅಡಿಪಾಯ/ ಆಧಾರವೇ ಅತ್ಯಂತ ದುರ್ಬಲವಾಗಿರುವ ಕಾಮನ್ಸ್ ಸದಸ್ಯರಿಗೆ ಬಲ ಕೊಡುವ ಕೆಲಸ ಮಾತ್ರ ಆಗಲಿಲ್ಲ. ಆದರೆ ಆಯ್ಕೆಯಾಗುವ ಸದಸ್ಯರ ಅವಧಿ, ಅವರ ಅಧಿಕಾರ ಮಾತ್ರ ಹೆಚ್ಚಾಗುತ್ತಾ ಹೋಯಿತು.

ರಾಜಕೀಯ ಪಕ್ಷಗಳು ಹುಟ್ಟಿದವು

ಮತ್ತೆ ಮತ್ತೆ ಚುನಾವಣೆ ಎದುರಿಸುವ ಪರಿಸ್ಥಿತಿ ಪ್ರಜಾಪ್ರಭುತ್ವದ ಅಡಿಪಾಯ ಎಂದು ಪರಿಗಣಿಸಲಾಗಿರುವ ನಿರ್ದಿಷ್ಟ ನೀತಿಗಳನ್ನು ಪ್ರತಿಪಾದಿಸುವ ರಾಜಕೀಯ ಪಕ್ಷಗಳು ಹುಟ್ಟಲು ಫಲವತ್ತಾದ ಪರಿಸ್ಥಿತಿ ನಿರ್ಮಾಣವಾಯಿತು. ಇಲ್ಲಿಯವರೆಗೂ ಸಂಸತ್ತಿನಲ್ಲಿ, ಮುಖ್ಯವಾಗಿ ಕಾಮನ್ಸ್ ಸಭೆಯಲ್ಲಿ ವಿವಿಧ ವರ್ಗ ಹಿತಾಸಕ್ತಿಗಳು ಗುಂಪುಗಳಾಗಿ ಕೆಲಸ ಮಾಡುತ್ತಿದ್ದವು. ಪಾರ್ಲಿಮೆಂಟ್ ನಲ್ಲಿ ರಾಜನ ಪರವಾದ ಒಂದು ಗುಂಪು, ರಾಜನ ವಿರುದ್ಧವಾಗಿದ್ದ ಗುಂಪಿನಲ್ಲಿ ರಾಜನ ಬಂಧನದ ನಂತರ ಎರಡು ಗುಂಪುಗಳಾದವು. ದೊಡ್ಡ ಶ್ರೀಮಂತರು, ಜಹಗೀರುದಾರರ ಪ್ರೆಸ್ಬಿಟೇರಿಯನ್ ಎಂಬ ಧಾರ್ಮಿಕ ಗುಂಪು, ಕ್ರೋಮ್‌ವೆಲ್ ನೇತೃತ್ವದ ಸಣ್ಣ ಭೂಮಾಲಕರು ಮತ್ತು ಸ್ವತಂತ್ರ ರೈತರ ಪ್ಯುರಿಟನ್ ಧಾರ್ಮಿಕ ಗುಂಪು ಎಂದು. ಲೆವಲರ್ಸ್‌ಗಳು ಮಾತ್ರ ತಮ್ಮದೇ ಸಿದ್ಧಾಂತ ಮತ್ತು ಸಂಘಟನೆಯ ಮೂಲಕ ರಾಜಕೀಯ ಪಕ್ಷವಾಗಿ ರೂಪುಗೊಂಡಿದ್ದರು. ಆದರೆ ಅವರಿಗೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ಇರಲಿಲ್ಲ. ಪ್ರಜಾಪ್ರಭುತ್ವ ಸ್ಥಾಪನೆಯ ನಂತರವೂ ಅವರಿಗೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ಸಿಗಲಿಲ್ಲ.

ಸಂಸತ್ತಿನಲ್ಲಿ ಪ್ರಾತಿನಿಧ್ಯ ಪಡೆದಿದ್ದ ಗುಂಪುಗಳು ಪುನರ್ ರೂಪ ಪಡೆದವು. ರಾಜಪ್ರಭುತ್ವದ ಮನಸೇಚ್ಛೆ ಆಡಳಿತದಿಂದ ಹಾನಿಗೊಳಗಾಗಿ ಪಾರ್ಲಿಮೆಂಟ್‌ನ ಪರಮಾಧಿಕಾರದ ಪರವಾಗಿದ್ದ ಬಂಡವಾಳಶಾಹಿ ಮತ್ತಷ್ಟು ದೊಡ್ಡದಾಗಿ ಬೆಳೆದಿತ್ತು. ಹಿಂದೆ ರಾಜನ ಬೆಂಬಲಿಗರಾಗಿದ್ದ ಗಣನೀಯ ಸಂಖ್ಯೆಯ ಜಹಗೀರುದಾರರು, ಭೂಮಾಲಕರು ಕೃಷಿ ಬಂಡವಾಳಶಾಹಿಗಳಾಗಿ ಪಾರ್ಲಿಮೆಂಟ್ ಪರಮಾಧಿಕಾರದ ಬೆಂಬಲಿಗರಾಗಿ ಪರಿವರ್ತನೆಗೊಂಡಿದ್ದರು. ಈ ಪಾರ್ಲಿಮೆಂಟ್ ಪರ ಪಕ್ಷ ವಿಗ್ ಪಕ್ಷವೆಂದು ಹೆಸರಾಯಿತು. ಇದು ಹಿಂದಿನಂತೆ ಚರ್ಚ್ ದಬ್ಬಾಳಿಕೆಯ ವಿರುದ್ಧವೂ ಆಗಿತ್ತು. ಅಮೆರಿಕ ಮೊದಲಾದ ವಸಾಹತುಗಳ ಪರವಾಗಿತ್ತು.

ಆದರೆ ಬಂಡವಾಳಶಾಹಿ ಬೆಳವಣಿಗೆ ಭೂಮಾಲಕರಿಗೆ ಮತ್ತು ಇತರ ಕೆಲ ವರ್ಗಗಳಿಗೆ ಸಮಸ್ಯೆಯಾಗಿತ್ತು. ಜೊತೆಗೆ ಪಾಳೆಯಗಾರಿ

ಪುಟ 4 ನೋಡಿ

ಸಂಪಾದಕೀಯ

ಮತಗಳ್ಳತನ – ಚುನಾವಣಾ ಆಯೋಗದಿಂದ ನಿಷ್ಪಕ್ಷಪಾತ ಮತ್ತು ದೃಢತೆಯಿಂದ ತನಿಖೆ ನಡೆಯಬೇಕಿದೆ. ನಡೆಯುವುದೆ?

ಭಾರತದ ಒಕ್ಕೂಟ ವ್ಯವಸ್ಥೆಗೆ ಅಪಾಯಗಳ ಬೆಟ್ಟವೇ ಅಪ್ಪಳಿಸುತ್ತಿದೆ. ಅದರಲ್ಲಿಯೂ ಬಿಜೆಪಿ ನೇತೃತ್ವದ ಒಕ್ಕೂಟ ಸರಕಾರವು ಅಧಿಕಾರಕ್ಕೆ ಬಂದಾಗಿನಿಂದ ಪೌರತ್ವದ ಪ್ರಶ್ನೆ, ಚುನಾವಣಾ ಪ್ರಶ್ನೆಗಳು ಸರ್ವಾಧಿಕಾರಿತ್ವಕ್ಕೆ ಇಂಬಾಗುವ ದಿಕ್ಕಿನಲ್ಲಿ ಹೊರಳಿಸಲ್ಪಡುತ್ತಿವೆ. ಒಂದು ದೇಶ ಒಂದು ಚುನಾವಣೆ, ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್)ಗಳು ದೇಶದ ಪ್ರಜಾಪ್ರಭುತ್ವದ ಹಕ್ಕುಗಳ ಮೇಲಿನ ದಾಳಿಯಾಗಿದೆ. ಜನರು ಚುನಾವಣೆಯ ಸಂದರ್ಭದಲ್ಲಿ ತಮಗೆ ಬೇಕಾದ ವ್ಯಕ್ತಿಗಳನ್ನು ತಮ್ಮ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಿ ಕಳಿಸುವರು. ಆಯ್ಕೆಯ ಪ್ರಕ್ರಿಯೆಯು ಪಾರದರ್ಶಕವಾಗಿರಬೇಕು. 18 ವರ್ಷ ವಯಸ್ಸಿನಿಂದ ಮೇಲ್ಪಟ್ಟ ಯಾವುದೇ ವ್ಯಕ್ತಿಯು ಈ ಮತದಾನವನ್ನು ನಿರ್ಭಯದಿಂದ ಚಲಾಯಿಸುವಂತಿರಬೇಕು. ಆದರೆ ಚುನಾವಣೆಯಲ್ಲಿ ಬಲಾಢ್ಯರು ಎಲ್ಲ ರೀತಿಯ ಅಕ್ರಮಗಳನ್ನು ನಡೆಸುವುದು ವ್ಯಾಪಕವಾಗಿದೆ. ಚುನಾವಣಾ ಆಯೋಗವು ಬಹಳಷ್ಟು ಸಂದರ್ಭದಲ್ಲಿ ಕಣ್ಣು ಕಿವಿಗಳನ್ನು ಮುಚ್ಚಿಕೊಂಡು ಕುಳಿತಿರುವುದಿದೆ. ಉತ್ತರ ಪ್ರದೇಶದಂತಹ ಕಡೆಯಲ್ಲಿ ಬಹಿರಂಗವಾಗಿಯೇ ಕೋಮುವಾದಿಗಳು, ಅಲ್ಪಸಂಖ್ಯಾತರು ಮತಗಳನ್ನು ತಮ್ಮ ಪಕ್ಷಕ್ಕೆ ಚಲಾಯಿಸದಿದ್ದರೆ ಬದುಕಿ ಉಳಿಯುವುದಿಲ್ಲ ಎಂಬ ಬೆದರಿಕೆ ಒಡ್ಡಿ ಮತ ಕಸಿದುಕೊಳ್ಳುವುದು ನಡೆದುಕೊಂಡು ಬಂದಿದೆ. ಭಯಗೊಳಿಸಿ, ದಬ್ಬಾಳಿಕೆ ನಡೆಸಿ, ಗೂಂಡಾಗಿರಿ ಎಸಗಿ ಮತಗಳನ್ನು ಕಿತ್ತುಕೊಳ್ಳುವುದು ಒಂದೆಡೆಯಾದರೆ, ಇನ್ನೊಂದೆಡೆ ಯಾವ ಬಟನ್ ಒತ್ತಿದರೂ ತಮ್ಮ ಪಕ್ಷಕ್ಕೇ ಮತ ಚಲಾಯಿಸುವಂತೆ ಇವಿಎಂ ಯಂತ್ರಗಳ ದುರ್ಬಳಕೆ ಮಾಡಿದ್ದರ ಬಗ್ಗೆ ಅನೇಕ ದೂರುಗಳಿವೆ. ಒಟ್ಟಿನಲ್ಲಿ ಜನತೆಯ ಅಭಿಪ್ರಾಯವನ್ನು ತಿರಸ್ಕರಿಸಿ, ತಮಗೆ ಬೇಕಾದ ರೀತಿಯಲ್ಲಿ ಮತಗಳನ್ನು ಪಡೆದುಕೊಳ್ಳುವ ಅನೇಕ ಅಡ್ಡ ಮಾರ್ಗಗಳನ್ನು ಅನುಸರಿಸಲಾಗುತ್ತಿದೆ.

ಕರ್ನಾಟಕದ ಬೆಂಗಳೂರಿನ ಮಹಾದೇವಪುರ ಮತಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಗಳ್ಳತನದ ಬಗ್ಗೆ ವಿವರವಾದ ಅಂಕಿಸಂಖ್ಯೆಗಳನ್ನು ಒಳಗೊಂಡ ದಾಖಲೆಗಳನ್ನು, ಲೋಕಸಭೆಯ ವಿರೋಧ ಪಕ್ಷದ ನಾಯಕರು ಬಹಿರಂಗಪಡಿಸಿದ್ದಾರೆ. ಅಧ್ಯಯನ ನಡೆಸಿ ಶೋಧಿಸಲಾಗಿ ಫಾರಂ 6 ದುರುಪಯೋಗ ಮಾಡಿಕೊಂಡು 33,692 ಮತಗಳನ್ನು ಚಲಾಯಿಸಲಾಗಿದೆಯಂತೆ. ಒಂದಕ್ಕಿಂತ ಹೆಚ್ಚು ಕಡೆ ತಮ್ಮ ಹೆಸರು ನೊಂದಾಯಿಸಿಕೊಂಡವರು 11,965 ಇದ್ದರೆ, ಗುರುತು ಹಿಡಿಯಲು ಸಾಧ್ಯವೇ ಇಲ್ಲದಂತಹ ಫೋಟೊಗಳಿರುವವರು ಮತದಾನ ಮಾಡಿದ್ದು 4,132. ನಕಲಿ ವಿಳಾಸ ಹೊಂದಿರುವ ಮತದಾರರು 40,009 ಇದ್ದರೆ, ಒಂದೇ ವಿಳಾಸದಲ್ಲಿ ಇದ್ದ ಮತದಾರರ ಪ್ರಮಾಣವು 10,452. ಎಲ್ಲವೂ ಸೇರಿಸಿದರೆ ಒಂದು ಸಂಸತ್ ಮತಕ್ಷೇತ್ರದಲ್ಲಿ ನಡೆದ ಮತಗಳ್ಳತನವು 1,00,250. ಇದು ದೊಡ್ಡ ಪ್ರಮಾಣದ ಮತಗಳ್ಳತನವೇ ಆಗಿದೆ. ಮಹಾದೇವಪುರ ಮತಕ್ಷೇತ್ರದಲ್ಲಿ ಸ್ಪರ್ಧೆ ಮಾಡಿರುವ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಗೆಲುವಿನ ಅಂತರವು ಕೇವಲ 32,707 ಆಗಿದ್ದು, ಬಿಜೆಪಿ ಗೆಲುವು ಸಾಧಿಸಿದೆ. ಆದರೆ ಈ ಗೆಲುವು ಸಂಭವಿಸಿದ್ದು ಮತಗಳ್ಳತನದಿಂದ ಎಂಬುದನ್ನು ದಾಖಲೆಗಳು ಸಾಬೀತುಗೊಳಿಸುತ್ತವೆ. 10,000ಕ್ಕೂ ಹೆಚ್ಚು ಮತದಾರರು ಒಂದೇ ವಿಳಾಸದಲ್ಲಿ ಇದ್ದಿರುವುದಂತೂ ಮತಗಳ್ಳತನಕ್ಕೆ ಬಲವಾದ ಸಾಕ್ಷಿ ಒದಗಿಸುತ್ತದೆ. ಒಂದು ಮತಕ್ಷೇತ್ರ ಅಧ್ಯಯನ ಮಾಡಿದಲ್ಲಿ ದೊರೆತ ಈ ಅಂಕಿಸಂಖ್ಯೆಗಳು ಭಾರತದ ಚುನಾವಣಾ ವ್ಯವಸ್ಥೆಯೇ ಹದಗೆಟ್ಟಿರುವುದಕ್ಕೆ ಬಲವಾದ ಸಾಕ್ಷಿಗಳನ್ನು ಒದಗಿಸುತ್ತದೆ. ಇದು ಚುನಾವಣಾ ಆಯೋಗದ ಪಾರದರ್ಶಕತೆಯತ್ತ ಬೆರಳು ಮಾಡುತ್ತದೆ. ಬಿಜೆಪಿಯೊಂದಿಗಿನ ಅದರ ಒಳ ಒಪ್ಪಂದದ ಅನುಮಾನಗಳನ್ನು ದಟ್ಟವಾಗಿಸುತ್ತದೆ. ಹಾಗೆಯೇ ಈ ಅಧ್ಯಯನವು ಮತದಾರರ ಪಟ್ಟಿಯನ್ನು ಚುನಾವಣೆಯ ಮುನ್ನವೇ ಗಂಭೀರವಾಗಿ ಅಧ್ಯಯನ ಮಾಡಬೇಕಾದ ಅಗತ್ಯತೆಯನ್ನು ಮನಗಾಣಿಸುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮತಗಳ್ಳತನದ ಅಕ್ರಮವನ್ನು ಬಿಜೆಪಿಯ ಕೇಂದ್ರ ಸರಕಾರವು ತನ್ನ ಸರ್ವಾಧಿಕಾರತ್ವ ಸ್ಥಾಪನೆಗಾಗಿ ಅತ್ಯಂತ ನಿರ್ಭಯದಿಂದ ನಡೆಸುತ್ತಿದೆ ಎಂಬುದು ಇದರಿಂದ ರುಜುವಾಗುತ್ತದೆ. ಬಿಜೆಪಿಯು ದೇಶವನ್ನು ಸಂಪೂರ್ಣ ದಿವಾಳಿಗೊಳಿಸಲು ಅದು ಕೋಮುವಿಭಜನೆಗೊಳಿಸಿದೆ ಮತ್ತು ಒಂದು ಕೋಮಿನವರ ಮತದಾನದ ಹಕ್ಕನ್ನೇ ಕಿತ್ತುಕೊಳ್ಳುತ್ತಿರುವುದು ಎಸ್ಐಆರ್ (ವಿಶೇಷ ಸಮಗ್ರ ಪರಿಷ್ಕರಣೆ) ಮೂಲಕ. ಚುನಾವಣಾ ಆಯೋಗವು ಬಿಹಾರದಲ್ಲಿನ ಈ ಎಸ್ಐಆರ್ ಅನ್ನು ಇಡೀ ದೇಶಕ್ಕೆ ವಿಸ್ತರಿಸಲು ಹೊರಟಿದೆ. ಅಂದರೆ ಬಿಜೆಪಿಗೆ ಮತ ಚಲಾಯಿಸುವ ಮತದಾರರನ್ನು ಅಕ್ರಮವಾಗಿ ಪಟ್ಟಿಯಲ್ಲಿ ಸೇರಿಸುವುದು ಮತ್ತು ತಮಗೆ ಮತ ಕೊಡದ ಸಮುದಾಯದವರ ಮತದಾನದ ಹಕ್ಕುಗಳನ್ನೇ ಕಿತ್ತು ಹಾಕುವುದು. ಇಂತಹ ಅತ್ಯಂತ ಅಪಾಯಕಾರಿಯಾದ ನಡೆಗೆ ತಕ್ಕಂತೆ ಚುನಾವಣಾ ಆಯೋಗವು ಹೆಜ್ಜೆ ಹಾಕುತ್ತಿದೆ. ಇದೆಲ್ಲವೂ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒದಗಿದ ಗಂಡಾಂತರವೇ ಆಗಿದೆ. ಬಂಡವಾಳಶಾಹಿ ಪರವಾದ ಇಂತಹ ವ್ಯವಸ್ಥೆಯೊಳಗಿನ ಟೊಳ್ಳನ್ನು ಇದು ಅನಾವರಣಗೊಳಿಸಿದಂತೆ.

ಮಹಾರಾಷ್ಟ್ರದಿಂದಲೂ ಇಂತಹದೇ ವರದಿಯೊಂದು ಬಂದಿದೆ. ಅಲ್ಲಿ ಚುನಾವಣಾ ಆಯೋಗವು ಬಿಡುಗಡೆ ಮಾಡಲಾದ ಮತದಾರರ ಪಟ್ಟಿ ಸಹ ಅನೇಕ ಅನುಮಾನಗಳನ್ನು ಹುಟ್ಟುಹಾಕುತ್ತದೆ ಮತ್ತು ಚುನಾವಣಾ ಆಯೋಗದತ್ತಲೇ ಬೆರಳು ಮಾಡುತ್ತದೆ. ಮಹಾರಾಷ್ಟ್ರದ ಒಟ್ಟು ಮತದಾರರು 9,64,85,765. ನವೆಂಬರ್ 2024ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ 6,27,35,044.403 ಮತದಾನ ಮಾಡಿದ್ದಾರೆ ಎಂದು ಅಂತಿಮ ಪಟ್ಟಿ ಹೇಳುತ್ತದೆ. 403 ಎಂಬ ಅಂಕಿಅಂಶವು ಏನನ್ನು ಸೂಚಿಸುತ್ತದೆ? ಹೀಗಿರಲು ಸಾಧ್ಯವೇ ಇಲ್ಲ. ಯಾರಾದರೂ ಅರ್ಧ ಮತದಾನ ಮಾಡುವರೆ? ಆದರೆ ಇದೇ ಚುನಾವಣಾ ಆಯೋಗವು ಒಟ್ಟು ಪ್ರತಿಶತದಲ್ಲಿ ಹೇಳುವಾಗ 65.02% ಮತದಾನ ಆಗಿದೆ ಎನ್ನುತ್ತದೆ. ಇದೇ ಚುನಾವಣಾ ಆಯೋಗವು ಒಟ್ಟು ಮತದಾನದ ಸಂಖ್ಯೆ ಹೇಳುವಾಗ 6,40,88,195 ಎಂದು ಹೇಳುತ್ತದೆ. ಮತದಾನ ಮತ್ತು ಮತದಾರರ ನಡುವಿನ ವ್ಯತ್ಯಾಸವು 13,53,151 ಆಗಿರುತ್ತದೆ. ಹಾಗಾದರೆ ಯಾವುದು ಸತ್ಯ? ಅಂಕಿಸಂಖ್ಯೆಯ ಪ್ರತಿಶತ ಸತ್ಯವೆ? ಮತದಾರರ ಪಟ್ಟಿಯ ಸಂಖ್ಯೆ ಸತ್ಯವೆ? 13,53,151 ಮತದಾರರು ಎಲ್ಲಿಂದ ಹೇಗೆ ಬಂದರು? ಇನ್ನೂ ಆಸಕ್ತಿದಾಯದವೆಂದರೆ ಚುನಾವಣಾ ಆಯೋಗದ ಪ್ರಕಾರ 2024ರ ಲೋಕಸಭಾ ಚುನಾವಣೆಯಲ್ಲಿ 9,23,56,251 ಮತದಾರರು ಇರುವರು. ಅದೇ ವರ್ಷದ ವಿಧಾನಸಭಾ ಚುನಾವಣೆಯಲ್ಲಿ 9,64,85,765 ಮತದಾರರಿದ್ದಾರೆ ಎಂದು ಇದೇ ಚುನಾವಣಾ ಆಯೋಗ ಹೇಳುತ್ತದೆ. ಲೋಕಸಭೆಯಿಂದ ವಿಧಾನಸಭೆ ಚುನಾವಣೆಯ ಅಂತರವು ಕೇವಲ ಆರು ತಿಂಗಳು ಮಾತ್ರ. ಅಂದರೆ ಈ ಆರು ತಿಂಗಳಲ್ಲಿಯೇ 41,29,514ರಷ್ಟು ಮತದಾರರು ಹೆಚ್ಚಾಗುತ್ತಾರೆ. ಆದರೆ ಇದೇ ಸಂದರ್ಭದಲ್ಲಿ 2019ರ ಲೋಕಸಭಾ ಚುನಾವಣೆಯಲ್ಲಿ ಚುನಾವಣಾ ಆಯೋಗವು ಬಿಡುಗಡೆ ಮಾಡಿದ್ದು 8,73,30,484 ಮತದಾರರ ಪಟ್ಟಿ. 2024ರ ಲೋಕಸಭಾ ಚುನಾವಣೆಯಲ್ಲಿ ಅಂದರೆ ಐದು ವರ್ಷಗಳ ಅಂತರದಲ್ಲಿ ಚುನಾವಣಾ ಆಯೋಗದ ಪಟ್ಟಿಯ ಪ್ರಕಾರ 9,23,56,251 ಮತದಾರರ ಸಂಖ್ಯೆ ಇರುವುದು. ಐದು ವರ್ಷದ ಅಂತರದಲ್ಲಿ ಹೆಚ್ಚಳವಾಗಿದ್ದು 50,25,767. ಹಾಗಾದರೆ ಐದು ತಿಂಗಳ ಅಂತರದಲ್ಲಿ (ಎಪ್ರಿಲ್ 2024ರಿಂದ ಆಗಸ್ಟ್ 2024) 41,29,514 ಅದು ಹೇಗೆ ಹೆಚ್ಚಳವಾದರು? ಐದು ವರ್ಷದಲ್ಲಿಯೂ ಸರಿಸುಮಾರು ಐವತ್ತು ಲಕ್ಷ ಮತ್ತು ಆರು ತಿಂಗಳಲ್ಲಿಯೂ ಸರಿಸುಮಾರು 42 ಲಕ್ಷದ ಹತ್ತಿರ!!? ಏಜೆನ್ಸಿಗಳ ಮೂಲಕ ಈ ಜಾದು ಮಾಡಿರಬಹುದು. ಚುನಾವಣಾ ಆಯೋಗವು ಇದರ ಬಗ್ಗೆ ಏನು ಹೇಳುತ್ತದೆ. ಇದೆಲ್ಲವೂ ಅಧ್ಯಯನ ಮಾಡಲೇಬೇಕಾದ ಅಂಶವಾಗಿದೆ.

ಚುನಾವಣಾ ಆಯೋಗವು ಕೂಡಲೇ ಇದೆಲ್ಲವನ್ನೂ ಗಂಭೀರವಾಗಿ ಪರಿಗಣಿಸಿ ಸೂಕ್ತ ತನಿಖೆ ನಡೆಸಬೇಕು. ಚುನಾವಣಾ ಆಯೋಗವೂ ಉತ್ತರದಾಯಿತ್ವವಿದ್ದಾಗ ಹೇಗೆ ಎಂಬ ಪ್ರಶ್ನೆ ಸಹಜವಾಗಿದೆ. ಆಗ ಜನಾಂದೋಲನ ಅನಿವಾರ್ಯ.

ಮಾಧ್ಯಮಗಳ ಮೇಲೆ ಧಾಳಿ ಬಾಯಿ ಮುಚ್ಚಿಸುವ ಭಯ ಉತ್ಪಾದನೆ

‘ವಿನಾಶ ಕಾಲೇ ವಿಪರೀತ ಬುದ್ಧಿ’ ಎಂಬ ಜನಪ್ರಿಯ ಮಾತಿದೆ. ಅದಃಪತನಕ್ಕೆಳಿಸಿದ ಸ್ಥಾಪಿತ ಹಿತಾಸಕ್ತಿಗಳು ತಮ್ಮ ರಕ್ಷಣೆಗಾಗಿ ಮಾಡುವ ತಂತ್ರ ಕುತಂತ್ರಗಳು ಎಲ್ಲೆಗಳನ್ನು ಮೀರಿ ಮತ್ತಷ್ಟು ಮತ್ತಷ್ಟು ಅಂತಹುದೇ ದೌರ್ಜನ್ಯಕ್ಕೆ ಇಳಿಯುವುದು ಇಂತಹ ವಿಪರೀತ ಬುದ್ಧಿ ವಿನಾಶಕಾಲದ ಹೊತ್ತಿನಲ್ಲಿ ಬರುತ್ತದೆ ಎನ್ನುವುದನ್ನು ಹೀಗೆ ಹೇಳಲಾಗುತ್ತದೆ. ಈ ಮಾತು ಧರ್ಮಸ್ಥಳದ ಪುಂಡರಿಗೆ, ಗುಂಡಾಗಳಿಗೆ ಸಾಂದರ್ಭಿಕವಾಗಿ ಒಪ್ಪುವ ಮಾತು.

ಮೊನ್ನೆ ಬಿಗ್ ಬಾಸ್ ಖ್ಯಾತಿಯ ಮಾಜಿ ಸ್ಪರ್ಧಿಯಾಗಿದ್ದ ನಟ ರಜತ್ ಅವರು 2025 ಆಗಸ್ಟ್ 7 ರಂದು ಧರ್ಮಸ್ಥಳದ ಪಂಗಡ ಗ್ರಾಮದಲ್ಲಿರುವ ಸೌಜನ್ಯ ಅವರ ಮನೆಗೆ ಭೇಟಿ ನೀಡಿದ್ದರು. ಅವರನ್ನು ಸಂದರ್ಶಿಸಲು ಬಂದಿದ್ದ ಯುಟ್ಯೂಬ್ ವಾಹಿನಿಯ ವರದಿಗಾರರ ಮೇಲೆ ಇದ್ದಕ್ಕಿದ್ದಂತೆ ಜಮಾಯಿಸಿದ ಗುಂಡಾಗಳ ಗುಂಪು ಮಾರಣಾಂತಿಕವಾದ ಹಲ್ಲೆ ನಡೆಸಿದೆ. ಈ ಮಾರಣಾಂತಿಕ ದಾಳಿಯಲ್ಲಿ ನಾಲ್ಕು ಜನ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ.




‘ಈ ವರದಿಗಾರರು ಧರ್ಮಸ್ಥಳದ ಮೇಲೆ ಧರ್ಮಾಧಿಕಾರಿ ಮತ್ತು ಅವರ ಕುಟುಂಬದ ಮೇಲೆ ಅವಹೇಳನಕಾರಿಯಾಗಿ ಸುದ್ದಿ ಹಂಚುತ್ತಿದ್ದಾರೆ, ಜನತೆಯನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ, ಧರ್ಮದ ಮೇಲಿನ ದಾಳಿಯನ್ನು ಕಂಡುದೆ ರೋಸಿದ ಗ್ರಾಮಸ್ಥರು ಈ ದಾಳಿಯನ್ನು ಅನಿವಾರ್ಯವಾಗಿ ನಡೆಸಿದ್ದಾರೆ. ಇನ್ನಾದರೂ ಬುದ್ಧಿ ಕಲಿಯಬೇಕು’ ಎಂದು ಅವರು ಹೇಳುತ್ತಿದ್ದಾರೆ. ಈ ಗುಂಪು ಗೂಂಡಾಗಿರಿ ಮಾಡುತ್ತಿರುವಾಗಲೂ ಅತ್ಯಂತ ಅಸಹ್ಯಕರ ಅಶ್ಲೀಲವಾಗಿ ಬೈಯ್ಯುತ್ತಾ ಮನಸ್ಸಿಗೆ ಬಂದಂತೆ ಥಳಿಸಿ ಅವರನ್ನು ತುಳಿದು ಹಾಕಿದ್ದಾರೆ. ಅಲ್ಲಿರುವ ಕ್ಯಾಮೆರಾಗಳನ್ನು ಪುಡಿ ಪುಡಿಮಾಡಿ, ಅದರಲ್ಲಿರುವ ಮೆಮೊರಿ ಕಾರ್ಡನ್ನು ಎತ್ತಿಕೊಂಡು ಹೋಗಿದ್ದಾರೆ! ಇದು ಉಗ್ರ ಖಂಡನೀಯ.

ಧರ್ಮಸ್ಥಳ, ಧರ್ಮ ಮತ್ತು ಅಲ್ಲಿಯ ದೇವರುಗಳ ಮೇಲೆ, ಧರ್ಮಾಧಿಕಾರಿಗಳ ಮೇಲೆ ಅವಹೇಳನಕಾರಿ ಪ್ರಚಾರ ಮಾಡುತ್ತಿದ್ದಾರೆ ಎಂದು ಹೇಳುವ ಈ ‘ಮುಖೇಡಿ’ಗಳ ನಿಜವಾದ ಉದ್ದೇಶವಾದರೂ ಏನು? ಮುಚ್ಚಿಹಾಕಬೇಕು ಎಂದಿರುವ ಪ್ರಕರಣಕ್ಕೆ ಮತ್ತೆ ಮರುಜೀವ ಬಂದಿದ್ದೇ, ವಿಶೇಷ ತನಿಖಾ ದಳ (ಎಸ್.ಐ.ಟಿ.) ರಚನೆಯಾಗಿ ತನ್ನದೇ ಆದ ಗತಿಯಲ್ಲಿ ತನಿಖೆ–ಶೋಧನೆ ನಡೆಸುತ್ತಿದೆ. ಹೀಗಿರುವಾಗ ಸ್ಥಳೀಯರು ಎನ್ನುವ ಗೂಂಡಾ ಪಡೆಯ ಉದ್ದೇಶವಾದರೂ ಏನು? ಇಲ್ಲಿರುವ ಅನೇಕ ಸಂಗತಿಗಳನ್ನು ಮುಚ್ಚಿಹಾಕಿರುವ ಮತ್ತು ಎಲ್ಲವನ್ನು ಮರೆಮಾಚಿ ತೆರೆ ಮರೆ ರಕ್ಷಿಸಲು ಬಯಸುವ ಹಿತಾಸಕ್ತಿಗಳ ಆಟ ನಡೆಯದಂತೆ ಮಾಡಿದ್ದು ಈ ಪರ್ಯಾಯ ಮಾಧ್ಯಮವಾಗಿ ಬೆಳೆದಿರುವ ಯೂಟ್ಯೂಬರ್ ಗಳು. ಈಗಲೂ ಪ್ರತಿದಿನವೂ ಹೇಗೋ ಏನೋ, ದೊರೆತ ಮಾಹಿತಿಗಳನ್ನು ಕೂಡಲೇ ಎಲ್ಲರ ನಡುವಿನಲ್ಲಿ ಹಂಚಿಕೊಂಡು ವಿಷಯಗಳನ್ನು ಜೀವಂತವಾಗಿ ಇಟ್ಟಿರುವುದೇ ಈ ಯೂಟ್ಯೂಬರ್ ಗಳು. ಈ ಭಯ ಉತ್ಪಾದನೆಯ ಉದ್ದೇಶ ಇಲ್ಲಿನ ವಿಷಯಗಳ ಸತ್ಯನಿಷ್ಠ ವರದಿಯು ಹೊರಗೆ ತಿಳಿಯಬಾರದು, ಸುದ್ದಿ ಹೊರ ಹಾಕಬಾರದು ಎಂದು ಅಲ್ಲವೇ!?

ಯೂಟ್ಯೂಬ್ ಚಾನಲ್ ಗಳು ಪ್ರತಿ ದಿನವೂ, ಪ್ರಮುಖ ಬೆಳವಣಿಗೆ ಇರುವಾಗ ಅಲ್ಲಿ ನಡೆಯುತ್ತಿರುವ ಪ್ರಮುಖ ಘಟನೆಗಳನ್ನು ವಿವರವಾಗಿ ಜನರಿಗೆ ತಲುಪಿಸುತ್ತಿವೆ. ಇದು ಅವರ ಹಿತಾಸಕ್ತಿಗೆ ಭಂಗ ತರುತ್ತಿದೆ. ಇವರ ಬಾಯಿ ಮುಚ್ಚಿಸಲು ನ್ಯಾಯಾಲಯಕ್ಕೆ ಹೋಗಿ ಆದೇಶವನ್ನು ಎಲ್ಲ ಮಾಧ್ಯಮಗಳ ಮೆಲೆಯೇ ನಿರ್ಭಂದಕಾಜ್ಞೆ, ಹೆಗ್ಗಡೆ ಅವರ ಸಹೋದರ ತಂದರು. ಆದರೆ ಕೆಳಗಿನ ಸಿಟಿ ಕೋರ್ಟಿನ ತೀರ್ಪನ್ನು ಹೈಕೋರ್ಟ್ ಟೀಕಿಸಿ ಆ ನಿರ್ಬಂಧವನ್ನು ತೆರವುಗೊಳಿಸಿತು. 800ಕ್ಕೂ ಅಧಿಕ ಜನರ ಮೇಲೆ ಮತ್ತು ಯೂಟ್ಯೂಬರ್ ಗಳ ಮೇಲೆ ಸುದ್ದಿ ಪ್ರಸಾರ ಮಾಡದಂತೆ ನಿರ್ಬಂಧ ವಿಧಿಸಿದ್ದ ಸಿಟಿ ಸಿವಿಲ್ ಕೋರ್ಟಿನ ನ್ಯಾಯಾಧೀಶರ ಹಿನ್ನೆಲೆಯೂ ಬಯಲಾಯಿತು. ಆದೇಶ ಹೊರಡಿಸಿದ್ದ ನ್ಯಾಯಾಧೀಶರು ಇದೇ ಧರ್ಮಸ್ಥಳದ ದೊಡ್ಡವರ ಆಡಳಿತವಿರುವ ಕಾಲೇಜಿನಲ್ಲಿ ಕಾನೂನು ಪದವಿ ವ್ಯಾಸಂಗ ಮಾಡಿದ್ದಾರೆ ಎಂಬುದು, ಅದಕ್ಕಿಂತಲೂ ಈ ದೊಡ್ಡವರ ಕೇಸ್ ಗಳನ್ನು ನಡೆಸುತ್ತಿದ್ದ ಕಚೇರಿಯ ತಂಡದಲ್ಲಿ ಕೆಲಸ ಮಾಡುತ್ತಿದ್ದರು ಎಂಬ ಗಂಭೀರ ವಿಷಯ ಹೊರಬಂತು. ಇದು ಯಾವಾಗ

ಪುಟ 11ನೋಡಿ



ಹಿರೋಷಿಮಾ–ನಾಗಸಕಿ ಮೇಲಿನ ಬಾಂಬ್ ದಾಳಿ ಮಾನವ ಇತಿಹಾಸದಲ್ಲೇ ನಡೆದ ಅತ್ಯಂತ ಘೋರ

ಗುರುರಾಜ ದೇಸಾಯಿ

ಜಗತ್ತಿನಲ್ಲಿ ಗತಿಸಿದ ಯುದ್ಧಗಳಿಂದ ಸತ್ತವರ ಸಂಖ್ಯೆ ಲೆಕ್ಕಕ್ಕೆ ಸಿಗದು. ಯುದ್ಧದಿಂದ ಪಡೆದುಕೊಂಡಿದ್ದಕ್ಕಿಂತ ಕಳೆದುಕೊಂಡಿದ್ದೆ ಹೆಚ್ಚು. ಅನೇಕ ಸಮುದಾಯಗಳು ಇಲ್ಲವಾಗಿದ್ದಲ್ಲದೆ ಕುಟುಂಬಗಳನ್ನೇ ಸರ್ವನಾಶ ಮಾಡಿದೆ. ಹಿರೋಷಿಮಾ–ನಾಗಸಕಿ ಮೇಲೆ ನಡೆದ ಬಾಂಬ್ ದಾಳಿಯು ಮಾನವ ಇತಿಹಾಸದಲ್ಲೇ ನಡೆದ ಅತ್ಯಂತ ಘೋರ ಸಂಗತಿ. ಈ ಹೃದಯ ಕಲುಕುವ ಘಟನೆ ನಡೆದು ಎಂಟು ದಶಕಗಳು ಕಳೆದಿವೆ.

1945ರಲ್ಲಿ ನಡೆದ ಎರಡನೇ ಮಹಾಯುದ್ಧದ ಸಮಯದಲ್ಲಿ, ಅಮೇರಿಕಾ ಸಂಯುಕ್ತ ಸಂಸ್ಥಾನವು ಅವಳಿ ನಗರಗಳ ಮೇಲೆ ಪರಮಾಣು ಬಾಂಬ್ ಸ್ಫೋಟಿಸಿ, ಆ ನಗರಗಳ ವಿನಾಶಕ್ಕೆ ಕಾರಣವಾಗಿತ್ತು. ಆಗಸ್ಟ್ 6, 1945ರಂದು ಅಮೆರಿಕವು 'ಲಿಟಲ್ ಬಾಯ್' ಹೆಸರಿನ ಪರಮಾಣು ಅಸ್ತ್ರವನ್ನು ಜಪಾನ್‌ನ ಹಿರೋಷಿಮಾ ಮೇಲೆ ಪ್ರಯೋಗಿಸಿತ್ತು. ಆಗ ಬೆಳಿಗ್ಗೆ ಸುಮಾರು 8.15 ಆಗಿತ್ತು. ಇದಾಗಿ ಮೂರು ದಿನಕ್ಕೆ, ಅಂದರೆ ಆಗಸ್ಟ್ 9ಕ್ಕೆ ನಾಗಸಾಕಿಯ ಮೇಲೆ 'ಫ್ಯಾಟ್ ಮ್ಯಾನ್' ಬಾಂಬ್ ದಾಳಿ ನಡೆಯಿತು. ಒಟ್ಟಾರೆ ಈ ದಾಳಿಯಲ್ಲಿ ಅಂದಾಜು ಎರಡು ಲಕ್ಷದ ಮೂವತ್ತು ಸಾವಿರ ಜನರ ದುರ್ಮರಣವಾಯಿತು. ಕೆಲ ದಿನಗಳು ಗತಿಸಿದ ನಂತರ ಅಣು ವಿಕಿರಣಗಳಿಂದಾಗಿ ಕ್ಯಾನ್ಸರ್ ನಂಥ ಖಾಯಿಲೆಗಳಿಗೆ ಬಲಿಯಾದವರು ಅಂದಾಜು ಐದು ಲಕ್ಷ ಮಂದಿ. ಈ ಘಟನೆಗಳು ನಡೆದು ಎಷ್ಟೋ ವರ್ಷಗಳ ಬಳಿಕವೂ ಅದರ ಪರಿಣಾಮವನ್ನು ಅಲ್ಲಿನ ಜನರು ಅನುಭವಿಸುತ್ತಿದ್ದಾರೆ. ಆ ಘಟನೆಯಲ್ಲಿ ಬದುಕಿ ಉಳಿದವರು ಹೀನಾಯವಾಗಿ ಬದುಕು ಕಳೆಯುವಂತಾಗುತ್ತದೆ.

ಹಿರೋಷಿಮಾ–ನಾಗಸಕಿ ಘಟನೆಯ ನಂತರ ಮನುಕುಲ ಇನ್ನೂ ಪಾಠ ಕಲಿತಿಲ್ಲ. ಅದು ಮತ್ತೆ ಮತ್ತೆ ಯುದ್ಧ ಬಯಸುತ್ತಲೇ ಇದೆ. ಯುದ್ಧದ ಸಮಯದಲ್ಲಿ ಲಕ್ಷಾಂತರ ಜನರ ಸಾವನ್ನು ಕಂಡು ತನ್ನ ಗೆಲುವನ್ನು ಸಂಭ್ರಮಿಸಿವುದರ ಬದಲು "ನಾನೇನು ಮಾಡಿ ಬಿಟ್ಟೆ ?" ಎಂದು ಉದ್ಗಾರ ತೆಗೆದು ಕಣ್ಣೀರಿಟ್ಟ ಅಶೋಕನಂಥ ಅರಸ ಮತ್ತೆ ಈ ಜಗತ್ತಿನಲ್ಲಿ ಎಲ್ಲೂ ಹುಟ್ಟಲೇ ಇಲ್ಲ.

ನಾಗಸಾಕಿಯಲ್ಲಿ ಅಂಚೆವಿತರಣೆ ಮಾಡುತ್ತಿದ್ದ 16 ವರ್ಷ ವಯಸ್ಸಿನ ಸುಮಿತೇರು ತಾನಿಗುಚಿಯವರ ಬೆನ್ನು ಮತ್ತು ಎಡಗೈಗೆ ಭೀಕರ ಸುಟ್ಟಗಾಯಗಳು ಉಂಟಾಗಿದ್ದು, ಅದು ಸರಿಯಾಗಿ ಗುಣವಾಗಲು ವರ್ಷಗಳೇ ಬೇಕಾಯಿತು. "ಪರಮಾಣು ಶಸ್ತ್ರಾಸ್ತ್ರಗಳು ಎಂದಿಗೂ ಮಾನವೀಯತೆಯನ್ನು ಉಳಿಸುವುದಿಲ್ಲ" ಎಂದು ಅವರು ಸಾಯುವವರೆಗೂ ಪ್ರಚಾರ ಮಾಡಿದರು.

ಇತ್ತೀಚಿನ ವರ್ಷಗಳಲ್ಲಿ ಮಧ್ಯಪ್ರಾಚ್ಯದ 22 ದೇಶಗಳು ಒಂದಲ್ಲ ಒಂದು ರೀತಿಯಲ್ಲಿ ಯುದ್ಧದ ಕೆನ್ನಾಲಿಗೆಗೆ ಬಲಿಯಾಗುತ್ತಲೇ ಬಂದಿವೆ. 80ರ ದಶಕದಲ್ಲಿ ನಡೆದ ಇರಾನ್–ಇರಾಕ್ ಯುದ್ಧವೊಂದರಲ್ಲಿಯೇ 8 ಲಕ್ಷ ಜನ ಸಾವಿಗೀಡಾದರು. ಗಾಜಾಪಟ್ಟಿಯ ಮೇಲೆ ಇಸ್ರೇಲ್ 22 ತಿಂಗಳಿಂದ ದಾಳಿ ನಡೆಸುತ್ತಿದೆ. ದಾಳಿಯ ಪರಿಣಾಮ 70,000ಕ್ಕೂ ಹೆಚ್ಚು ಮಂದಿ ಸಾವೀಗೀಡಾಗಿದ್ದಾರೆ. ಸತ್ತವರಲ್ಲಿ ಶೇ. 72ರಷ್ಟು ಮಕ್ಕಳು ಮತ್ತು ಮಹಿಳೆಯರು. ಶೇ. 90ಕ್ಕಿಂತ ಹೆಚ್ಚು ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳು ಬಾಂಬ್ ದಾಳಿಗೆ ಒಳಗಾಗಿವೆ ಅಥವಾ ಕಾರ್ಯನಿರ್ವಹಿಸುತ್ತಿಲ್ಲ. ಇಂಧನದ ಕೊರತೆಯಿಂದ ನವಜಾತ ಶಿಶುಗಳು ಇನ್ಕ್ಯುಬೇಟರ್‌ಗಳಲ್ಲಿ ಸಾಯುತ್ತಿವೆ. ವೈದ್ಯರು ಅರಿವಳಿಕೆ ಇಲ್ಲದೆ ಶಸ್ತ್ರಚಿಕಿತ್ಸೆಗಳನ್ನು ಮಾಡುತ್ತಿದ್ದಾರೆ. ಪ್ರತಿಯೊಂದು ಮೂಲಭೂತ ಮಾನವ ವ್ಯವಸ್ಥೆ – ಆರೋಗ್ಯ, ಶಿಕ್ಷಣ ಪೋಷಣೆ, ನೈರ್ಮಲ್ಯ ಕುಸಿದಿದೆ. ಜನರ ವ್ಯವಸ್ಥಿತ ವಿನಾಶವಾಗುತ್ತಿದೆ. ಹಸಿವಿನಿಂದ ಸಾವುಗಳು ಹೆಚ್ಚಾಗಲಿವೆ ಎಂದು ಅನೇಕರು ಕಳವಳ ವ್ಯಕ್ತಪಡಿಸುತ್ತಿದ್ದಾರೆ.

ಇತ್ತೀಚೆಗೆ ಇಸ್ರೇಲ್ ಇರಾನ್ ಮೇಲೆ ಜೂನ್ 13ರಿಂದ ನಡೆಸಿದ 12 ದಿನಗಳ ಯುದ್ಧದಲ್ಲಿ ಇರಾನ್‌ನಲ್ಲಿ 600ರಿಂದ 1000ಕ್ಕೂ ಹೆಚ್ಚು ನಾಗರಿಕರ ಸಾವು ಸಂಭವಿಸಿದೆ. 4,500ಕ್ಕಿಂತ ಹೆಚ್ಚು ಜನ ಗಾಯಗೊಂಡಿದ್ದಾರೆ. ಜಗತ್ತಿನ ವಿವಿಧ ಅಸಹಾಯಕ ರಾಷ್ಟ್ರಗಳ ಮೇಲೆ ಸಾಮ್ರಾಜ್ಯಶಾಹಿ ಶಕ್ತಿಗಳು ಯುದ್ಧ ಹೂಡುವ ಮೂಲಕ ಅಟ್ಟಹಾಸಗೈಯುತ್ತಿವೆ. ಅದರಲ್ಲೂ ಅಮೇರಿಕಾದ ಆಕ್ರಮಣಕಾರಿ ನೀತಿ ಅಪಾಯದ ಮುನ್ಸೂಚನೆ ನೀಡುತ್ತಿದೆ. 2003ರಲ್ಲಿ ಜಾರ್ಜ್ ಬುಷ್ ಇರಾಕ್ ಮೇಲೆ ಯುದ್ಧ ಸಾರಿದ್ದರು. ಹೆಚ್ಚಿನ ಪ್ರಮಾಣದ ತೈಲವನ್ನು ತರಿಸಿಕೊಂಡು ವ್ಯಾಪಾರೀಕರಣ ನಡೆಸಿತ್ತು. ಈಗ ಟ್ರಂಪ್ ಹುಚ್ಚಾಟಗಳು ಜಗತ್ತನ್ನು ಎಲ್ಲಿಗೆ ತಂದು ನಿಲ್ಲಿಸುತ್ತವೆ ಎಂಬ ಭಯ ಎಲ್ಲರಲ್ಲೂ ಮನೆ ಮಾಡಿದೆ.

ಜಾಗತಿಕವಾಗಿ ಮೂರನೇ ಮಹಾಯುದ್ಧ ನಡೆಯುತ್ತದೇನೋ ಎಂಬ ಆತಂಕ ಮೂಡುತ್ತಿದೆ. 'ಯುದ್ಧಕ್ಕೆ ಪ್ರಮುಖ ಕಾರಣ ಯುದ್ಧವೇ' ಎಂದು ಸಮಾಜ ಶಾಸ್ತ್ರಜ್ಞ ರೈಟ್ ಮಿಲ್ಸ್ ಹೇಳಿದ್ದನ್ನು ಜಗತ್ತು ಸರಿಯಾಗಿ ಅರ್ಥಮಾಡಿಕೊಳ್ಳಬೇಕಿದೆ. ಯುದ್ಧವು ರಾಜಕಾರಣಿಗಳ ಆಟವಾಗಿದೆ. ಬಾಡಿಗೆ ಹಂತಕರ ವ್ಯಾಪಾರಕ್ಕೆ ಇಳಿದಂತೆ ಸಾವುಗಳು ನಡೆಯುತ್ತಿವೆ. ಕವಿ ಆರ್.ವಿ.ಭಂಡಾರಿಯವರ ಆಶಯದಂತೆ, ಪ್ರೀತಿಯ ಕಾಳನು ಬಿತ್ತ ಬಯಸುವೆವು ಜಾಗ ಕೊಡುವಿರೇನು? ಹೃದಯದಿ ಜಾಗ ಕೊಡುವಿರೇನು? ಎಂದು ಸಾರಬೇಕಿದೆ.



ಅಹಾ! ಎಂತಹಾ ಪ್ರಜಾಪ್ರಭುತ್ವ!!...

ಪುಟ–2ರಿಂದ

ಮನಸ್ಥಿತಿಯ ಇವರು ಚರ್ಚ್‌ನ ಅಧಿಕಾರದ ಪರವಾಗಿದ್ದರು. ಕೃಷಿ ಆಮದುಗಳು ಇವರಿಗೆ ಹಾನಿಯನ್ನು ಉಂಟು ಮಾಡುತ್ತಿದ್ದರಿಂದ, ಅವರ ಬಲ ಹೆಚ್ಚಿದ್ದಾಗ ಇಂತಹ ಆಮದುಗಳನ್ನು ನಿಯಂತ್ರಿಸುವ ಕಾನೂನುಗಳನ್ನು ಪಾಸುಮಾಡಿದ್ದರು. ಇವರು ಟೋರಿ ಪಕ್ಷವೆಂದು ಹೆಸರಾದರು.

ಪಕ್ಷಗಳು ರೂಪುಗೊಂಡ ಬಗೆಗಿನ ಈ ವಿವರಣೆಯೇ ಈ ಎರಡೂ ಪಕ್ಷಗಳು ಹುಟ್ಟಿದ್ದೇ ಅಧಿಕಾರದ ಮೇಲೆ ಹಿಡಿತ ಸ್ಥಾಪಿಸುವುದಕ್ಕಾಗಿ, ಅದನ್ನು ಬಳಸಿಕೊಂಡು ತಂತಮ್ಮ ವೈಯಕ್ತಿಕ ಸ್ವಾರ್ಥ, ಒಂದು ಗುಂಪಾಗಿ ವರ್ಗ ಸ್ವಾರ್ಥ ಸಾಧಿಸಿಕೊಳ್ಳುವುದಕ್ಕಾಗಿ ಎಂಬುದು ವೇದ್ಯವಾಗುತ್ತದೆ. ಪ್ರಜಾಪ್ರಭುತ್ವ ಕ್ರಾಂತಿಯ ಮುನ್ನಾ ದಿನಗಳಿಂದ ಆರಂಭವಾಗಿ ಯುದ್ಧದ ಎರಡು ತಂಡಗಳ ನಡುವಣ ಯುದ್ಧ, ಸರ್ವಾಧಿಕಾರ, ನಂತರದ ರಾಜಿ, ರಾಜಿಯ ನಂತರ ಎಲ್ಲ ಹಂತಗಳಲ್ಲಿಯೂ ಊರೊಟ್ಟಿನ ಆಸ್ತಿಯನ್ನು ಕಬಳಿಸುವುದು, ಜನರ ಮೇಲೆ ತೆರಿಗೆ, ಕಂದಾಯಗಳ ಹೊರೆ ಹೇರಿ ಅದನ್ನು ಕಬಳಿಸುವುದು ಅಸಹ್ಯವಾಗುವಷ್ಟು ಇಂತಹವುಗಳ ವಿವರಗಳನ್ನು ಓದುತ್ತಾ ಬಂದಿದ್ದೀರಿ. ಈ ರಾಜಕೀಯ ಪಕ್ಷಗಳ ಹುಟ್ಟಿನಲ್ಲೂ ಇದೇ ವರ್ಗಗಳ ಸ್ವಾರ್ಥ, ಅದರ ಸಾಧನೆಗಾಗಿ ತಿಕ್ಕಾಟ ಇವುಗಳೇ ಮೇಲುಗೈ ಸಾಧಿಸಿದವು. ಈ ಎರಡು ಪಕ್ಷಗಳ ಹಿಂದಿನ ವರ್ಗಗಳು ಶೋಷಕ ವರ್ಗಗಳೇ. ಆ ವರ್ಗಗಳ ಸ್ವಾರ್ಥಗಳ ತಿಕ್ಕಾಟದಲ್ಲಿ ಅಂದಿನ ಸಂದರ್ಭದಲ್ಲಿ ಯಾರ ವರ್ಗ ಸ್ವಾರ್ಥ ಎಷ್ಟರ ಮಟ್ಟಿಗೆ ಸಮಾಜದ ಬೇರೆ ವರ್ಗಗಳ ಹಿತದೊಂದಿಗೆ ಮೇಳವವಾಗುತ್ತದೆ, ಸಮಾಜದ ಮುನ್ನಡೆಗೆ ಸಹಾಯಕ ಎಂಬುದಷ್ಟೇ ಈ ಪಕ್ಷಗಳ ಮೌಲ್ಯಮಾಪನ ಮಾಡುವ ವಿಧಾನ.

ಬಹು ದೊಡ್ಡ ಸಮುದಾಯವಾದ ದುಡಿಯುವ ವರ್ಗಗಳ ಪಕ್ಷವೂ ತನ್ನ ವರ್ಗ ಹಿತಕ್ಕಾಗಿಯೇ ಸೆಣೆಸುತ್ತಿತ್ತು. ಆ ವರ್ಗ ಹಿತ ಸಮಾಜದ ಮುನ್ನಡೆಗೆ ಅತ್ಯಂತ ಉಪಯೋಗಕರವಾಗಿದ್ದುದರಿಂದ ಪ್ರಗತಿಪರ, ಜನಪರವಾಗಿತ್ತು. ಈ ವರ್ಗಗಳು ತಮ್ಮ ಸಂಕಟ, ಸಮಸ್ಯೆಗಳ ನಿವಾರಣೆಗಾಗಿ ತಮ್ಮ ಹಿತಗಳ ಸಾಧನೆಗಾಗಿ ಬೇರೆ ಮೇಲ್ವರ್ಗಗಳೊಂದಿಗೆ ಸೇರಿ ಸೆಣಸಿದವು. ಆದರೆ ಅವರ ಅನುಭವ ಕಹಿಯಾಗಿತ್ತು. ಮೇಲ್ವರ್ಗಗಳು ತಮ್ಮ ಸ್ವಾರ್ಥಕ್ಕಾಗಿ ತಳ ಶೋಷಿತ ವರ್ಗಗಳನ್ನು ಬಲಿಕೊಡುತ್ತಿವೆ ಎಂದು ಸ್ವಂತ ಅನುಭವದಿಂದ ಕಂಡಾಗ, ಮೇಲ್ವರ್ಗಗಳಿಂದ ಬೇರ್ಪಟ್ಟು ತಮ್ಮದೇ ಪಕ್ಷವಾಗಿ ಕಾರ್ಯಶೀಲರಾದರು. ಇದರಲ್ಲಿ ಪಾರ್ಲಿಮೆಂಟ್ ಪರ ಪಕ್ಷವಾದ ವಿಗ್ ಪಕ್ಷ ಹಲವು ಚುನಾವಣೆಗಳಲ್ಲಿ ಜಯಗಳಿಸಿ, 1695ರಿಂದ ಎಂಟು ದಶಕಗಳ ಕಾಲ ಆಡಳಿತದ ಮೇಲೆ ತನ್ನ ಹಿಡಿತ ಸ್ಥಾಪಿಸಿತು. ಅದರಲ್ಲಿ ಅರ್ಧ ಶತಮಾನ ಕಾಲವಂತೂ ಬ್ರಿಟನ್ ನಲ್ಲಿ ವಿಗ್ ಗಳ ಏಕಪಕ್ಷ ಅಧಿಕಾರ ಏರ್ಪಟ್ಟಿತ್ತು.

ಈ ಪಕ್ಷಗಳು ಇನ್ನೂ ಮೊಳಕೆ ಒಡೆಯುತ್ತಿರುವ ಈ ಹಂತದಲ್ಲಿ ಸಂಘಟನಾ ರಚನೆ, ನಿಯಮಗಳೇನೂ ಇಲ್ಲದ ಸಡಿಲ ಸಂಘಟನೆಗಳಾಗಿದ್ದವು. ಪರಿಸ್ಥಿತಿ ಬದಲಾದಂತೆ ಈ ಪಕ್ಷಗಳ ಒಳಗಿನ ವಿವಿಧ ಹಿತಾಸಕ್ತಿಯ ಗುಂಪುಗಳು ಪಕ್ಷವನ್ನು ಬದಲಾಯಿಸುತ್ತಿದ್ದವು.

ವಿಸ್ತೃತ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುತ್ತಾ ಈ ಎರಡೂ ಪಕ್ಷಗಳ ಹೊರಗಿನ ಕೆಲ ಮಧ್ಯಮ ವರ್ಗಗಳ ಪ್ರತಿನಿಧಿಗಳು ತಮ್ಮ

ಹಿತಾಸಕ್ತಿಗೆ ನೆರವಾಗುವ ನೀತಿಗಳನ್ನು ಪ್ರತಿಪಾದಿಸುವ ಪಕ್ಷಗಳನ್ನು ಸೇರುತ್ತಿದ್ದರು. ಈ ಬದಲಾವಣೆಗಳೊಂದಿಗೆ ಮುಂದೆ ಈ ಪಕ್ಷಗಳು

ಲಿಬರಲ್ ಮತ್ತು ಕನ್ಸರ್ವೇಟಿವ್ ಎಂಬ ಪಕ್ಷಗಳಾಗಿ ರೂಪುಗೊಂಡವು. ಇಂದಿಗೂ ಕೂಡಾ ಬ್ರಿಟಿಷ್ ರಾಜಕೀಯದಲ್ಲಿ ಕ್ರಿಯಾಶೀಲವಾಗಿವೆ.

ಒಂದು ಮೂಳೆಯ ಕೊಳಲು

ಬಂದು ನಾದವಾಗಿ ನಿಶ್ಶಬ್ದದ ಅಲೆಯಲ್ಲಿ
ಲೀನವಾದವರು ಎಷ್ಟೋ
ನೆನ್ನೆ ತಾನೆ ನಕ್ಕವರು ಅತ್ತವರು ಇವತ್ತು
ಎತ್ತ ಹೋದರೋ
ಏನು ಬ್ಯಾನಿ ಇತ್ತೋ
ಗಾಳಿ ಎಳೆದುಕೊಂಡು ಹೋಯಿತೋ
ಯಾರಾದರೂ ಬಹಿಷ್ಕರಿಸಿದರೋ
ಬಲಿ ಹಾಕಿದರೋ
ಇವತ್ತು ಇದ್ದವರು ನಾಳೆಗಿಲ್ಲ
ರಾತ್ರಿ ಹುಟ್ಟಿದ ಮಕ್ಕಳ್ ಮುಂಜಾವಿಗಿಲ್ಲ

ತಂಗಾಳಿಯ ಯಾರಾದರು ಕದ್ದರೇ
ಬೆಳಕ ಕುಡಿಯ ಚಿವುಟಿ
ಹೊಗೆ ಹಾಕಿ ಉಸಿರುಗಟ್ಟಿಸಿದರೇ

ಒಳಗೇ ಉರಿವ ಕಿಚ್ಚಿನ ಪಂಜು
ಯಾವೂರ ಯಾವ ಪಯಣಕ್ಕೆ
ಸೂತಕದ ಬೀದಿಗಳಲ್ಲಿ ಇದೇನಿದು
ಜಗನ್ನಾತ್ರೆಯ ಜಂಗುಳಿ
ಉರಿಯುತ್ತಿವೆ ಏಕೆ ಈ ಪರಿಯ
ಲಾವಾಗಣ್ಣು

ಬಂದದ್ದೆಲ್ಲ ಬರಿದಾಗಲೆಂದೇ ಬರುವುದೇ
ದುಃಖದ ಒಂದೊಂದು ಹಣತೆಯೂ
ಬುದ್ಧಪೂರ್ಣಿಮೆಯ ನಗೆಯ ತಂಪೇ
ಬಿಕ್ಕಿ ಬಿಕ್ಕಿ ಅತ್ತ ಬಿಕ್ಕುಗಳೆಲ್ಲ ಎನ್ನ ಬಿಟ್ಟು
ಎಲ್ಲಿ ಹೋದರು
ನಕ್ಕು ನಲಿದು ನೆತ್ತಿಯಲಿ ಚಿಮ್ಮಿದ ಚಿಲುಮೆ
ಈಗ ಎಲ್ಲಿ ಆವಿ ಆಯಿತು

ಕೈಗೆಟುಕುವ ಆಕಾಶ ಯಾವ ತೀರದಲ್ಲಿದೆ
ದಿಕ್ಕೇ ಇಲ್ಲದ ದಿಕ್ಕಿಗೆ ದಿಕ್ಕು ಯಾವುದು
ಮನವೀಗ ಖಾಲಿ ಖಾಲಿ
ಎಲುಬಿನ ಕೊಳಲು

ಇದೇನಿದು ಹೆಣ್ಣ ಹೆಜ್ಜೆಯ ಗುರುತು
ಅಹಾ ಅವಳ ಸೂರ್ಯೋದಯದ ಕಾಲ ಬಂತೇ
ನುಡಿಸುವೆ ಎಲುಬಿನ ಕೊಳಲ
ಅಲೆ ಅಲೆ ಎಲ್ಲೆಡೆ ಹರಡಲಿ.

– ಮೊಗಳ್ಳಿ ಗಣೇಶ್



ಮಹಿಳೆಯರು ಭಾವನಾತ್ಮಕವಾಗಿ ಗಟ್ಟಿಯಾಗಬೇಕು. ಕುಟುಂಬವನ್ನು, ಸಮಾಜವನ್ನು ಸಮದೂಗಿಸಿಕೊಂಡು ಹೋಗುವ ಅಂತಃಕರಣದ ಚಲನೆ ಹೆಣ್ಣಿನದು. ಮನೆಯ ಒಳಗೆ, ಹೊರಗೆ, ಎಲ್ಲೆಡೆ ನೂರಾರು ಬಗೆಯ ತಾರತಮ್ಯದ ಜೊತೆಗೆ ಕಾರಣವಿಲ್ಲದ ಪಾಪಪ್ರಜ್ಞೆಯಲ್ಲಿ ಮಹಿಳೆಯರನ್ನು ಬಳಲಿಸುವಂತಹ ಸಮಾಜವ್ಯವಸ್ಥೆ ನಮ್ಮದು. ಇದನ್ನು ಎದುರಿಸಲು ಏಕಕಾಲದಲ್ಲಿ ಗಂಡು ಅಹಂಕಾರವನ್ನು ಹಾಗೂ ಹೆಣ್ಣೊಳಗಿನ ಕೀಳರಿಮೆಯನ್ನು ಕೊಲ್ಲಬೇಕಿದೆ. ಎಂದು ಖ್ಯಾತ ವಿಮರ್ಶಕಿ ಡಾ. ಎಂ.ಎಸ್. ಆಶಾದೇವಿಯವರು ಮಹಿಳೆಯರಿಗೆ ಕಿವಿಮಾತು ಹೇಳಿದರು. 2025ರ ಅಗಸ್ಟ್ 2ರಂದು ಮಂಡ್ಯದಲ್ಲಿ ನಡೆದ 'ಮಹಿಳೆಯರು ದುಡಿಯುವ ಸ್ಥಳದಲ್ಲಿನ ತಾರತಮ್ಯ ಮತ್ತು ದೌರ್ಜನ್ಯ' ವಿಷಯ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

"ಅಂತಃಕರಣದ ಚಲನೆ ಹೊಂದಿರುವ ಹೆಣ್ಣು ಭಾವನಾತ್ಮಕವಾಗಿ ಗಟ್ಟಿಯಾಗಬೇಕು"

ಡಾ. ಎಂ.ಎಸ್. ಆಶಾದೇವಿ

ಧಾರ್ಮಿಕವಾಗಿ ದೇವಿ, ದೈವಕ್ಕೆ ಸೀಮಿತವಾಗಿಸುವ, ಹೊರ ಜಗತ್ತಿಗೆ ತೆರೆದುಕೊಳ್ಳುವುದನ್ನು ಸಂಸ್ಕೃತಿ ಹೆಸರಿನಲ್ಲಿ ತಡೆಯುವುದು ನಡೆಯುತ್ತದೆ. ಗಂಡು ಹೆಣ್ಣಿನ ಮೇಲೆ ಅತ್ಯಾಚಾರ, ದೈಹಿಕ ದಾಳಿಗಳನ್ನು ನಡೆಸಿದರೂ ಎದುರಿಸಿ ಮುನ್ನುಗ್ಗುತ್ತ ನಮ್ಮ ಚೈತನ್ಯವನ್ನು ಸಾಯಿಸಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದ ಮಹಾಶ್ವೇತಾದೇವಿಯ ಮಾತುಗಳು ಧ್ವನಿಪೂರ್ಣ. ವೇತನ ತಾರತಮ್ಯದ ವಿರುದ್ಧ ರಾಜಕೀಯ ಹೋರಾಟ ನಡೆಸಬೇಕಿದೆ. ಜೊತೆಗೆ ಕುಟುಂಬದ ಆಧಾರಸ್ಥಂಭವಾಗಿರುವ ಹೆಣ್ಣಿನ ಅಸಾಧಾರಣ ಶಕ್ತಿಯನ್ನು ಲೋಕ ಗುರ್ತಿಸಬೇಕು ಎಂದು ಆಶಾದೇವಿ ಹೇಳಿದರು.

ವಿಶ್ರಾಂತಿ ರಹಿತವಾಗಿ ತೊಡಗಿಸಿಕೊಂಡಿರುವ ಮಹಿಳೆಯರು: ಎ.ಆರ್.ಸಿಂಧು

ಸಿಐಟಿಯು ಕಾರ್ಯದರ್ಶಿ ಮತ್ತು ಅಖಿಲ ಭಾರತ ದುಡಿಯುವ ಮಹಿಳೆಯರ ಸಂಚಾಲಕರಾದ ಎ.ಆರ್.ಸಿಂಧು ಮಾತನಾಡಿ, ಶಾಸನಬದ್ಧ ಸೌಲಭ್ಯಗಳಿಲ್ಲದೇ ಶೇ.70 ಮಹಿಳೆಯರ ಕೆಲಸ ವಂಚನೆಗೆ ಒಳಗಾಗಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಶಿಫಾರಸು, ಕಾರ್ಮಿಕ ಸಂಘಟನೆಗಳ ಹಕ್ಕೊತ್ತಾಯಗಳೇನೇ ಇದ್ದರೂ ಅದನ್ನೆಲ್ಲ ಪರಿಗಣಿಸದ ಸರ್ಕಾರ "ವೇತನ ರಹಿತ ಕೌಟುಂಬಿಕ ಸಹಾಯಕರು" ಎಂಬ ಹೆಸರಿನಿಂದ ಈ ಕೆಲಸಗಳನ್ನು ಹೆಚ್ಚಿಸುತ್ತಿದೆ. ಇದರಿಂದ ವೇತನ ಪಾವತಿಯಾಗಬೇಕಾದುದು 22 ಲಕ್ಷ ಕೋಟಿ ರೂಪಾಯಿ. ಹಾಗಾಗಿ ಕೌಟುಂಬಿಕ ಕೆಲಸಗಳ ಸಾಮಾಜಿಕರಣವಾಗದೇ ಇದ್ದರೆ, ಉತ್ಪಾದನಾ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗದೇ ಇದ್ದರೆ, ಸಮಾನತೆ ಸಾಧ್ಯವಿಲ್ಲ. ಶ್ರಮ ಶಕ್ತಿಯ ಪುನರುತ್ಪಾದನೆಯಲ್ಲಿ ವಿಶ್ರಾಂತಿ ರಹಿತವಾಗಿ ತೊಡಗಿಸಿಕೊಂಡಿರುವ ಮಹಿಳೆಯರ ದುಡಿಮೆಯನ್ನು ಜಿಡಿಪಿಯಲ್ಲಿ ಪರಿಗಣಿಸಲೇ ಇಲ್ಲ. ಕೆಲಸದ ಸ್ಥಳದ ವ್ಯಾಖ್ಯಾನ ಮಾಡುವಲ್ಲಿ ತಾರತಮ್ಯವನ್ನು ಕಾನೂನಿನಲ್ಲೇ ಅಳವಡಿಸಲಾಗಿದೆ. ಕೆಲಸದ ಅಪಮೌಲ್ಯ, ಮಹಿಳೆ ಎಂಬ ಕಾರಣಕ್ಕೆ ಉನ್ನತ ಹುದ್ದೆಯಲ್ಲೂ ರಾಜಕಾರಣದಲ್ಲೂ ಉತ್ಪಾದನಾ ವಲಯದಲ್ಲೂ ತಾರತಮ್ಯವಿದೆ. ಇದಕ್ಕೆ ಸಂಘ ಪರಿವಾರದ ಬಲಪಂಥೀಯ ಪ್ರತಿಗಾಮಿ ಸೈದ್ಧಾಂತಿಕತೆ ಅಡಗಿದೆ. ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗಿ ಆತ್ಮಹತ್ಯೆ, ವಯಸ್ಸಿನ ವ್ಯತ್ಯಾಸವಿಲ್ಲದೇ ಸಂಬಂಧಿಕರಿಂದಲೇ ಅತ್ಯಾಚಾರ, ಗಂಡನಿಂದಲೇ ಕೊಲೆ, ಹೀಗೆ ಇಂದು ಕುಟುಂಬದಲ್ಲೂ ಕೂಡ ಭದ್ರತೆ ಇಲ್ಲ. ಹಾಗಾಗಿ ಕಾರ್ಮಿಕ ಸಂಘದಲ್ಲಿ ಲಿಂಗಸೂಕ್ಷ್ಮತೆ ಇಟ್ಟುಕೊಳ್ಳಬೇಕು. ಐಕ್ಯ ಹೋರಾಟದ ಮೂಲಕ ಸಮಾಜದ ನಡಾವಳಿಯನ್ನು ಬದಲಿಸುವ ಪರ್ಯಾಯ ಮಾದರಿಯನ್ನು ನಾವು ಸೃಷ್ಟಿಸೋಣ ಎಂದರು.

ವಿಷಯ ಮಂಡಣೆ ಮಾಡಿದ ಯಮುನಾ ಗಾಂವ್ಕರ್, ಮಹಿಳೆಯರು ಹಾಗೂ ದುಡಿಯುವ ಮಹಿಳೆಯರ ಕುರಿತ ಕಣ್ಣೋಟ, ವರ್ಗ ದೃಷ್ಟಿಕೋನದ ಆಧಾರದಲ್ಲಿ ವ್ಯಾಖ್ಯಾನಗಳ ಬಗ್ಗೆ, ಕೆಲಸ ಮಾಡುವ ವಿಭಿನ್ನ ವಲಯಗಳು, ಉತ್ಪಾದನೆ, ಕೃಷಿ, ಸೇವಾ ವಲಯಗಳಲ್ಲಿ ಮಹಿಳಾ ಶ್ರಮಶಕ್ತಿಗೆ ಇರುವ ಅಡೆತಡೆಗಳು, ಲಿಂಗ ಸಂಬಂಧಿ ಪೂರ್ವಾಗ್ರಹ, ಕೌಟುಂಬಿಕ ಕಟ್ಟುಪಾಡುಗಳು, ಒಗ್ಗಟ್ಟು ಮುರಿಯುವ ಕೋಮುವಾದದ ಅಪಾಯ, ಸಾಂಸ್ಕೃತಿಕ ಧಾಳಿ, ಕೆಲಸದ ಮೌಲ್ಯ ಕಡಿಮೆ ಮಾಡುವ ಅರ್ಥಶಾಸ್ತ್ರದ ಪರಿಭಾಷೆ ಹಾಗೂ ವೇತನ ತಾರತಮ್ಯ, ಕೆಲಸದ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರಕ್ಕೆ ಒಳಗಾಗುವ ಹಿಂಸೆ ಎದುರಿಸುತ್ತಿರುವ ಕುರಿತು, ಸರ್ಕಾರವೇ ಸ್ವತಃ ಲಿಂಗ ತಾರತಮ್ಯ ಮಾಡುವ ಶೋಷಣೆಗೆ ಅವಕಾಶ ಮಾಡಿಕೊಡುವ ಕಾನೂನಿನ ಅಂಶಗಳು ಬದಲಾಗಬೇಕಾದ ನೆಲೆ, ಕೆಲಸದ ಸ್ಥಳದಲ್ಲಿ ಕೊರತೆಗಳು, ಗಂಡು ಹೆಣ್ಣು ಕೂಲಿ ತಾರತಮ್ಯ, ಕೆಲಸದ ಸ್ವರೂಪದಲ್ಲಾದ ಬದಲಾವಣೆಯಿಂದ ಉದ್ಯೋಗ ರಕ್ಷಣೆ ಇಲ್ಲದಿರುವುದು ಸಾಮಾಜಿಕ ಸುರಕ್ಷೆ, ಹೆರಿಗೆ ಸೌಲಭ್ಯ, ಹಾಲುಣಿಸಲು ಪ್ರತ್ಯೇಕ ವ್ಯವಸ್ಥೆ ಇಲ್ಲದಿರುವುದು, ಕ್ರಶ್ ವ್ಯವಸ್ಥೆ ಮಾಡದಿರುವುದು, ಪದೋನ್ನತಿ ಇಲ್ಲದಿರುವುದರ ಬಗ್ಗೆ ಗಮನ ಸೆಳೆದರು.

ಮಹಿಳಾ ಅಧಿಕಾರಿಗಳನ್ನು ಒಳಗೊಂಡು ಕೆಳಹಂತದವರೆಗೆ ಶೋಷಣೆ

ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿಯವರು ಮಾತನಾಡಿ, ರಾಜ್ಯದಲ್ಲಿ ಉನ್ನತಾಧಿಕಾರ ಹೊಂದಿದ ಮಹಿಳಾ ಅಧಿಕಾರಿಗಳನ್ನು, ಮಹಿಳಾ ಮಂತ್ರಿಗಳನ್ನು ಒಳಗೊಂಡು ಕೆಳಹಂತದವರೆಗೆ ಶೋಷಣೆಯ ವಿವಿಧ ರೂಪ ಅನುಭವಿಸುತ್ತಿದ್ದಾರೆ. ಮಹಿಳೆಯರ ಕೆಲಸಕ್ಕೆ ಸಾಮಾಜಿಕ ಸ್ಥಾನಮಾನ ಹಾಗೂ ಖಾಯಮಾತಿ, ಸುರಕ್ಷೆ, ಅಪಾಯಕಾರಿ ಸ್ಥಳದಲ್ಲಿ ಕೈಗಾರಿಕೆಯಲ್ಲಿ ರಾತ್ರಿಪಾಳಿಯ ಕೆಲಸ ನಿರ್ಬಂಧಿಸಲು, ನೈರ್ಮಲ್ಯಯುತ ಶೌಚಾಲಯ ಪಡೆಯಲು, ಹೆರಿಗೆ ಮತ್ತು ಮುಟ್ಟಿನ ಸೌಲಭ್ಯಕ್ಕೆ ಮುಂದಿನ ದಿನಗಳಲ್ಲಿ ಹೋರಾಟ ರೂಪಿಸಬೇಕಿದೆ. ವಿಚಾರ ಸಂಕಿರಣದಲ್ಲಿ ಮೂಡಿಬಂದ ಪ್ರಧಾನ ವಿಷಯಗಳನ್ನು ಕೈಗೆತ್ತಿಕೊಂಡು ಗಮನಹರಿಸಲೇಬೇಕಾದ ಅಂಶಗಳಿಗೆ ಒತ್ತುಕೊಟ್ಟು ದುಡಿಯುವ ಮಹಿಳೆಯರ ಸಂಕಷ್ಟ ವಿವರಿಸಿದರು.

ರಂಗಭೂಮಿ ಕಲಾವಿದರಾದ ಅಕ್ಷತಾ ಪಾಂಡವಪುರ, ಕೈಗಾರಿಕಾ ಕಾರ್ಮಿಕರಾದ ಮಂಗಳಾ ಕುಮಾರಿ ಮಾತನಾಡಿದರು. ಸರ್ಕಾರದ ಕಾರ್ಯದರ್ಶಿ ಶಾಲಿನಿ ರಜನೀಶ್ ತಮ್ಮ ಸಂದೇಶ ನೀಡಿ ಶುಭಾಶಯ ಕಳುಹಿಸಿದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಉಪಸ್ಥಿತರಿದ್ದರು. ದುಡಿಯುವ ಮಹಿಳೆಯರ ರಾಜ್ಯ ಸಂಚಾಲಕರಾದ ಎಚ್.ಎಸ್.ಸುನಂದಾ ಸ್ವಾಗತಿಸಿದರು. ಪ್ರಮಿಳಾ ಕುಮಾರಿ ನಿರ್ವಹಿಸಿದರು.

ವರದಿ: ಯಮುನಾ ಗಾಂವ್ಕರ್

'ಸಾರ್ವಜನಿಕ ಹಿತಾಸಕ್ತಿ'ಯೇನೂ ಇಲ್ಲದ ಯೋಜನೆಗೆ 4.5 ಲಕ್ಷ ಮರಗಳ ನಾಶದ ನಿರ್ಧಾರ ಕೇಂದ್ರ ಪರಿಸರ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಛತ್ತೀಸ್‌ಗಡದ 1742 ಹೆಕ್ಟೇರ್ ದಟ್ಟ ಅರಣ್ಯ ಭೂಮಿಯನ್ನು ನಾಶಮಾಡಬೇಕಾಗುವ 'ಕೆಂಟೆ ವಿಸ್ತರಣಾ ಕಲ್ಲಿದ್ದಲು ಯೋಜನೆ'ಯನ್ನು ಕಾರ್ಯಾಚರಣೆಗಿಳಿಸಲು, ಆ ರಾಜ್ಯದ ಅರಣ್ಯ ಇಲಾಖೆ ಹಸಿರು ನಿಶಾನೆ ನೀಡಿರುವುದು ಒಂದು ವಿನಾಶಕಾರಿ ನಿರ್ಧಾರ ಎಂದು, ಅದನ್ನು ಬಲವಾಗಿ ವಿರೋಧಿಸುತ್ತ ಸಿಪಿಐ(ಎಂ) ಕೇಂದ್ರ ಸಮಿತಿಯ ವಿಶೇಷ ಆಹ್ವಾನಿತರು ಮತ್ತು ರಾಜ್ಯಸಭೆಯ ಮಾಜಿ ಸದಸ್ಯೆ ಬೃಂದಾ ಕಾರಟ್ ಅವರು ಆಗಸ್ಟ್ 6ರಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅವರಿಗೆ ಪತ್ರ ಬರೆದು, ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕು ಎಂದು ವಿನಂತಿಸಿದ್ದಾರೆ. ಈ ವರ್ಷದ ಜೂನ್‌ನಲ್ಲಿ ಸುರ್ಗುಜಾ ಜಿಲ್ಲಾ ಅರಣ್ಯ ಅಧಿಕಾರಿಯಿಂದ ತಥಾಕಥಿತ 'ಸ್ಥಳ ಪರಿಶೀಲನೆ' ನಂತರ ಇದಕ್ಕೆ ಅನುಮೋದನೆ ನೀಡಲಾಗಿದೆ ಎಂದು ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಹಸ್ದೇವ್–ಅರಾಂಡ್ ಪ್ರದೇಶದ ಕಲ್ಲಿದ್ದಲು ಯೋಜನೆಯ ಭಾಗವಾಗಿರುವ ಈ ಯೋಜನೆಯನ್ನು ರಾಜಸ್ಥಾನ ಸರ್ಕಾರಿ ಸ್ವಾಮ್ಯದ ವಿದ್ಯುತ್ ಸೌಲಭ್ಯಕ್ಕೆ ನೀಡಲಾಗಿತ್ತು. ಹಿಂದಿನ ರಾಜಸ್ಥಾನ ಸರ್ಕಾರವು ಅದಾನಿ ಎಂಟರ್‌ಪ್ರೈಸಸ್‌ನೊಂದಿಗೆ ಪಾರ್ಸಾ ಕೆಂಟೆ ಕೊಲೀರೀಸ್ ಲಿಮಿಟೆಡ್ ಎಂಬ ಜಂಟಿ ಉದ್ಯಮವನ್ನು ಸ್ಥಾಪಿಸಿತ್ತು. ಅದರಲ್ಲಿ ಅದಾನಿ ಎಂಟರ್‌ಪ್ರೈಸಸ್ ಕಂಪನಿ ಶೇ. 74ರಷ್ಟು ಪಾಲನ್ನು ಹೊಂದಿದೆ. ಈ ಕಂಪನಿಯನ್ನು ಹಸ್ದೇವ್ –ಪಾರ್ಸಾ ಕಲ್ಲಿದ್ದಲು ಯೋಜನೆಯ ಗಣಿ ಅಭಿವೃದ್ಧಿ ಮತ್ತು ನಿರ್ವಹಣೆಗೆ ನೇಮಿಸಲಾಗಿತ್ತು. ಈ ಉದ್ದಿಮೆಯ ಅಡಿಯಲ್ಲಿ ಗಣಿಗಾರಿಕೆ ಮಾಡಿದ ಗಣನೀಯ ಪ್ರಮಾಣದ ಕಲ್ಲಿದ್ದಲನ್ನು 'ತಿರಸ್ಕರಿಸಿದ ಕಲ್ಲಿದ್ದಲು' ಬಳಕೆಯ ಹೆಸರಿನಲ್ಲಿ ಈ ಖಾಸಗಿ ಕಂಪನಿಯ ವಿದ್ಯುತ್ ಯೋಜನೆಗಳಿಗೆ ತಿರುಗಿಸಲಾಗಿದೆ ಎಂದು ದಾಖಲೆಗಳು ತೋರಿಸಿವೆ. ಕೆಂಟೆ ವಿಸ್ತರಣಾ ಕಲ್ಲಿದ್ದಲು ಯೋಜನೆಗೆ ಅನುಮತಿಗೆ ನೀಡಿರುವುದು ಅದು 'ಸಾರ್ವಜನಿಕ ಹಿತಾಸಕ್ತಿ' ಆಗಿರುವುದರಿಂದ ಎಂಬ ಕಾರಣಕ್ಕೆ. ಆದ್ದರಿಂದ ಈ ಸಂಗತಿಗಳು ಪ್ರಸ್ತುತವಾಗಿವೆ ಎಂದಿರುವ ಬೃಂದಾ ಕಾರಟ್, ವಾಸ್ತವವಾಗಿ ಇದರಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲ, ಖಾಸಗಿ ಲಾಭಕ್ಕಾಗಿ ಖನಿಜ ಸಂಪನ್ಮೂಲಗಳ ಅತಿಯಾದ ಬಳಕೆ ಮಾತ್ರ ಇದೆ ಎಂದು ತಮ್ಮ ಪತ್ರದಲ್ಲಿ ಟಿಪ್ಪಣಿ ಮಾಡಿದ್ದಾರೆ.

ಈ ಯೋಜನೆಯು ಕಾರ್ಯರೂಪಕ್ಕೆ ಬಂದರೆ, ಗಣಿಗಾರಿಕೆಯಿಂದಾಗಿ ಈಗಾಗಲೇ ತೀವ್ರವಾಗಿ ಬಾಧಿತವಾಗಿರುವ ಪ್ರದೇಶಗಳಿಗೆ ಮತ್ತಷ್ಟು ವಿಪತ್ತು ಬರುತ್ತದೆ. ಅಧಿಕೃತ ಪರಿಶೀಲನಾ ವರದಿಯ ಪ್ರಕಾರ, ಕನಿಷ್ಠ 4.5 ಲಕ್ಷ ಮರಗಳನ್ನು ಕಡಿಯಲಾಗುವುದು. ಇವು ದಟ್ಟವಾದ ಕಾಡಿನಲ್ಲಿವೆ. ಇದು ಇಂಗಾಲದ ಬೇರ್ಪಡಿಕೆಗೆ ನಿರ್ಣಾಯಕವಾದ ಸ್ಥಳೀಯ ಮರಗಳಿಂದ ತುಂಬಿದೆ. ಈ ಪ್ರದೇಶದಲ್ಲಿ ಓಪನ್ ಕ್ಯಾಸ್ಟ್ ಗಣಿಗಾರಿಕೆ ಈಗಾಗಲೇ ಸಾವಿರಾರು ಮರಗಳನ್ನು ನಾಶಪಡಿಸಿದೆ, ನೀರು ಮತ್ತು ನೆಲದ ಮಣ್ಣನ್ನು ಕಲುಷಿತಗೊಳಿಸಿದೆ.

ಇದಲ್ಲದೆ, ಗ್ರಾಮ ಸಭೆಗಳ ಅಭಿಪ್ರಾಯಗಳನ್ನು ಮತ್ತು ಗ್ರಾಮ ಸಭೆಗಳ ಒಪ್ಪಿಗೆಯನ್ನು ಕಡ್ಡಾಯಗೊಳಿಸಿರುವ ಸಂವಿಧಾನ ಮತ್ತು ಕಾನೂನು ಚೌಕಟ್ಟುಗಳ ನಿಬಂಧನೆಗಳನ್ನು ನಿರ್ಲಕ್ಷಿಸಿ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಓಪನ್ ಕ್ಯಾಸ್ಟ್ ಗಣಿಗಾರಿಕೆ ನಿಜವಾದ ಯೋಜನೆಯ ಆಚೆಯೂ ದೊಡ್ಡ ಭೌಗೋಳಿಕ ಪ್ರದೇಶದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಈ ನಿರ್ದಿಷ್ಟ ಪ್ರದೇಶದಲ್ಲಿ ಮಾನವ ವಾಸಸ್ಥಳವು ಅತ್ಯಲ್ಪವಾಗಿದ್ದರೂ, ಪ್ರದೇಶದ ಹೊರಗಿನ ಅನೇಕ ಹಳ್ಳಿಗಳ ಮೇಲೆ ಇವು ತೀವ್ರ ಪರಿಣಾಮ ಬೀರುತ್ತವೆ.

ಇದಕ್ಕೂ ಮೊದಲು, ಸ್ಥಳೀಯ ಸಮುದಾಯಗಳಿಂದ 1500ಕ್ಕೂ ಹೆಚ್ಚು ಲಿಖಿತ ಆಕ್ಷೇಪಣೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ಇವುಗಳನ್ನು ನಿರ್ಲಕ್ಷಿಸಲಾಗಿದೆ ಎಂಬುದನ್ನು ಸಚಿವರ ಗಮನಕ್ಕೆ ತಂದಿರುವ ಬೃಂದಾ ಕಾರಟ್, ಕೆಲವು ತಿಂಗಳುಗಳ ಹಿಂದೆ, "ಅರಣ್ಯ ಹಕ್ಕುಗಳ ಕಾಯ್ದೆ, 2006ರ ಅಡಿಯಲ್ಲಿ ನೀಡಲಾದ ಪಟ್ಟಾಗಳಿಂದಾಗಿ ಅರಣ್ಯ ಹೊದಿಕೆ ಕಳೆದುಹೋಗಿದೆ. ಕಠಿಣ ರಕ್ಷಣಾ ಕ್ರಮಗಳು ಅಗತ್ಯವಾಗಿವೆ..." ಎಂಬ ಅವರದ್ದೇ ಹೇಳಿಕೆಯನ್ನು (ಹಿಂದೂಸ್ತಾನ್ ಟೈಮ್ಸ್, ಜೂನ್ 5) ಅವರಿಗೆ ನೆನಪಿಸಿದ್ದಾರೆ. "ನಾವು ಆ ಹೇಳಿಕೆಯನ್ನು ಪ್ರತಿಭಟಿಸಿದ್ದೆವು ಮತ್ತು ಅಭಿವೃದ್ಧಿ ಯೋಜನೆಗಳು ಎಂದು ಕರೆಯಲ್ಪಡುವ ಕೆಲಸಗಳಿಂದಾಗಿ ಅರಣ್ಯ ಹೊದಿಕೆ ಕಳೆದುಹೋಗುತ್ತಿದೆ ಎಂದು ಸೂಚಿಸಿದ್ದೆವು. ಅಭಿವೃದ್ಧಿಯ ಹೆಸರಿನಲ್ಲಿ ಖಾಸಗಿ ಗಣಿಗಾರಿಕೆ ಯೋಜನೆಗಳಿಂದ ನಮ್ಮ ಕಾಡುಗಳು ನಾಶವಾಗದಂತೆ ರಕ್ಷಿಸಲು ಕಠಿಣ ರಕ್ಷಣಾ ಕ್ರಮಗಳು ನಿಜಕ್ಕೂ ಅಗತ್ಯ. ಭಾರತದಲ್ಲಿ ಅರಣ್ಯಗಳ ನಿಜವಾದ ರಕ್ಷಕರು ತಾವೇ ಎಂಬುದನ್ನು ಈ ಪ್ರದೇಶದ ಆದಿವಾಸಿಗಳು ಇಂತಹ ಯೋಜನೆಗೆ ತಮ್ಮ ಪ್ರತಿರೋಧ, ಮತ್ತು ಮರಗಳನ್ನು ಹಾಗೂ ಪ್ರಕೃತಿಯನ್ನು ಉಳಿಸುವ ಪ್ರಯತ್ನಗಳ ಮೂಲಕ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ" ಎಂದು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

"ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾಗಿ, ಖಾಸಗಿ ಕಂಪನಿಯ ಹಿತಾಸಕ್ತಿಗಳಿಗಿಂತ ಹೆಚ್ಚಾಗಿ ಅರಣ್ಯಗಳನ್ನು ಉಳಿಸುವುದು ಮತ್ತು ಮರಗಳನ್ನು ಮನಬಂದಂತೆ ಕಡಿಯುವುದನ್ನು ಹಾಗೂ ಶ್ರೀಮಂತ ಜೈವಿಕ–ವೈವಿಧ್ಯದ ಒಂದು ಪ್ರದೇಶದ ನಾಶವನ್ನು ತಪ್ಪಿಸುವುದು ಖಂಡಿತವಾಗಿಯೂ ನಿಮ್ಮ ಜವಾಬ್ದಾರಿಯಾಗಿದೆ" ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಧರ್ಮಸ್ಥಳದಲ್ಲಿ ಹೂತು ಹೋದ ಸತ್ಯ–ನ್ಯಾಯ ನೀತಿ, ದಿನಕ್ಕೊಂದು ತಿರುವು

ಕೆ.ಎಸ್.ವಿಮಲ

ಸುತ್ತ ಹಚ್ಚ ಹಸುರಿನ ಕಾಡು, ಜುಳುಜುಳು ಹರಿಯುವ ನೀರು, ಈಗ ಮಳೆಗಾಲವಿರುವುದರಿಂದ ನೀರಿನ ಸೆಳವು ಸ್ವಲ್ಪ ಹೆಚ್ಚೇ, ಮಳೆ ಕರೆಯುವ ನವಿಲು, ಶುಕ ಪಿಕ ಎಲ್ಲವೂ ಮನಸ್ಸಿಗೆ ಮುದ ಕೊಡುವ ತಾಣವದು.

ಆದರೆ ಅಲ್ಲಿ ದುಃಖ ಮಡುಗಟ್ಟಿದೆ. ಮೌನ ಮನಸ್ಸು ಹಿಂಡುತ್ತದೆ. ಅದು ಬೆಳ್ತಂಗಡಿ ಬಳಿ ಇರುವ ಪದ್ಮಲತಾ ಮನೆ. ಪದ್ಮಲತಾ ಎಂದರೆ ಧರ್ಮದ ಹೆಸರಿನಲ್ಲಿ ದಾಂದಲೆ ನಡೆಸುವವರ ದರ್ಪಕ್ಕೆ 39 ವರ್ಷಗಳ ಹಿಂದೆ ಅನ್ಯಾಯವಾಗಿ ಬಲಿಯಾದ ಕೂಸು. ಇಂದೀಗ ಎಲ್ಲರ ಬಾಯಲ್ಲಿ ಧರ್ಮಸ್ಥಳ ಮತ್ತು ಅದರ ಸುತ್ತ ಮುತ್ತ ನಡೆದ 'ಅಸಹಜ ಸಾವು'ಗಳೆಂದು ಹಣೆಪಟ್ಟಿ ಕಟ್ಟಿ ಮೂಲೆಗೆ ತಳ್ಳಿದ ಘಟನೆಗಳಲ್ಲಿ ಮೊದಲು ಸಾರ್ವಜನಿಕಗೊಂಡ ಪ್ರಕರಣ. ಅಂದೇ ಅದು ವಿಧಾನಸಭೆಯಲ್ಲಿ ಪ್ರತಿಧ್ವನಿಸಿತ್ತು. ಅಂದಿನ ಗೃಹ ಸಚಿವ ಬಿ.ರಾಚಯ್ಯ ಪದ್ಮಲತಾ ಮನೆಗೆ ಭೇಟಿಕೊಡುವಷ್ಟು ಕಾವೇರಿಸಿತ್ತು. ಆದರೆ ದೊಡ್ಡವರು ಆರೋಪಿ ಸ್ಥಾನದಲ್ಲಿರುವ ಗುಮಾನಿಯಿಂದಾಗಿ ಕಾವು ಮೇಲೇರದೇ ಅಲ್ಲಿಯೇ ಬೂದಿ ಮುಚ್ಚಿದ ಕೆಂಡವಾಗಿ ಉಳಿದಿತ್ತು.

ಕಾಲೇಜಿಗೆ ಹೋದವಳು ಮರಳಿ ಬರಲಿಲ್ಲ

ಪದ್ಮಲತಾ ಕಾಲೇಜಿಗೆ ಹೋದವಳು ಮರಳಿ ಬರಲಿಲ್ಲ. ಅವಳನ್ನು ಕಿಡ್ನಾಪ್ ಮಾಡಲಾಯಿತು. ಮತ್ತು ಐವತ್ತೇಳು ದಿನಗಳ ನಂತರ ನೆರಿಯ ಹೊಳೆಯ ಪಕ್ಕದಲ್ಲಿ ಕಲ್ಲು ಬಂಡೆಯ ಮೇಲೆ ದೇಹ ಸಿಕ್ಕಿತು. ಜೀರ್ಣವಾಗಿ ಹೋದ ದೇಹದ ಮೇಲಿದ್ದ ವಸ್ತ್ರ, ಕೈಯ್ಯಲ್ಲಿದ್ದ ವಾಚು ಅವಳ ಗುರುತು ಕೊಟ್ಟಿತ್ತು. ಎಂದರೆ ಬಾಲಕಿಯನ್ನು ತಮಗೆ ಬೇಕಾದ ಹಾಗೆಲ್ಲ ಬಳಸಿ ಕೊಂದು ಹಾಕಿದ್ದೆಂದು ಯಾರೂ ಊಹಿಸಬಹುದು.

ಈ ಪ್ರಕರಣದಲ್ಲಿ ಇದೊಂದು ಉಳಿದ ಪ್ರಕರಣಗಳ ಬಗ್ಗೆ ಹೇಳುವ ಹಾಗೆ ನಡೆದ ಘಟನೆಯಲ್ಲ. ಇಲ್ಲಿ ಸ್ಥಳೀಯವಾಗಿ ನಡೆಯುವ ಯಾವ ವಿಷಯಗಳೂ ದೇಶದ ಕಾನೂನಿನ ಅಡಿಯಲ್ಲಿ ಅಥವಾ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಡೆಯುವುದನ್ನು ಊಹಿಸಲೂ ಸಾಧ್ಯವಿಲ್ಲದ್ದು. ಅಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಥಳೀಯ ಸಿಪಿಎಂ ಪಕ್ಷದ ಕಾರ್ಯಕರ್ತರು ಚುನಾವಣೆಗೆ ಸ್ಪರ್ಧೆ ಮಾಡಿದ್ದು ಮತ್ತು ಅದರಲ್ಲಿ ಪದ್ಮಲತಾಳ ತಂದೆ ದೇವಾನಂದರೂ ಇದ್ದರು ಮತ್ತು ಸ್ಥಳಿಯ ಸಿಪಿಎಂ ಮುಖಂಡರೂ ಆಗಿದ್ದು ಚುನಾವಣೆಯಲ್ಲಿ ಸ್ಪರ್ಧೆ ಮಾಡದಂತೆ ಬಂದ ಒತ್ತಡಗಳಿಗೆ ತಲೆ ಬಾಗದ ಕಾರಣ, ಈ ಬಾಲೆಯ ಹತ್ಯೆ ಮತ್ತು ನಡೆದಿರಬಹುದಾದ ಅತ್ಯಾಚಾರಕ್ಕೆ ಕಾರಣ.

ಧಾರ್ಮಿಕ ಕ್ಷೇತ್ರವಾಗಿದ್ದು ಲಕ್ಷಾಂತರ ಜನರನ್ನು ಸೆಳೆಯುತ್ತಿರುವ ಅಪಾರ ಸಂಪತ್ತು ಮತ್ತು ಸಂಪನ್ಮೂಲಗಳ ಒಡೆತನ ಹೊಂದಿರುವ ಧರ್ಮಸ್ಥಳ ಅಸಹಜ ಸಾವುಗಳಿಗೂ ಅಷ್ಟೇ ಕುಖ್ಯಾತಿ ಪಡೆದಿದೆ. ಹಲವು ರೀತಿಯ ಅತಿಮಾನುಷ ಬಿರುದುಗಳನ್ನು ತಗುಲಿಸಿಕೊಂಡು ಅಸೀಮ ಪಾಳೆಯಗಾರಿಕೆಯನ್ನು ಮೆರೆಯುತ್ತಿರುವ ಪ್ರಖ್ಯಾತ ಕುಟುಂಬದ ಹಿಡಿತದಲ್ಲಿ ಇಡೀ ಪ್ರದೇಶವಿದೆ. ಕಣ್ಣಿಗೆ ಬಿದ್ದ ಸಮಸ್ತ ಹೆಣ್ಣು, ಹೊನ್ನು, ಮಣ್ಣು ಇವುಗಳನ್ನು ತಮ್ಮ ಖಾಸಗೀ ಆಸ್ತಿಗಳಾಗಿ ಪರಿಗಣಿಸಿ ಅವುಗಳನ್ನು ವಶಪಡಿಸಿಕೊಳ್ಳಲು ಯಾವ ಮಟ್ಟದ ದೌರ್ಜನ್ಯ ಎಸಗಲೂ ಹೇಸದ ರೀತಿಯ ವ್ಯವಹಾರಗಳು ಅಲ್ಲಿ ನಡೆಯುತ್ತಿವೆ.

ದುಃಖ ಮಡುಗಟ್ಟಿದ ಆ ಕುಟುಂಬದ ಹಿರಿ ಜೀವ ಪದ್ಮಲತಾಳ ತಾಯಿ. ಮಾತು, ನೆನಪು ಎರಡೂ ಕ್ಷೀಣಗೊಂಡಿದೆ. ಆದರೆ ಪದ್ಮಲತಾ ಹೆಸರು ಕಿವಿಗೆ ಬಿದ್ದಾಗ ಕಣ್ಣಲ್ಲಿ ಫಳಕ್ಕನೇ ನೀರು ಜಿನುಗುತ್ತದೆ. ನಿಧಾನವಾಗಿ ನೆನಪಿನ ಕಟ್ಟು ಬಿಚ್ಚಿದಂತೆ ಮಗಳು ಕಾಣೆಯಾದ ದಿನವನ್ನು ನೆನಪಿಸಿಕೊಂಡು ಕಾಲೇಜಿಗೆ ಹೋಗಿ ಬರುತ್ತೇನೆ ಎಂದು ಹೋದವಳು ಬಂದಿಲ್ಲ. ಧರ್ಮಸ್ಥಳದವರೇ ಅವಳನ್ನು ಕರೆದುಕೊಂಡು ಹೋದರು. ಪೋಲಿಸರು ನಮಗೆ ಸಹಾಯ ಮಾಡಲಿಲ್ಲ ಎನ್ನುವ ಮಾತು ತಡೆ ತಡೆದು ಹೊರಬರುತ್ತದೆ. ದೈನ್ಯತೆಯೇ ಮೂರ್ತಿವೆತ್ತಂತೆ ಆಕೆ ಎಲ್ಲರನ್ನೂ ನೋಡುವಾಗ ಕರುಳು ಕಿತ್ತು ಬಂದಂತೆ ಆಗುತ್ತದೆ.



ಪದ್ಮಲತಾ ಕುಟುಂಬದವರನ್ನು ಭೇಟಿ ಮಾಡಿದ ಸಿಪಿಐ(ಎಂ) ಮುಖಂಡರು

ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ ಕಾರಣಕ್ಕಾಗಿ

80ರ ದಶಕದಲ್ಲಿ ಅಲ್ಲಿನ ಪಾಳೆಯಗಾರಿ ಶಕ್ತಿಗಳಿಗೆ ಮೊದಲ ಪೆಟ್ಟು ಕೊಟ್ಟಿದ್ದು ಸಿಪಿಎಂ ಪಕ್ಷ. ತಮ್ಮ ಕುಟುಂಬದ ಕಣ್ಸನ್ನೆಗೆ ಎಲ್ಲವೂ ನಡೆಯಬೇಕು ಎನ್ನುವ ಧೋರಣೆಯ ಭಾಗವಾಗಿ ಆ ಪ್ರದೇಶದ ಚುನಾವಣೆಗಳ ಅಭ್ಯರ್ಥಿಗಳನ್ನೂ ದೊಡ್ಡವರೇ ನಿರ್ಧರಿಸುವ ಪರಿಪಾಠಕ್ಕೆ ಮೊದಲ ಸವಾಲು ಸಿಪಿಎಂ ಪಕ್ಷದ್ದಾಗಿತ್ತು. ಪಂಚಾಯತ್ ಚುನಾವಣೆಯಲ್ಲಿ ಪಕ್ಷದ ನಿರ್ಧಾರಕ್ಕನುಗುಣವಾಗಿ ಸ್ಪರ್ಧೆ ಮಾಡಿದ ಕಾರಣಕ್ಕೆ ಕರುಳ ಕುಡಿಯಾದ ಪದ್ಮಲತಾಳ ಬಲಿಕೊಡುವ ಸ್ಥಿತಿ ಸಂಗಾತಿ ದೇವಾನಂದ್ ಅವರದಾಗಿತ್ತು. ಅದರ ಬೆನ್ನಲ್ಲೇ ನಡೆದ ಹಲವು ಅಸಹಜ ಸಾವು ಹೆಸರಿನ ಹತ್ಯೆ, ಕೊಲೆ, ಅತ್ಯಾಚಾರಗಳ ವಿರುದ್ಧವೂ ಹೋರಾಟಗಳು, ಪಾದಯಾತ್ರೆ, ಸಾರ್ವಜನಿಕ ಪ್ರತಿಭಟನೆಗಳು ಜಿಲ್ಲಾ ಕೇಂದ್ರದಲ್ಲಿ ಮತ್ತು ರಾಜಧಾನಿ ಬೆಂಗಳೂರಿನಲ್ಲಿ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ನಡೆದವು.

ಈ ಅವಧಿಯಲ್ಲಿ ನಡೆದ ಆನೆ ಮಾವುತ ನಾರಾಯಣನ ಸಾವು ನೇರವಾಗಿ ಭೂಮಿಗೆ ಸಂಬಂಧಿಸಿದ ಪ್ರಕರಣದಲ್ಲಿ ಬೆಳಕಿಗೆ ಬಂದ ಸಾವು, ಅಧ್ಯಾಪಕಿಯಾಗಿದ್ದ ವೇದವಲ್ಲಿ ನ್ಯಾಯವಾಗಿ ತನಗೆ ದಕ್ಕಬೇಕಿದ್ದ ಹುದ್ದೆಗೆ ಹೋರಾಟ ಮಾಡಿದ್ದಕ್ಕಾಗಿ ಜೀವಂತವಾಗಿ ದಹಿಸಲ್ಪಟ್ಟವಳು.

ಹಾವೂ ಸಾಯದ, ಕೋಲೂ ಮುರಿಯದ ಸರಕಾರದ ನಿಲುವು

ನಂತರ ಸೌಜನ್ಯ ಪ್ರಕರಣ ಮತ್ತೆ ದೊಡ್ಡ ಸುದ್ದಿಯಾಗಿ ತೀವ್ರ ಪ್ರತಿಭಟನೆಗೆ ಕಾರಣವಾಯಿತು. ಹೋರಾಟದ ತೀವ್ರತೆ ಪ್ರಕರಣವನ್ನು ಸಿಬಿಐಗೆ ಒಪ್ಪಿಸಲು ಕಾರಣವಾಯಿತು ಎನ್ನಬಹುದಾದರೂ, ಒಳಗಿನ ಬಹಿರಂಗ ಗುಟ್ಟು ಹೊರಬೀಳಲು ಸಮರ್ಥ ಸಾಕ್ಷಿಯಾಗಿ ಕಾರಣರಾಗಬಹುದಾದ ಕೊನೆಯ ಕೊಂಡಿಯನ್ನು ಕೊಂದು ಬಾವಿಗೆ ಹಾಕಿದ ನಂತರ ಸಿಬಿಐಗೆ ಒಪ್ಪಿಸಿ, ಹಾವೂ ಸಾಯದ, ಕೋಲೂ ಮುರಿಯದ ನಿಲುವನ್ನು ಆಗಲೂ ಇದ್ದ ಸಿದ್ದರಾಮಯ್ಯ ಸರಕಾರ ಮಾಡಿತ್ತು ಎಂದು ಪಿಸುಮಾತು ಬಹಿರಂಗವಾಗಿಯೇ ಕೇಳಿಸಿತ್ತು. ಅದಾಗಲೇ ಕೇಂದ್ರದಲ್ಲಿ ಮೋದಿಯವರ ನೇತೃತ್ವದ ಬಿಜೆಪಿ ಸರಕಾರ ಬಂದಿತ್ತು. ಆ ಪ್ರಕರಣದಲ್ಲಿ ನಿಷ್ಪಾಪಜೀವಿ ಸಂತೋಷ್‌ರಾವ್‌ರನ್ನು ಬಲಿಪಶು ಮಾಡಿ ಅವನ ಕುಟುಂಬವನ್ನು ದಯನೀಯ ಸ್ಥಿತಿಗೆ ತಳ್ಳಲಾಯಿತು.

ತನಿಖಾಧಿಕಾರಿಗಳು ಎಸಗಿದ ಗುರುತರ ಲೋಪಗಳನ್ನು ಗುರುತಿಸಲು ಆದೇಶ

ಪ್ರಕರಣದ ತನಿಖೆ ನಡೆಸಿದ ಸಿಬಿಐ ಸಲ್ಲಿಸಿದ ತನಿಖಾ ವರದಿಯ ಮೂಲಕವೇ ಹಲವು ದೋಷಗಳನ್ನು ಪತ್ತೆ ಮಾಡಿದ ಸಿಬಿಐ ನ್ಯಾಯಾಲಯವು ಸಂತೋಷ್‌ರಾವ್ ರವರನ್ನು ನಿರ್ದೋಷಿ ಎಂದು ಬಿಡುಗಡೆ ಮಾಡಿತು. ಜೊತೆಗೇ ಪ್ರಾಥಮಿಕ ಹಂತದಲ್ಲಿ ತನಿಖಾಧಿಕಾರಿಗಳು ಎಸಗಿದ ಗುರುತರ ಲೋಪಗಳನ್ನು ಗುರುತಿಸಿ ಅವರ ಮೇಲೆ ಕ್ರಮಕೈಗೊಳ್ಳಲು ಸರಕಾರಕ್ಕೆ ಆದೇಶ ನೀಡಿತು. ಆದೇಶ ಜಾರಿಗೆ ಒತ್ತಾಯಿಸಿ ದೊಡ್ಡ ಪ್ರತಿಭಟನೆ ಬೆಂಗಳೂರಿನಲ್ಲಿ ಹಾಗೂ ರಾಜ್ಯದ ಎಲ್ಲ ಕಡೆಗಳಿಂದ ಕಿತ್ತೆದ್ದು ಜನರು ಬಂದ ಬೆಳ್ತಂಗಡಿ ಚಲೋಗಳು ನಮ್ಮ ಮುಂದೊಡಗಿನಲ್ಲಿ ನಡೆದಿತ್ತು. ಪ್ರಕರಣ ಅಲ್ಲಿಗೇ ನಿಂತಿದೆ.

ಈ ಸಂಗತಿಗಳು ಮತ್ತೊಮ್ಮೆ ಬೆಳಕಿಗೆ

ಇದೇ ಅವಧಿಯಲ್ಲಿ ಆಗಾಗ ಈ ಸಂಗತಿಗಳು ಒಂದಲ್ಲ ಒಂದು ರೀತಿಯಲ್ಲಿ ಬೆಳಕಿಗೆ ಬರುತ್ತಿದ್ದು ಸಮೀರ್ ಹೆಸರಿನ ಯೂಟ್ಯೂಬರ್ ಯುವಕ ಮಾಡಿ ಹರಿಬಿಟ್ಟ ವಿಡಿಯೋ ಒಂದು ಸಂಚಲನವನ್ನು ಮೂಡಿಸಿತು. ಅದಾದ ಕೆಲವೇ ದಿನಗಳಲ್ಲಿ ಅನಾಮಿಕನೊಬ್ಬ ತಾನು ಧರ್ಮಸ್ಥಳದ ಸ್ವಚ್ಛತಾ ಕೆಲಸದಲ್ಲಿ ತೊಡಗಿದ ವ್ಯಕ್ತಿ, ಹಲವಾರು ಅಸಹಜ ಸಾವಿನ ಶವಗಳನ್ನು ತನ್ನಿಂದ ಹೂಳಿಸಲಾಗಿದೆ, ತಾನೀಗ ಪಶ್ಚಾತ್ತಾಪದಿಂದ ಕೊರಗುತ್ತಿದ್ದೇನೆ ಎಂದು ಕೆಲವು ವಕೀಲರ ಜೊತೆ ಬಂದು ದೂರು ದಾಖಲಿಸಿ, ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದೂ ಆಯಿತು.

ಎಸ್‌ಐಟಿ ನೇಮಕ

ಪ್ರಾರಂಭದಲ್ಲಿ ತನ್ನ ಎಂದಿನ ವರಸೆಯನ್ನೇ ಸರಕಾರ ಮುಂದುವರೆಸಿತು. ಗೃಹಮಂತ್ರಿಗಳು, ಮುಖ್ಯಮಂತ್ರಿಗಳು ಅದೊಂದು ಸಂಗತಿಯೇ ಅಲ್ಲವೆಂಬಂತೆ ವರ್ತಿಸಿದರಾದರೂ ಸಾಮಾಜಿಕ ಜಾಲತಾಣದ ಅಬ್ಬರವೂ ಸೇರಿದಂತೆ ಉಂಟಾದ ಒತ್ತಡದಿಂದಾಗಿ ಎಸ್‌ಐಟಿಯನ್ನು ನೇಮಕ ಮಾಡಿದೆ. ಪೊಲೀಸ್ ಅಧಿಕಾರಿಯಾಗಿ ಪ್ರಣವ್ ಕುಮಾರ್ ಮೊಹಂತಿ ಮತ್ತು ತಂಡದ ಇತರ ಅಧಿಕಾರಿಗಳು ದಕ್ಷತೆಯ ಹೆಸರು ಹೊತ್ತವರಾಗಿದ್ದು ಪ್ರಸಕ್ತವಾಗಿ, ಅವರ ನೇತೃತ್ವದ ತಂಡ ಸಕ್ಷಮವಾಗಿ ಕಾರ್ಯನಿರ್ವಹಿಸುತ್ತಿದೆ. SIT ಸ್ಥಳೀಯವಾಗಿ ತೆಗೆದುಕೊಳ್ಳುವ ನಿರ್ದಿಷ್ಟ ಕ್ರಮಗಳು ನಿರ್ಣಾಯಕವಾಗಬಹುದು. ರಚನೆಯಾದ ನಂತರ ಸಂಘಟನೆಗಳು, ವಕೀಲರುಗಳ ಒತ್ತಾಯದಂತೆ ಒಂದು ಸಹಾಯ ದೂರವಾಣಿಯನ್ನು ಮೀಸಲಿಡಲಾಗಿದೆ. ದೂರು ಸ್ವೀಕರಿಸಲು, ವಿಚಾರಣೆ ಮುಂತಾದವುಗಳನ್ನು ನಡೆಸಲು ಎಸ್‌ಐಟಿಯ ವ್ಯಾಪ್ತಿಯಲ್ಲಿಯೇ ಪೊಲೀಸ್ ಠಾಣೆಯನ್ನೂ ತೆರೆದಿದೆ.

ಪತ್ತೆಯಾದ ಅಸ್ಥಿಪಂಜರ

SIT ನೇಮಕವಾದ ಬೆನ್ನಲ್ಲೇ ಅನನ್ಯ ಭಟ್ ಹೆಸರಿನ ಕಾಣೆಯಾದ ಯುವತಿಯ ತಾಯಿ ಸುಜಾತಾ ಭಟ್ ದೂರು ದಾಖಲಿಸಿ ಪತ್ತೆಯಾದ ಅಸ್ಥಿಪಂಜರದ ಡಿಎನ್‌ಎ ಪರೀಕ್ಷೆಗೆ ಒಳಪಡಿಸಬೇಕು ತನ್ನ ಮಗಳ ಅಸ್ಥಿಪಂಜರ ದೊರೆತರೆ ಅದಕ್ಕೆ ಸಂಸ್ಕಾರ ಮಾಡಿ ಸಮಾಧಾನ ತಂದುಕೊಳ್ಳುವುದಾಗಿ ಮುಂದೆ ಬಂದಿದ್ದಾರೆ. ಎಸ್.ಐ.ಟಿ ತಂಡದ ಒಬ್ಬ ಸದಸ್ಯರಾಗಿರುವ ಇನ್‌ಸ್ಪೆಕ್ಟರ್ ಬಗ್ಗೆ ಅಪಸ್ವರ ಕೇಳಿ ಬಂದಿದೆಯಾದರೂ ಇದುವರೆಗಿನ ಕೆಲಸಗಳು ಮೇಲ್ನೋಟಕ್ಕೆ ಸಮರ್ಪಕವಾಗಿ ಕಾಣುತ್ತಿದೆ.

ಹಿಂದೂಗಳ ಪಾರುಪತ್ತೆಗೆ ಒಪ್ಪಿಸಬೇಕು ಎಂಬ ವಾದವೂ ಇದೆ

ಈ ಇಡೀ ಪ್ರಕರಣದಲ್ಲಿ ಇನ್ನೊಂದು ಮಗ್ಗುಲೂ ಇದೆ. ಅದೆಂದರೆ ಧರ್ಮಸ್ಥಳದ ಮಂಜುನಾಥ–ಅಣ್ಣಪ್ಪ ಹೆಸರಲ್ಲಿ ಅಸಂಖ್ಯಾತ ಭಕ್ತರನ್ನು ಹೊಂದಿರುವ ಮತ್ತು ಅಪಾರ ಸಂಪತ್ತು ಮತ್ತು ಸಂಪನ್ಮೂಲ ಹೊಂದಿರುವ ದೇವಾಲಯವು ಹಿಂದೂ ಧಾರ್ಮಿಕ ಕ್ಷೇತ್ರವಾಗಿದ್ದು ಅದರ ಪಾರುಪತ್ತೆ ನಡೆಸುತ್ತಿರುವ ಹೆಗ್ಗಡೆ ಕುಟುಂಬ ಜೈನ ಧರ್ಮದವರಾಗಿರುವುದರಿಂದ ಅದನ್ನು ಹಿಂದೂಗಳ ಪಾರುಪತ್ತೆಗೆ ಒಪ್ಪಿಸಬೇಕು ಎಂಬ ವಾದ. ಇನ್ನೊಂದು ಬಗೆಯಲ್ಲಿ ಯೂಟ್ಯೂಬ್ ಚಾನಲ್‌ಗಳು ವಿವರ ತನಿಖೆ, ಪತ್ತೆದಾರಿ ಕೆಲಸಗಳನ್ನು ಮಾಡುತ್ತ ಸ್ಥಳೀಯವಾಗಿ ಹಲವು ಸತ್ಯಗಳನ್ನು ಬಯಲು ಮಾಡುತ್ತಿವೆ.

ಹೆಸರು ಪ್ರಸ್ತಾಪಕ್ಕೆ ನಿರ್ಬಂಧ ತಂದರು

ಅನಾಮಿಕ ವ್ಯಕ್ತಿಯ ದೂರಿನ ಸತ್ಯಾಸತ್ಯತೆಯನ್ನು ಪರೀಕ್ಷಿಸಲೋ ಎಂಬಂತೆ ರಚನೆಯಾಗಿರುವ ಎಸ್‌ಐಟಿ ತನ್ನ ಕೆಲಸವನ್ನು ಪ್ರಾರಂಭಿಸಿದೆ. ಮೊದಲ ಹಂತದಲ್ಲಿ ನಿರಾಶಾದಾಯಕ ಎನಿಸಿದರೂ ನಂತರದ ದಿನಗಳಲ್ಲಿ ಕೆಲವು ಕುರುಹುಗಳು ಗೋಚರಿಸಿವೆ ಎಂದು ಮಾಧ್ಯಮಗಳ ವರದಿಗಳು ಬರುತ್ತಿವೆ. ಈ ಎಲ್ಲ ಬೆಳವಣಿಗೆಗಳನ್ನು ಕುಂಠಿತಗೊಳಿಸುವ ನಿಟ್ಟಿನಲ್ಲಿ ಸಿಬಿಐ ನ್ಯಾಯಾಲಯದ ತೀರ್ಪು ಬಂದಾಗಲೇ ಕೆಲವರು ನ್ಯಾಯಾಲಯಕ್ಕೆ ಹೋಗಿ ಸುದ್ದಿ ಪ್ರಸಾರ, ಹೆಸರು ಪ್ರಸ್ತಾಪಕ್ಕೆ ನಿರ್ಬಂಧ ತಂದ ಪ್ರಸಂಗ ಮತ್ತು ಕರ್ನಾಟಕ ಹೈಕೋರ್ಟ್ ಅದನ್ನು ತೆಗೆದು ಹಾಕಿದ್ದೂ ಆಯಿತು. ಸ್ವತಂತ್ರ ಪತ್ರಿಕಾರಂಗವೆಂಬುದಕ್ಕೆ ಅವಕಾಶವಿದ್ದೇ ಇದೆಯಾದರೂ ತಮ್ಮ ವೈಯಕ್ತಿಕ ತೇಜೋವಧೆಯಾಗುವುದು ಎಂಬ ನೆಪದಲ್ಲಿ ಗುರುತರ ಆರೋಪ ಇರುವವರೂ ನ್ಯಾಯಾಲಯದ ಮೊರೆ ಹೋಗಿ ಏಕಪಕ್ಷೀಯ ನಿರ್ಬಂಧಕಾಜ್ಞೆ ತರುವುದು ಈಗ ಒಂದು ಸಾಮಾನ್ಯ ಸಂಗತಿಯಾಗಿದೆ.

ಸ್ವತಂತ್ರ ಪತ್ರಕರ್ತರ ಮೇಲೆ ದೈಹಿಕ ಧಾಳಿ

ನೇರವಾಗಿ ಸ್ವತಂತ್ರ ಪತ್ರಕರ್ತರ ಮೇಲೆ ದೈಹಿಕ ಧಾಳಿಯೂ ನಡೆದಿದ್ದು ಅದು ತಿಮ್ಮರೋಡಿ ಮತ್ತು ಸ್ಥಳೀಯ ಇತರ ವ್ಯಕ್ತಿಗಳ ಮಧ್ಯೆ ನಡೆದ ಗದ್ದಲವೂ ಸೇರಿಕೊಂಡು ನಡೆದಿದೆ ಎನ್ನಲಾಗುತ್ತಿದೆ. ಈ ಸಂದರ್ಭವನ್ನು ಬಳಸಿಕೊಂಡು ಹೋರಾಟಗಾರರ ಮೇಲೆ ಕೆಟ್ಟ ಅಭಿಪ್ರಾಯ ಬರುವಂತೆ ಮಾಡಲು ಸುವರ್ಣ ನ್ಯೂಸ್ ಚಾನೆಲ್ ಯತ್ನಿಸಿದ್ದು, ತನ್ನ ವರದಿಗಾರರಿಗೆ ಹೊಡೆಯಲಾಗಿದೆ ಎಂದು ಸುಳ್ಳು ಸುದ್ದಿ ಪ್ರಸಾರಿಸಿದೆ ಎಂಬ ದೂರು ಅಜಿತ್

ಪುಟ 13 ನೋಡಿ



ಒಂದು ಮಹಾ ಚುನಾವಣಾ ವಂಚನೆ

ನೀಲೋತ್ಪಲ್ ಬಸು
ಅನು: ವಿಶ್ವ

ಭಾರತ ಚುನಾವಣಾ ಆಯೋಗ ಇತ್ತೀಚೆಗೆ ನೀಡಿದ ಮಿಂಚಿನ ಜಾಹಿರಾತುಗಳ ಸರಣಿಯು ಬೂಟಾಟಿಕೆಗೆ ಪಠ್ಯ ಪುಸ್ತಕದಂಥ ಅತ್ಯುತ್ತಮ ದೃಷ್ಟಾಂತವಾಗಿದೆ. ಬಿಹಾರ ವಿಧಾನಸಭೆಗೆ ಈ ವರ್ಷ ನಡೆಯಬೇಕಿರುವ ಚುನಾವಣೆಗಾಗಿ ಕೈಗೊಳ್ಳಲಾಗಿರುವ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಒಂದು ಒಳಗೊಳ್ಳುವ ಪ್ರಕ್ರಿಯೆಯಾಗಿದೆ ಎಂದು ತೋರಿಸುವ ಉದ್ದೇಶದಿಂದ ಇದು ಎಲ್ಲ ರಾಜಕೀಯ ಪಕ್ಷಗಳನ್ನು ಒಳಗೊಂಡ ಪ್ರಕ್ರಿಯಾಗಿದೆ ಎಂದು ಜಾಹಿರಾತಿನ ಪಠ್ಯ ಹೇಳಿದೆ. ದೇಶದಲ್ಲಿ ಇದುವರೆಗೆ ಯಾವುದೇ ಚುನಾವಣಾ ಸುಧಾರಣೆಯನ್ನು ಚುನಾವಣಾ ಆಯೋಗ (ಇಸಿ) ಮತ್ತು ರಾಜಕೀಯ ಪಕ್ಷಗಳು ಜಂಟಿಯಾಗಿ ಅನುಸರಿಸಿದ್ದಿಲ್ಲ. ಮಾದರಿ ನೀತಿ ಸಂಹಿತೆಯು (ಎಂಸಿಸಿ) ರಾಜಕೀಯ ಪಕ್ಷಗಳ ಒಮ್ಮತದ ಅಭಿಪ್ರಾಯವನ್ನು ಆಧರಿಸಿದೆ. ಎಂಸಿಸಿಗೆ ಕಾನೂನಾತ್ಮಕ ಬೆಂಬಲ ಇಲ್ಲದಿದ್ದರೂ ಈ ಪ್ರಕ್ರಿಯೆಯ ಬಲ ಮತ್ತು ಸ್ಥಿತಿಸ್ಥಾಪಕತ್ವವು ಅದರ ಅನುಷ್ಠಾನಕ್ಕೆ ಸವಾಲುಗಳನ್ನು ಒಡ್ಡಿದೆ.

ಇದಕ್ಕೆ ತೀವ್ರ ತದ್ವಿರುದ್ಧ ಎನ್ನುವಂತೆ ಬಿಹಾರದ ಎಸ್‌ಐಆರ್ ವಿಚಾರದಲ್ಲಿ, ರಾಷ್ಟ್ರೀಯ ಪಕ್ಷಗಳು ಇಸಿ ಜತೆ ಸಮಾಲೋಚನೆಗಳನ್ನು ನಡೆಸಿದರೂ ಮುಂಬರುವ ಬೃಹತ್ ಪ್ರಕ್ರಿಯೆ ಬಗ್ಗೆ ಆಯೋಗವು ಒಂದಿಷ್ಟೂ ಸುಳಿವನ್ನು ಹಂಚಿಕೊಳ್ಳಲಿಲ್ಲ. ಹಾಗಾಗಿ, ಒಳಗೊಳ್ಳುವ ಕುರಿತು ಆಯೋಗವು ಸಾರ್ವಜನಿಕವಾಗಿ ಹೇಳಿದ್ದರಲ್ಲಿ ಯಾವುದೇ ಸತ್ಯಾಂಶವಿಲ್ಲ.

ಆದರೆ, ಎಸ್‌ಐಆರ್ ಪ್ರಕ್ರಿಯೆಯ ತೀವ್ರ ಕಳವಳಕರಿಯಾದ ಸಂಶಯಾಸ್ಪದ ಉದ್ದೇಶವು ಮೊದಲ ಹಂತದಲ್ಲೇ ಬಹಿರಂಗವಾಗಿತ್ತು. ವಾಸ್ತವವಾಗಿ ಇದು ಮತದಾರರ ಪಟ್ಟಿಯ ಪರಿಷ್ಕರಣೆ ಅಲ್ಲವೇ ಅಲ್ಲ. ಆದರೆ, ಯಾದಿಯನ್ನು ಹೊಚ್ಚ ಹೊಸದಾಗಿ ರೂಪಿಸುವುದೇ ಅದರ ಉದ್ದೇಶ ಆಗಿತ್ತು. ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಮೂಲಭೂತ ಧೋರಣೆಗೆ ಸಾರ್ವತ್ರಿಕ ವಯಸ್ಕ ಮತದಾನದ ಆಧಾರದ ಸಂಸದೀಯ ಪ್ರಜಾಪ್ರಭುತ್ವದ ಮಾದರಿಯನ್ನು ಅನುಸರಿಸಲಾಯಿತು. ಪ್ರಥಮ ಚುನಾವಣಾ ಆಯುಕ್ತರು (ಕಮಿಷನರ್) ಎರಡು ಮೂಲಭೂತ ಮಾನದಂಡಗಳ ಮೂಲಕ ಅದನ್ನು ಸಾಕಾರಗೊಳಿಸಿದರು. ಮತದಾನದ ಹಕ್ಕನ್ನು ಸಾರ್ವತ್ರಿಕಗೊಳಿಸುವುದು ಮತ್ತು ಮತದಾರರ ಯಾದಿಯನ್ನು ಸಿದ್ಧಗೊಳಿಸುವ ಹೊಣೆ ಚುನಾವಣೆ ಆಯೋಗದ್ದೇ ಹೊರತು ವೈಯಕ್ತಿಕ ಮತದಾರರದ್ದಲ್ಲ ಎನ್ನುವುದೇ ಆ ಎರಡು ಅಂಶಗಳು. ಸಾರ್ವತ್ರಿಕ ವಯಸ್ಕ ಮತದಾನವನ್ನು ಜಾರಿಗೊಳಿಸಬೇಕೆಂಬ ಸಂವಿಧಾನದ 326ನೇ ಆರ್ಟಿಕಲ್ ನಿರ್ದೇಶನದ ಪ್ರಕಾರವೇ ಅದು ಆಗಬೇಕಿತ್ತು, ಆಗಿದೆ.

ಪೌರತ್ವವನ್ನು ಸಾಬೀತುಪಡಿಸುವುದು ಯಾವತ್ತೂ ಮತದಾರರ ಜವಾಬ್ದಾರಿ ಆಗಿರಲಿಲ್ಲ. ಆರ್ಟಿಕಲ್ 326, ಮತದಾನದ ಸಾರ್ವತ್ರಿಕ ಹಕ್ಕಿನ ಬಗ್ಗೆ ತುಂಬಾ ಸ್ಪಷ್ಟವಾಗಿ ಹೇಳಿದೆಯೇ ಹೊರತು, ಪೌರತ್ವದ ಕುರಿತು ಅಲ್ಲ ಎನ್ನುವುದು ಈ ವಿಧಿಯನ್ನು ಆಳವಾಗಿ ಪರಿಶೀಲಿಸಿದಾಗ ಗೊತ್ತಾಗುತ್ತದೆ. ಮತದಾರರ ಯಾದಿಯ ಪರಿಷ್ಕರಣೆಯು ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಕಾಲಕಾಲಕ್ಕೆ ಅದನ್ನು ಅಪ್ಡೇಟ್ ಮಾಡುವುದನ್ನು ಅದು ಖಾತರಿಪಡಿಸುತ್ತದೆ.

ಪವಿತ್ರವೆಂದು ಈಗಿನ ಇಸಿಐ (ಚುನಾವಣಾ ಆಯುಕ್ತರು) ಅವರೇ ಒಪ್ಪಿಕೊಂಡಿರುವ 2003ರ ಪರಿಷ್ಕರಣೆಯಲ್ಲಿ ಕೂಡ ಮತದಾರರಿಂದ ಪೌರತ್ವದ ಪುರಾವೆಯನ್ನು ಸ್ಪಷ್ಟವಾಗಿ ಕೇಳಿರಲಿಲ್ಲ. ಇಸಿಐ ದಾಖಲೆ ಸಂಗ್ರಹಾಗಾರದ ದಾಖಲೆಗಳು ಮತ್ತು ಆ ಸಮಯದ ಮಾಧ್ಯಮ ವರದಿಗಳು ಕೂಡ ಈ ವಾಸ್ತವವನ್ನೇ ದೃಢಪಡಿಸುತ್ತವೆ. ತೀವ್ರವೂ ಅಲ್ಲದ ಸಂಕ್ಷೇಪವೂ (ಸಮ್ಮರಿ) ಅಲ್ಲದ ಎಸ್‌ಐಆರ್ ಒಂದು ಉತ್ಪಾದಿತ ನಾಮಕರಣವಾಗಿದೆ; ಹೊರತುಪಡಿಸುವಿಕೆಯ ಉದ್ದೇಶ ಸಾಧಿಸುವುದೇ ಅದರ ಗುರಿಯಾಗಿದೆ. ಆರಂಭದಿಂದಲೂ ನಡೆದುಕೊಂಡು ಬಂದಿರುವ ಮೂಲಭೂತ ನಿಯಮಗಳಿಗೆ ವಿರುದ್ಧವಾಗಿ ಪೌರತ್ವ ಸಾಬೀತಿನ ಹೊಣೆಯನ್ನು ಮತದಾರರ ಮೇಲೆ ಎಸ್‌ಐಆರ್ ಹೊರಿಸಿದೆ.

ಜುಲೈ 27ರಂದು ಬಿಡುಗಡೆ ಮಾಡಿದ ಇಸಿಐ ಮಾಧ್ಯಮ ಹೇಳಿಕೆ ಪ್ರಕಾರ, ಒಟ್ಟು 7.24 ಕೋಟಿ ಮತದಾರರ ಅರ್ಜಿಗಳನ್ನು ಸಂಗ್ರಹಿಸಲಾಗಿದೆ. ಎಸ್‌ಐಆರ್ ಪ್ರಕ್ರಿಯೆಯ ಆರಂಭವಾದ 2025ರ ಜೂನ್ 24ರಂದು ಇದ್ದ ರಾಜ್ಯ ಮತದಾರರ ಯಾದಿಯಲ್ಲಿನ 7.89 ಕೋಟಿ ಮತದಾರರ ಬದಲು ಕರಡು ಮತದಾರರ ಪಟ್ಟಿಯಲ್ಲಿ (ಡಿಇಆರ್) ಕೇವಲ ಈ ಹೆಸರುಗಳನ್ನು ಪಟ್ಟಿಮಾಡಲಾಗುತ್ತದೆ. ಇನ್ನುಳಿದವರು ಮೃತಪಟ್ಟಿದ್ದಾರೆ (22 ಲಕ್ಷ), ಅಥವಾ ಕಾಯಂ ಆಗಿ ಸ್ಥಳಾಂತರಗೊಂಡಿದ್ದಾರೆ ಅಥವಾ ಪತ್ತೆ ಹಚ್ಚಲಾಗುತ್ತಿಲ್ಲ (36 ಲಕ್ಷ) ಅಥವಾ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ನೊಂದಾಯಿಸಿಕೊಂಡವರು (7 ಲಕ್ಷ) ಅಥವಾ ಒಂದಲ್ಲ ಒಂದು ಕಾರಣಕ್ಕೆ ಮತದಾರರಾಗಿ ನೊಂದಾಯಿಸಿಕೊಳ್ಳಲು ಸಿದ್ಧರಿಲ್ಲದವರು ಎಂಬುದಾಗಿ ಇಸಿಐ ಹೇಳಿದೆ. ಈ ಕೊನೆಯ ವಿಭಾಗದ ಸಂಖ್ಯೆಯನ್ನು ಆಯೋಗ ತಿಳಿಸಿಲ್ಲ. ಎಸ್‌ಐಆರ್ ಆದೇಶದ ಪ್ರಕಾರ ಈ 65 ಲಕ್ಷ ಹೆಸರುಗಳು ಕರಡು ಮತದಾರರ ಪಟ್ಟಿಯಲ್ಲಿ (ಡಿಇಆರ್) ನಮೂದಾಗುವುದಿಲ್ಲ.

ಹೌದು. ಇವು ಬೆಚ್ಚಿ ಬೀಳಿಸುವಂಥ ಸಂಖ್ಯೆಗಳಾಗಿವೆ. 2025ರಲ್ಲಿ ಬಿಹಾರದ ಮತದಾರರ ಗಾತ್ರವು 2020ರ ವಿಧಾನಸಭೆ ಚುನಾವಣೆಯಲ್ಲಿದ್ದ 7.36 ಕೋಟಿಗಿಂತ ಚಿಕ್ಕದಾಗಲಿದೆ. ಹಿಂದಿನ ದಾಖಲೆಗಳನ್ನು ಗಮನಿಸಿದರೆ ಇದು ತೀರಾ ಅಸಹಜವಾಗಿದೆ.

ವ್ಯಕ್ತಿಯೊಬ್ಬರು ರಾಜ್ಯದಿಂದ ಹೊರಗೆ 'ಕಾಯಂ ಆಗಿ ವಲಸೆ ಹೋಗಿದ್ದಾರೆ' ಎಂದು ನಿರ್ಧಾರಕ್ಕೆ ಬರುವ ಮೊದಲು, ಅಂಥ ಪ್ರತಿಯೊಂದು ಪ್ರಕರಣದ ಬಗ್ಗೆ ವಿಸ್ತ್ರತ ತನಿಖೆ ನಡೆಸಬೇಕಲ್ಲವೇ? 37 ಲಕ್ಷ ವ್ಯಕ್ತಿಗಳನ್ನು ಒಳಗೊಂಡ ಇಂಥ ತನಿಖೆಯೊಂದನ್ನು 30 ದಿನಗಳ ಅವಧಿಯಲ್ಲಿ ಹೇಗೆ ನಡೆಸಲು ಸಾಧ್ಯ? ಶೇ. 90ರಷ್ಟು ವಲಸಿಗರಿಗೆ, ಅರ್ಜಿ ಫಾರ್ಮ್‌ಗಳನ್ನು ಸಲ್ಲಿಸುವುದು ಬಿಡಿ, ಎಸ್‌ಐಆರ್ ಬಗ್ಗೆಯೇ ಏನೇನೂ ಗೊತ್ತಿಲ್ಲ ಎನ್ನುವುದು ಬಿಹಾರದ ವಲಸೆ ಕಾರ್ಮಿಕರ ನಡುವೆ ನಡೆಸಲಾದ ಅಧ್ಯಯನವೊಂದರಿಂದ ತಿಳಿದು ಬಂದಿದೆ.

2025ರ ಜನವರಿಯಲ್ಲಿ ಮಾಡಲಾದ ಸಮ್ಮರಿ ಪರಿಷ್ಕರಣೆಯಲ್ಲಿ ಈ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿರುವುದರಿಂದ, ಸತ್ತಿದ್ದಾರೆಂದು ಘೋಷಿಸಲಾದ ದೊಡ್ಡ ಸಂಖ್ಯೆಯ ಪ್ರಶ್ನೆ ಬಗ್ಗೆ ಕೂಡ ಸಂಖ್ಯೆ ಎಷ್ಟೆಂಬುದನ್ನು ಹೇಳಲಾಗಿಲ್ಲ. ವಿಧಾನಸಭೆ ಕ್ಷೇತ್ರವಾರು (ಎಸಿ) ಇಡೀ ಡಿಇಆರ್ ಅನ್ನು ಪ್ರಕಟಿಸಿದ ನಂತರವಷ್ಟೇ ಇದು ತುಂಬಾ ಸ್ಪಷ್ಟವಾಗಲಿದೆ.

ಬಿಹಾರದ ಮತದಾರರ ಯಾದಿಯ ಗುಣಮಟ್ಟದ ಕುರಿತು ತೌಲನಿಕ ಮಲ್ಯಮಾಪನ ಮಾಡಲೆಂದು ಖ್ಯಾತ ಚುನಾವಣಾ ವಿಶ್ಲೇಷಕ ಯೋಗೇಂದ್ರ ಯಾದವ್ ಮತದಾರ ಜನಸಂಖ್ಯೆ (ಎಲೆಕ್ಟರ್ ಪಾಪ್ಯುಲೇಶನ್–ಇಆರ್) ಅನುಪಾತ ಪದ್ಧತಿಯನ್ನು ರೂಪಿಸಿದ್ದಾರೆ. ಬಿಹಾರದ ಮತದಾರರ ಯಾದಿಯಲ್ಲಿ ಶೇ. 20ರಷ್ಟು ನಕಲಿ ಮತದಾರರಿದ್ದು, ಅದನ್ನು ಸರಿಪಡಿಸಬೇಕಾಗಿದೆ ಎಂದು ವಿವಿಧ ಪ್ರತಿಪಕ್ಷ ನಾಯಕರ ನಿಯೋಗವೊಂದಕ್ಕೆ ಸಿಇಸಿ ಹೇಳಿದ್ದರಿಂದ ಇದು ಅತ್ಯಗತ್ಯವಾಗಿದೆ. ಪ್ರಕ್ರಿಯೆ ಪೂರ್ಣಗೊಳ್ಳುವುದಕ್ಕೂ ಮುನ್ನ, ಇಂಥ ನಿರ್ಧಾರಕ್ಕೆ ಬರುವುದಕ್ಕೆ ಆಧಾರವು ಪೂರ್ವನಿಯೋಜಿತ ಹಾಗೂ ವ್ಯಕ್ತಿನಿಷ್ಠವಾದುದು ಎಂದು ಕಾಣುತ್ತದೆ.

ರಾಷ್ಟ್ರೀಯ ಜನಸಂಖ್ಯಾ ಆಯೋಗ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಟೆಕ್ನಿಕಲ್ ಗ್ರೂಪ್ ಆನ್ ಪಾಪ್ಯುಲೇಶನ್ ಪ್ರೊಜೆಕ್ಷನ್ಸ್ (2019) ವರದಿಯಲ್ಲಿನ ಜನಗಣತಿ ಆಧಾರಿತ ಪ್ರೊಜೆಕ್ಷನ್‌ಗಳು (ರಾಜ್ಯವಾರು, ವರ್ಷವಾರು, ವಯೋಮಿತಿ ಗುಂಪುವಾರು) ಜನಸಂಖ್ಯಾ ದತ್ತಾಂಶಕ್ಕೆ ಉತ್ತಮ ಮೂಲವಾಗಿದೆ. ಭಾರತ ಸರಕಾರ ಮತ್ತು ಸ್ವತಃ ಇಸಿಐ ಕೂಡ 2025ರ ಜನವರಿಯಷ್ಟು ಈಚೆಗೂ ಈ ಅಂಕಿಸಂಖ್ಯೆಗಳನ್ನೇ ಬಳಸಿತ್ತು. ಡಿಇಆರ್‌ನಲ್ಲಿ ನಮೂದಿತ ಅರ್ಹ ಮತದಾರರ ಸಂಖ್ಯೆಯನ್ನು ಸಂಬಂಧಿತ ವಯೋಗುಂಪಿನಿಂದ ಭಾಗಿಸಿದರೆ ಇಪಿ ಅನುಪಾತ ಸಿಗುತ್ತದೆ.

ಶೇ. 100 ಅಂಕವು ಪರ್ಫೆಕ್ಟ್ ಮ್ಯಾಚ್‌ನ ಮಾದರಿ ಸನ್ನಿವೇಶವನ್ನು ಸೂಚಿಸುತ್ತದೆ. 2024ರಲ್ಲಿ ಅಖಿಲ ಭಾರತ ಇಪಿ ಅನುಪಾತವು ಆರೋಗ್ಯಕರವಾದ ಶೇ. 99 ಆಗಿತ್ತು ಎನ್ನುವುದನ್ನು ಅದು ತೋರಿಸುತ್ತದೆ. ಶೇ. 97ರಷ್ಟಿರುವ ಬಿಹಾರವು ರಾಷ್ಟ್ರೀಯ ಸರಾಸರಿಗಿಂತ ಸ್ವಲ್ಪ ಕೆಳಗಿದೆ ಅಷ್ಟೇ. ಈ ರೀತಿಯಾಗಿ, ಮತದಾರರ ಪಟ್ಟಿ ಉಬ್ಬಿಲ್ಲ, ಅದಕ್ಕೆ ಬದಲಾಗಿ ಸ್ವಲ್ಪ ಕುಗ್ಗಿದೆ. ಎಸ್‌ಐಆರ್ ಪ್ರಕ್ರಿಯೆ ಕುರಿತು ಆಯೋಗದ ಅಧಿಕಾರಿಗಳ ಅಧಿಕೃತ ಹೇಳಿಕೆಗಳೇ ಸೂಚಿಸುವಂತೆ ಪಟ್ಟಿಯನ್ನು ಇನ್ನಷ್ಟು ಕಡಿತಗೊಳಿಸಿದ್ದನ್ನು ಗಣನೆಗೆ ತೆಗೆದುಕೊಳ್ಳದಿದ್ದರೂ ಎಸ್‌ಐಆರ್ ಘೋಷಿಸಿದ ಜೂನ್ 24ರಂದು ಬಿಹಾರದ ಇಪಿ ಅನುಪಾತವು ಶೇ. 97 ಆಗಿತ್ತು. ಬಿಹಾರದ ಕಳೆದ ಐದು ಅಸೆಂಬ್ಲಿ ಚುನಾವಣೆಗಳಿಗೆ ಹೋಲಿಸಿದರೆ ಇದು ಹಠಾತ್ ಹಾಗೂ ತೀವ್ರ ಕುಸಿತವಾಗಿದೆ. ಇಷ್ಟು ಮಾತ್ರವಲ್ಲದೆ, ಇದು ಇತರ ಎಲ್ಲ ರಾಜ್ಯಗಳಿಗಿಂತ ಗಣನೀಯವಾಗಿ ಕಡಿಮೆಯಾಗಿದೆ.

11 ದಾಖಲೆಗಳ ಪೈಕಿ ಯಾವುದಾದರೂ ಒಂದನ್ನು ಸಲ್ಲಿಸಬೇಕೆಂಬ ನಿಯಮವನ್ನು ಮಧ್ಯದಲ್ಲೇ ಸಡಿಲಿಸಿದ ಇಸಿ, ಎಣಿಕೆ ಪ್ರಕ್ರಿಯೆ ಮುಗಿಯುವುದಕ್ಕೂ ಮುನ್ನ ಅರ್ಜಿಯನ್ನು ದ್ವಿಪ್ರತಿಯಲ್ಲಿ ಸಲ್ಲಿಸಿದರೆ ಸಾಕೆಂದು ಹೇಳಿತ್ತು. ಒಂದು ವೇಳೆ ಕೇಳಿದರೆ, ತೆಗೆದುಹಾಕಿದ್ದಕ್ಕೆ (ಡಿಲಿಶನ್) ವಿವರಣೆಯೊಂದಿಗೆ ಅರ್ಜಿಯ ಪ್ರತಿಗಳನ್ನು ಇಸಿ ಉತ್ಪಾದಿಸುವುದೇ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ.

ಇದುವರೆಗೆ ನಡೆಸಲಾದ ಕಳಪೆ ಹಾಗೂ ಯಾವುದೇ ವಿಶ್ವಾಸಾರ್ಹ ಪುರಾವೆಯಿಲ್ಲದ ಪ್ರಕ್ರಿಯೆ ಕುರಿತು ವ್ಯಾಪಕ ಮಾಧ್ಯಮ ವರದಿಗಳು ಪ್ರಕಟವಾಗಿವೆ. ಹಠಾತ್ತನೆ ಹಾಗೂ ಪಾರದರ್ಶಕವಲ್ಲದ ವಿಧಾನದಲ್ಲಿ ಕಡಿಮೆ ಅವಧಿಯಲ್ಲಿ ನಡೆದ ಬಿಹಾರದ ಎಸ್‌ಐಆರ್ ಒಂದು ವಂಚನೆ ಎಂದೇ ಪರಿಗಣಿಸಲಾಗುತ್ತದೆ. ಈ ನಡುವೆ, ಚುನಾವಣಾ ಆಯೋಗವು ಒಂದೇ ಒಂದು ಹೊಸ ಹೆಸರನ್ನು ಪಟ್ಟಿಗೆ ಸೇರ್ಪಡೆ ಮಾಡಿಲ್ಲ. ಇದು ಅಸಂಗತವಲ್ಲದೆ ಬೇರೇನೂ ಅಲ್ಲ. ಅಂತಿಮವಾಗಿ, ಸುಪ್ರೀಂ ಕೋರ್ಟ್ ಒತ್ತು ಕೊಟ್ಟು ಹೇಳಿರುವಂತೆ ಇದು 'ಸಾಮೂಹಿಕ ಹೊರತುಪಡಿಸುವಿಕೆಯೇ' ವಿನಃ 'ಸಾಮೂಹಿಕ ಒಳಗೊಳಿಸುವಿಕೆ' ಅಲ್ಲವೇ ಅಲ್ಲ.

ಆದ್ದರಿಂದ, ಸಾಂವಿಧಾನಿಕ ಹಕ್ಕಾದ, ಬಿಹಾರದಲ್ಲಿ 'ಮತದಾನದ ಹಕ್ಕು' ರಕ್ಷಿಸಲು ಹೋರಾಟಕ್ಕೆ ಮುಂದಾಗಬೇಕಿದೆ. ಒಂದು ವೇಳೆ ಚುನಾವಣೆ ಆಯೋಗವು ಎಸ್‌ಐಆರ್ ದೇಶದ ಉಳಿದ ಭಾಗಕ್ಕೂ ಅನ್ವಯವಾಗುತ್ತದೆ ಎಂದು ಹೇಳಿದರೆ ಈ ಹೋರಾಟವು ರಾಷ್ಟ್ರವ್ಯಾಪಿ ಆಗಲಿದೆ.

ಚುನಾವಣಾ ಆಯೋಗ ಅನುಮಾನಗಳನ್ನು ನಿವಾರಿಸಬೇಕು

ಚುನಾವಣಾ ಆಯೋಗ ರಾಜಕೀಯ ಪಕ್ಷಗಳು ಮತ್ತು ಇತರರು ಎತ್ತಿರುವ ವಿವಿಧ ಕಳವಳಗಳನ್ನು ಗಮನಕ್ಕೆ ತಗೊಳ್ಳುವ ಮೂಲಕ, ಚುನಾವಣಾ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ವಿಶ್ವಾಸವನ್ನು ಪುನಃಸ್ಥಾಪಿಸಲು ತುರ್ತು ಸರಿಪಡಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಇತ್ತೀಚಿನ ದಿನಗಳಲ್ಲಿ, ಚುನಾವಣೆಗಳ ನ್ಯಾಯಬದ್ಧತೆಯ ಬಗ್ಗೆ, ಮತದಾರ ಪಟ್ಟಿಗಳ ತಯಾರಿಕೆಯಲ್ಲಿನ, ವಿಶೇಷವಾಗಿ ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿನ ಅನಿಯಮಿತತೆಗಳಿಂದ ಹಿಡಿದು, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯ ಚುನಾವಣೆಗಳಲ್ಲಿ ಕಂಡುಬಂದ ದುರಾಚರಣೆಗಳವರೆಗಿನ, ಆಳುವ ಪಕ್ಷಕ್ಕೆ ಅನುಕೂಲ ಮಾಡಿಕೊಳ್ಳುವಂತೆ ಕಾಣುವ ನಡೆಗಳ ಬಗ್ಗೆ ಗಂಭೀರ ಪ್ರಶ್ನೆಗಳು ಎದ್ದಿವೆ.

ವಿರೋಧ ಪಕ್ಷಗಳು ಎತ್ತಿರುವ ಪ್ರಶ್ನೆಗಳ ಬಗ್ಗೆ ಅಮೂಲಾಗ್ರ ತನಿಖೆ ನಡೆಸುವುದು ಮತ್ತು ಆಳುವ ಪಕ್ಷದ ಜಗಳಗಂಟ ಸಹಯೋಗಿಯಂತೆ ಕಾರ್ಯನಿರ್ವಹಿಸದೆ, ತಾನು ಒಂದು ಪಾರದರ್ಶಕ ಮತ್ತು ನಿಷ್ಪಕ್ಷಪಾತ ಸಾಂವಿಧಾನಿಕ ಸಂಸ್ಥೆ ಎಂದು ಜನರಿಗೆ ಪ್ರದರ್ಶಿಸುವುದು ಚುನಾವಣಾ ಆಯೋಗದ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಕಲಬುರಗಿಯ ಕೇಂದ್ರಿಯ ವಿವಿ ಈಗ ವಿವಾದಗಳನ್ನು ತಾನೇ ಹುಟ್ಟುಹಾಕುತ್ತ ಇನ್ನಷ್ಟು ಸುದ್ದಿಯಲ್ಲಿದೆ. ಇದು ದಿನಗಳೆದಂತೆ ತನ್ನ ಅಸಲಿ ಚಹರೆಯನ್ನು ಅನಾವರಣಗೊಳಿಸುತ್ತಿದೆ. ವಿವಿಯಲ್ಲಿ ವಿದ್ಯಾರ್ಜನೆಯ ಬದಲಿಗೆ ಕೋಮುವ್ಯಾದಿಯಾರ್ಜನೆ ಮಾಡಲಾಗುತ್ತಿದೆ. ಈ ಕೋಮುವಾದದ ಫಲಿತವೆಂದರೆ ಮಹಿಳೆಯರನ್ನು, ದಲಿತರನ್ನು ಮತ್ತು ಅಲ್ಪಸಂಖ್ಯಾತರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುವುದು. ಮತ್ತು ವಿಶ್ವವಿದ್ಯಾಲಯವನ್ನೇ ಶ್ರೇಣೀಕರಣ ನಿಲುವುಗಳಿಗೆ ಸಜ್ಜುಗೊಳಿಸುವುದು. ದಲಿತ ಮತ್ತು ಮಹಿಳೆಯರಿಗೆ ಅಪಮಾನಗೊಳಿಸುವ, ತಾರತಮ್ಯದಿಂದ ಮನೋಬಲ ಕುಗ್ಗಿಸುವ ಹುನ್ನಾರ ಹೆಣೆಯಲಾಗಿದೆ. ಲೈಂಗಿಕ ದೌರ್ಜನ್ಯಗಳು ಘಟಿಸಿದರೂ ನಜರ್ ಅಂದಾಜಿಸುವ ನಿರ್ಲಕ್ಷಿಸುವ ಪ್ರವೃತ್ತಿಯನ್ನು ಸಾರ್ವತ್ರಿಕರಣಗೊಳಿಸಲಾಗುತ್ತಿದೆ. ಜಯಶ್ರೀ ನಾಯಕ ಎಂಬ 20 ವರ್ಷ ವಯಸ್ಸಿನ ಒಡಿಸ್ಸಾ ಮೂಲದ ದಲಿತ ವಿದ್ಯಾರ್ಥಿನಿಯು ಹಾಸ್ಟೆಲ್ ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರ ಹಿಂದೆ ಈ ಕಾರಣ ಇರಬಹುದೆ? ವಿದ್ಯಾರ್ಥಿನಿಯ ಸಾಂಸ್ಥಿಕ ಹತ್ಯೆಯ ತನಿಖೆ ನಡೆಯಬೇಕಿದೆ.

ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಕೋಮುವಾದೀಕರಣದ ವಿರುದ್ಧ ಹೋರಾಟದ ಕಹಳೆ

ಕೆ.ನೀಲಾ



ಕಲಬುರಗಿಯ ಕೇಂದ್ರಿಯ ವಿಶ್ವವಿದ್ಯಾಲಯ ಕರ್ನಾಟಕ (ಸಿಯುಕೆ)ದ ಹಾಸ್ಟೆಲ್ ನಲ್ಲಿ ಜಯಶ್ರೀ ನಾಯಕ ಎಂಬ ದಲಿತ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆತ್ಮಹತ್ಯೆಯ ಪ್ರಕರಣದ ಬೆನ್ನಲ್ಲೇ ಮೂರು ಎಲೆಕ್ಟ್ರಾನಿಕ್ ಮಾದ್ಯಮಗಳು ಕೇಂದ್ರೀಯ ವಿವಿಯಲ್ಲಿ ಕೆಲವು ಮುಸ್ಲಿಮರು ಸೇರಿ ಹೊಸ ಮಜರ್ ಕಟ್ಟುತ್ತಿದ್ದಾರೆ ಎಂದು ಹುಯಿಲೆಬ್ಬಿಸಿದರು. ಅಥವ ಸ್ವತಃ ವಿವಿಯೇ ಇಂತಹ ಸುಳ್ಳು ಸುದ್ದಿಯನ್ನು ಹುಯಿಲೆಬ್ಬಿಸುವ ಹುನ್ನಾರ ಹೆಣೆಯಿತು. ಹೀಗೆ ಎರಡು ಪ್ರಕರಣಗಳು ಒಂದು ಚುಂಗು ಹಿಡಿದು ಮತ್ತೊಂದು ಬೆಳೆದು ಬಂದವು. ಇದೇ ಕೇಂದ್ರೀಯ ವಿವಿಯು ಜನತೆಯಲ್ಲಿ ಗೊಂದಲ ಸೃಷ್ಟಿಸಲು ಹೆಣೆದ ಎರಡು ಚಹರೆಗಳ ಬಲೆಗಳು. ಆದರೆ ಈ ಚಹರೆಯ ಆಳವನ್ನು ಅರಿಯದೆ ಕೆಲವರು ಕೂಡಲೇ ಏನನ್ನಾದರೂ ಇದಕ್ಕೆ ಮದ್ದು ಅರೆಯಬೇಕೆಂದು ಹೇಳುತ್ತಲೇ ಇದ್ದಾರೆ. ಪ್ರಕರಣಗಳ ಹಿನ್ನೆಲೆ ಮತ್ತು ಸೃಷ್ಟಿಯ ಹಿಂದಿನ ಸೈದ್ಧಾಂತಿಕ ಅಜೆಂಡಾ ಅರಿಯದೆ ಚಿಕಿತ್ಸೆ ಆಗದು.

ಕೇಸರಿ ಬಣ್ಣಕ್ಕೆ ಹೊರಳತೊಡಗಿದ ಕೇವಿವಿ

ಕೇಂದ್ರೀಯ ವಿವಿಯು ಕಲಬುರಗಿಯಲ್ಲಿ ಬರಬೇಕೆಂದು ಪ್ರಗತಿಪರರು, ಎಡಚಿಂತಕರು ಹೋರಾಟ ನಡೆಸಿದ್ದರು. ಆಳಂದ ತಾಲ್ಲೂಕಿನ ಕಡಗಂಚಿ ಎಂಬ ಗ್ರಾಮ ವ್ಯಾಪ್ತಿಯ 600 ಎಕರೆ ಪ್ರದೇಶದಲ್ಲಿ ಕೇಂದ್ರೀಯ ವಿವಿ ಆರಂಭವಾಯಿತು. ಸುರುವಿನಲ್ಲಿ ಅನೇಕ ಮೂಲ ಸಂಪನ್ಮೂಲಗಳು, ಸೌಕರ್ಯಗಳು ಇತ್ಯಾದಿ ಕೊರತೆಯಿಂದ ನರಳುತ್ತಿತ್ತು. ವಿಶೇಷವಾಗಿ ಕುಡಿಯುವ ನೀರಿನ ಸಮಸ್ಯೆ ಅಗಾಧವಾಗಿತ್ತು. ಕ್ರಮೇಣ ಶೈಕ್ಷಣಿಕ ಜ್ಞಾನ ಶಾಖೆಗಳು ಕಾರ್ಯಾರಂಭಗೊಂಡವು. ಪರಮೇಶ್ವರಯ್ಯ ಎಂಬ ಭಾಷಾತಜ್ಞರೊಬ್ಬರು ಕೇವಿವಿಗೆ ಉಪಕುಲಪತಿಗಳಾಗಿ ಬಂದರು. ಅವರು ನಿರ್ಗಮಿಸುವ ಹೊತ್ತಿನಲ್ಲಿ ಕೆಲವು ಹುದ್ದೆಗಳನ್ನು ಭರ್ತಿಮಾಡಲಾಯಿತು. ಅವುಗಳಲ್ಲಿ ಮತೀಯ ಚಿಂತನೆಗಳುಳ್ಳ ಕರಾವಳಿ ಪ್ರದೇಶದ ವ್ಯಕ್ತಿ ಹರಿಣಾಕ್ಷ ಶಿರ್ಲಾಲ ಎಂಬುವರು ಸೇರಿಕೊಂಡರು. ನಂತರದಲ್ಲಿ ಶಿರ್ಲಾಲ ಬಹಿರಂಗವಾಗಿ ತಮ್ಮ ಲೇಖನಗಳ ಮೂಲಕ ಮತೀಯ ವಿಚಾರಗಳನ್ನು ಬರೆಯತೊಡಗಿದರು. ಅಲ್ಲಿವರೆಗೂ ಸುಪ್ತವಾಗಿದ್ದ ಬಲಪಂಥೀಯ ಚಿಂತಕರಿಗೆ ರೆಕ್ಕೆ ಪುಕ್ಕ ಬಂದವು. ಕ್ರಮೇಣ ಕೇವಿವಿಯು ಕೇಸರಿ ಬಣ್ಣಕ್ಕೆ ಹೊರಳತೊಡಗಿತು.

ಹೋಮ ಹವನದ ಮೂಲಕ ವಿವಿ ಪ್ರವೇಶ

ಈ ಹೊರಳುವಿಕೆಗೆ ಸಾಂಘಿಕ ಸ್ವರೂಪ ಕೊಡುವಂತಹ ಅಜೆಂಡಾ ಇಟ್ಟುಕೊಂಡು ಬಂದು ಕಾರ್ಯಪ್ರವೃತ್ತ ಆಗಿದ್ದು ಸತ್ಯನಾರಾಯಣ ಬಟ್ಟು ಎಂಬ ಉಪಕುಲಪತಿ. ಕೇಂದ್ರ ಸರಕಾರವು ದೇಶದ ಎಲ್ಲಾ ಉಪಕುಲಪತಿಗಳನ್ನು ಕರೆದು, ಕೇಸರಿ ಬಾವುಟ ಹಾರಿಸಿ ಸಮಾವೇಶ ನಡೆಸಿ, ಕೇಂದ್ರಿಯ ವಿವಿಗಳಲ್ಲಿ ಸಂಘಪರಿವಾರದ ಚಟುವಟಿಕೆ ವಿಸ್ತರಿಸುವ, ಬಲಪಡಿಸುವ ಕಾರ್ಯಯೋಜನೆಯನ್ನು ಮಾಡಲಾಗಿತ್ತು. ಅದನ್ನು ಜಾರಿಗೊಳಿಸಲು ಸತ್ಯನಾರಾಯಣ ಬಟ್ಟು ಆರ್‌ಎಸ್ ಎಸ್‌ನ ಕಾರ್ಯಕರ್ತನಾಗಿ ಬಂದು ಇಡೀ ಕೇವಿವಿಯನ್ನು ಇಂದು ಆರ್ ಎಸ್ ಎಸ್ ಶಾಖೆಯಾಗಿ ಮಾರ್ಪಡಿಸಲಾಗಿದೆ. ವಿವಿಯ ಪ್ರವೇಶವೇ ಹೋಮ ಹವನದ ಮೂಲಕ ಕದ್ದು ಮುಚ್ಚಿ ನಡೆಸಲಾಯಿತು. ನಂತರ ಆಂತರಿಕ ಶಿಬಿರಗಳು, ಗುಪ್ತ ಸಭೆಗಳು ನಡೆಯತೊಡಗಿದವು. ಶಾಖಾ ಕವಾಯತಿನಲ್ಲಿ ಉಪನ್ಯಾಸಕರು ಇದ್ದಿರುವುದು ಬಹಿರಂಗಗೊಳ್ಳತೊಡಗಿತು. ಇದನ್ನು ಬಯಲು ಗೊಳಿಸಬಾರದೆಂದು ಪ್ರಗತಿಪರ ವೈಜ್ಞಾನಿಕ ಚಿಂತನೆಯ ವಿದ್ಯಾರ್ಥಿಗಳನ್ನು ಗುರಿ ಮಾಡಲಾಯಿತು.



ರಾಮನವಮಿ ಆಚರಣೆ

ಕೇಂದ್ರೀಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅನೇಕ ವರ್ಷಗಳಿಂದ ನಮ್ಮ ಜನಪದರ ನಂಬಿಕೆಗಳ ಪ್ರತೀಕವಾಗಿ ಕೆಲವು ಶ್ರದ್ಧಾ ಕೇಂದ್ರಗಳಿವೆ. ಒಂದು ಲಕ್ಷ್ಮಿ ಗುಡಿ, ಇನ್ನೊಂದು ಬೀರಲಿಂಗೇಶ್ವರ ಗುಡಿ, ಎರಡು ಮಜರ್‌ಗಳು, ಕಡಗಂಚಿ ಗ್ರಾಮದ ಜನತೆಯು ಆಗಾಗ ಇಲ್ಲಿಗೆ ಹೋಗಿ ಬರುತ್ತಿದ್ದರು. ಕೇವಿವಿಯು ಕಂಪೌಂಡ್ ಕಟ್ಟಿದ ಮೇಲೆ ಅಲ್ಲಿಗೆ ಯಾರನ್ನೂ ಬಾರದಂತೆ ನೋಡಿಕೊಳ್ಳಲಾಯಿತು. ಸತ್ಯನಾರಾಯಣ ಬಟ್ಟು ಎಂಬ ಉಪಕುಲಪತಿ ಬಂದ ಮೇಲೆ ಲಕ್ಷ್ಮಿ ಗುಡಿಯನ್ನು ಅಭಿವೃದ್ಧಿಗೊಳಿಸಿ ಉತ್ತರ ಭಾರತದಿಂದ ಬಂದ ವಿದ್ಯಾರ್ಥಿಗಳ ಮೂಲಕ ಅಲ್ಲಿ ಪೂಜೆ



ಆರಂಭಿಸಲಾಯಿತು. ದಲಿತ ಮತ್ತು ಮುಸ್ಲಿಂ ವಿದ್ಯಾರ್ಥಿಗಳಿಗೆ ಗುಡಿಯ ಸುತ್ತ ಮುತ್ತ ಕಸಗುಡಿಸುವಂತೆ ಒತ್ತಾಯಿಸಿದ್ದನ್ನು ವಿದ್ಯಾರ್ಥಿಗಳು ಪ್ರತಿಭಟಿಸಿದರು. ರಾಮನವಮಿಯ ಆಚರಣೆಯು ಅದ್ದೂರಿಯಿಂದ ನಡೆಯತೊಡಗಿತು. ಆಂತರಿಕವಾದ ಧಾರ್ಮಿಕ ಸಭೆ ನಡೆಸಿ ಎಲ್ಲ ಉಪನ್ಯಾಸಕರು ತಮ್ಮ ತಮ್ಮ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸುವಾಗ, ಅವುಗಳಿಗೆ ರಾಮಾಯಣ ಮತ್ತು ಮಹಾಭಾರತದ ಅಂಶಗಳನ್ನು ಜೋಡಿಸಿ ಹೇಳಬೇಕೆಂದು ತಾಕೀತು ಮಾಡಲಾಯಿತು. "ಈಗಿನ ವಿದ್ಯಾರ್ಥಿಗಳು ವಿಜ್ಞಾನ ತಂತ್ರಜ್ಞಾನ ಬಲ್ಲವರು. ಎಲ್ಲವನ್ನೂ ಹೇಗೆ ಜೋಡಿಸಲು ಸಾಧ್ಯ?" ಎಂದು ಪ್ರಶ್ನಿಸಿದ ಒಬ್ಬನೇ ಒಬ್ಬ ಉಪನ್ಯಾಸಕನ ಬಾಯಿ ಮುಚ್ಚಿಸಲಾಯಿತು.

ವಿದ್ಯಾರ್ಥಿನಿಯ ಆತ್ಮಹತ್ಯೆಯು ಅನೇಕ ಅನುಮಾನಗಳನ್ನು ಹುಟ್ಟುಹಾಕಿದೆ

ಈಗಾಗಲೇ ನಾಡಿನ ಜನತೆಗೆ ತಿಳಿದು ಬಂದ ಅತ್ಯಂತ ದುಖಃದಾಯಕ ಸಂಗತಿಯೆಂದರೆ, ವಿದ್ಯಾರ್ಜನೆಗಾಗಿ ಬಂದಿರುವ 20 ವರ್ಷ ವಯಸ್ಸಿನ ಒಡಿಸ್ಸಾ ಮೂಲದ ವಿದ್ಯಾರ್ಥಿನಿಯು ನೇಣಿಗೆ ಶರಣಾಗಿದ್ದು. ಒಂದು ತಿಂಗಳಲ್ಲಿ ಆತ್ಮಹತ್ಯೆ ಪ್ರಯತ್ನಗಳಲ್ಲಿ ಇದು ಎರಡನೆಯದ್ದು. ಒಬ್ಬ ವಿದ್ಯಾರ್ಥಿನಿಯು ಉಳಿದುಕೊಂಡಿದ್ದಾಳೆ. ಹಿಂದಿನ ದಿನ ತನ್ನ ನೋವನ್ನು ಸ್ಟುಡೆಂಟ್ ವೆಲ್‌ಫೇರ್ ಅಧಿಕಾರಿಗಳ ಗಮನಕ್ಕೆ ತಂದು ಕಣ್ಣೀರುಗರೆದು ಹೋದ ವಿದ್ಯಾರ್ಥಿನಿಯು ಮರುದಿನದಲ್ಲಿ ತನ್ನ ಜನ್ಮ ದಿನದಂದೇ ನೇಣಿಗೆ ಏರಿದ್ದಾಳೆ. ಅತ್ಯಂತ ಘಾಸಿಗೊಳಿಸಿರುವ ಪ್ರಕರಣವಿದು. ಕಾರಣವೇನಿರಬಹುದು? ಅವಳು ಸಂಬಂಧಪಟ್ಟ ಅಧಿಕಾರಿಗೆ ಏನು ಹೇಳಿರುವಳು? ಅವಳನ್ನು ಆಪ್ತ ಸಮಾಲೋಚನೆಯ ಮೂಲಕ ಸಂಕಟವನ್ನು ಶಮನಗೊಳಿಸಲು ಪ್ರಯತ್ನಿಸಬಹುದಿತ್ತು. ದುಃಖಿತಳಾದ ಅವಳನ್ನು ಒಂಟಿಯಾಗಿ ಬಿಡದಂತೆ ನೋಡಿಕೊಳ್ಳಬಹುದಿತ್ತು. ಅವಳನ್ನು ಉಳಿಸಿಕೊಳ್ಳಲು ಗಂಭೀರ ಕ್ರಮಗಳು ಏಕೆ ನಡೆಯಲಿಲ್ಲ? ಅವಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿತ್ತೇ? ಅಥವ ಇನ್ನೇನಾದರೂ ಇದ್ದಿರಲೇಬಹುದಲ್ಲ? ಒಂದು ಜೀವವು ಸುಮ್ಮನೇ ತನ್ನನ್ನು ತಾನೇ ಅಂತ್ಯ ಗೊಳಿಸಿಕೊಳ್ಳುವುದಿಲ್ಲ. ಈ ಆತ್ಮಹತ್ಯೆಯು ಅನೇಕ ಅನುಮಾನಗಳನ್ನು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ದಲಿತ ವಿದ್ಯಾರ್ಥಿನಿಯು ನೇಣು ಹಾಕಿಕೊಂಡ ಕೋಣೆಯ ಬಾಗಿಲನ್ನು ಪೊಲೀಸ್ ಸಮ್ಮುಖದಲ್ಲಿ ತೆಗೆಸಬೇಕಿತ್ತು. ಒಂದು ವೇಳೆ ಬಾಗಿಲು ತೆರೆದರೂ ಒಳಗೆಲ್ಲ ಓಡಾಡಿ ಸಾಕ್ಷಿ ನಾಶಗೊಳಿಸಬಾರದು. ಆದರೆ ಇಲ್ಲಿ ಅದೆಲ್ಲವೂ ನಡೆದಿದೆ. ಯಾಕೆ ನೇಣಿಗೆ ಶರಣಾದಳು ಎಂಬ ಒಂದು ಸಣ್ಣ ತನಿಖೆಯನ್ನೂ ನಡೆಸಲಿಲ್ಲ ಎಂಬುದು ಅತ್ಯಂತ ಆತಂಕದ ಸಂಗತಿಯಾಗಿದೆ.

ಸಾಂವಿಧಾನಿಕ ನಿಲುವುಗಳ ಶೈಕ್ಷಣಿಕ ವ್ಯವಸ್ಥೆಗೆ ಎಳ್ಳುನೀರು

ಉನ್ನತ ಶಿಕ್ಷಣ ಪಡೆಯಲು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ದೂರದ ನಾಡಿನಿಂದ ಇಲ್ಲಿಗೆ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು ಬರುತ್ತಾರೆ. ಅವರಿಗೆ ವೈಜ್ಞಾನಿಕ, ವೈಚಾರಿಕ ಶಿಕ್ಷಣ ಕೊಟ್ಟು, ದೇಶದ ಭವಿಷ್ಯದ ಉತ್ತಮ ನಾಗರೀಕರನ್ನಾಗಿ ರೂಪಿಸುವ ಹೊಣೆಯನ್ನು ವಿಶ್ವವಿದ್ಯಾಲಯ ಹೊಂದಿರಬೇಕು. ಆದರೆ ಕಡಗಂಚಿಯಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯವು ಈಚಿನ ವರ್ಷಗಳಲ್ಲಿ ಸಾಂವಿಧಾನಿಕ ನಿಲುವುಗಳ ಶೈಕ್ಷಣಿಕ ವ್ಯವಸ್ಥೆಗೆ ಎಳ್ಳುನೀರು ಬಿಡಲಾಗಿದೆ. ಬದಲಿಗೆ ವಿದ್ಯಾರ್ಥಿಗಳನ್ನು ಕೋಮುವಾದಿ ಚಟುವಟಿಕೆಗಳಲ್ಲಿ ತೊಡಗಿಸಲಾಗುತ್ತಿದೆ. ಎಲ್ಲಿ ಕೋಮುವಾದಿ ಸಿದ್ದಾಂತಗಳು ಮನೆ ಮಾಡುತ್ತವೆಯೊ, ಅಲ್ಲಿ ಮಹಿಳೆ, ದಲಿತ ಮತ್ತು ಅಲ್ಪಸಂಖ್ಯಾತರನ್ನು ಅತ್ಯಂತ ಕೀಳಾಗಿ ಕಾಣುವ ಮತ್ತು ಅವರ ವಿರುದ್ಧದ ಮನೋಭಾವ ಮೂಡುವ ಎಲ್ಲ ಸಾಧ್ಯತೆಗಳು ತೆರೆದುಕೊಳ್ಳುತ್ತವೆ. ಕೇವಿವಿಯಲ್ಲಿ ಆಗುತ್ತಿರುವುದು ಇದೇ. ಕೇವಿವಿಯಲ್ಲಿ ಹೋಮ ಹವನಗಳು, ಸನಾತನಿ ಮತೀಯ ಚಟುವಟಿಕೆಗಳು ಯಾವ ಎಗ್ಗಿಲ್ಲದೆ ನಡೆಯುತ್ತವೆ.

ಕ್ಯಾಂಟಿನ್ ನಡೆಸುವಾತನಿಂದ ವಿದ್ಯಾರ್ಥಿನಿಯೊಬ್ಬಳಿಗೆ ಲೈಂಗಿಕ ಕಿರುಕುಳ

ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ಮುಚ್ಚಿ ಹಾಕಲಾಗುತ್ತಿದೆ. ಬಿಜೆಪಿ ಪಕ್ಷವೊಂದರ ಸಂಬಂಧಿತ ವ್ಯಕ್ತಿಗೆ ಕ್ಯಾಂಟಿನ್ ನಡೆಸಲು ಪರವಾನಗಿ ಕೊಡಲಾಗಿತ್ತು. ರಾಜಕೀಯ ಪಕ್ಷ ಬಿಜೆಪಿಯ ಸಿಂಬಲ್ ಇರುವ ಕಾರು ವಿವಿಯ ಪ್ರಾಂಗಣದಲ್ಲಿಯೇ ಇರಲು ಅವಕಾಶ

ಪುಟ 10 ನೋಡಿ



ಭಾರತದ ಸ್ವಾತಂತ್ರ್ಯದ 79ನೇ ವಾರ್ಷಿಕೋತ್ಸವ

ಏಕೀಕೃತ ರಾಜ್ಯದ ಸ್ಥಾಪನೆಗಾಗಿ ಒಕ್ಕೂಟ ವ್ಯವಸ್ಥೆಯನ್ನು ಕಿತ್ತುಹಾಕುವುದು ಆರ್‌ಎಸ್‌ಎಸ್–ಬಿಜೆಪಿಯ ಗುರಿ

ಪ್ರಕಾಶ್ ಕಾರಟ್
(ಅನು: ನಾಗರಾಜ ನಂಜುಂಡಯ್ಯ)



ಭಾರತವು "ರಾಜ್ಯಗಳ ಒಕ್ಕೂಟ" (ಯೂನಿಯನ್ ಆಫ್ ಸ್ಟೇಟ್ಸ್) ಎಂಬ ಸಂವಿಧಾನ ಬದ್ಧ ಒಕ್ಕೂಟ ಸ್ವರೂಪದ ತತ್ವವನ್ನು ಆರ್‌ಎಸ್‌ಎಸ್–ಬಿಜೆಪಿ ಎಂದಿಗೂ ಒಪ್ಪಿಕೊಂಡಿಲ್ಲ. ಅವರಿಗೆ, ಆರ್‌ಎಸ್‌ಎಸ್ ಪರಿಕಲ್ಪನೆಯಾದ ಅಖಂಡ ಭಾರತ ಎಂಬುದೇ ಪ್ರಮುಖವಾಗಿದೆ. ಅಂತಹ ಭಾರತದ ಅವರ ಪರಿಕಲ್ಪನೆಯು ಕೇಂದ್ರೀಕೃತ ಏಕೀಕೃತ ರಾಜ್ಯವಾಗಿದ್ದು, ರಾಜ್ಯಗಳು ಕೇವಲ ಅನುಕೂಲತೆಯ ಆಧಾರದ ಮೇಲೆ ಆಡಳಿತಾತ್ಮಕ ಘಟಕಗಳಾಗಿರಬೇಕು.

ಸ್ವಾತಂತ್ರ್ಯದ 77 ವರ್ಷಗಳ ನಂತರ, ಸಂವಿಧಾನದಲ್ಲಿ ಪ್ರತಿಪಾದಿಸಲಾದ ಫೆಡರಲ್ ತತ್ವ, ಕೇಂದ್ರ ಮತ್ತು ರಾಜ್ಯಗಳ ನಡುವೆ ಪಟ್ಟಿಮಾಡಲಾದ ಪ್ರತ್ಯೇಕ ನ್ಯಾಯವ್ಯಾಪ್ತಿಯ ಕ್ಷೇತ್ರಗಳು ಮತ್ತು ಚುನಾಯಿತ ರಾಜ್ಯ ಸರ್ಕಾರಗಳು ಹಾಗೂ ರಾಜ್ಯ ಶಾಸಕಾಂಗಗಳ ಹಕ್ಕುಗಳಿಗೆ ಸಾಂವಿಧಾನಿಕ ಆಧಾರಗಳು ಎಲ್ಲವೂ ಅಪಾಯದಲ್ಲಿದ್ದು, ಪ್ರದಾನಿ ಮೋದಿ ಆಡಳಿತದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಫೆಡರಲ್ ಪರಿಕಲ್ಪನೆಯನ್ನು ಕಿತ್ತುಹಾಕಲು ಹೊಂಚು ಹಾಕುತ್ತಿದೆ.

ತ್ರಿವಳಿ ದಾಳಿ

ಹಿಂದುತ್ವ–ಕಾರ್ಪೊರೇಟ್ ಮೈತ್ರಿಕೂಟವನ್ನು ಪ್ರತಿನಿಧಿಸುವ ಮೋದಿ ಸರ್ಕಾರವು, ಸಂವಿಧಾನದ ಮೂರು ಸ್ತಂಭಗಳಾದ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ಸ್ವರೂಪದ ಆಶಯಗಳನ್ನು ಕಿತ್ತುಹಾಕುವ ಗುರಿಯಾಗಿಸಿಕೊಂಡಿದೆ. ಸಂವಿಧಾನದ ಎಲ್ಲಾ ಮೂರು ಮೂಲಭೂತ ತತ್ವಗಳ ಮೇಲಿನ ದಾಳಿ ಪರಸ್ಪರ ಸಂಬಂಧ ಹೊಂದಿದೆ. ಚುನಾಯಿತ ರಾಜ್ಯ ಸರ್ಕಾರಗಳು ಮತ್ತು ಶಾಸಕಾಂಗಗಳ ಹಕ್ಕುಗಳ ದಮನವು ಪ್ರಜಾಪ್ರಭುತ್ವದ ಮೇಲಿನ ದಾಳಿಯಾಗಿದೆ; ಅದೇ ರೀತಿ, ಜಾತ್ಯತೀತತೆಯನ್ನು ದುರ್ಬಲಗೊಳಿಸುವುದು ಪ್ರಜಾಪ್ರಭುತ್ವದ ಮೇಲಿನ ದಾಳಿಯಾಗಿದೆ, ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಅಲ್ಪಸಂಖ್ಯಾತರು ಕೂಡ ಸಮಾನ ಹಕ್ಕುಗಳನ್ನು ಹೊಂದಿದ್ದಾರೆ.

ಸಂವಿಧಾನದ ಫೆಡರಲ್ ವೈಶಿಷ್ಟ್ಯಗಳಿಗೆ ಸಂಬಂಧಿಸಿದಂತೆ, ಸ್ವಾತಂತ್ರ್ಯದ ನಂತರದಲ್ಲಿ ಅಧಿಕಾರ ವಹಿಸಿಕೊಂಡ ಆಳುವ ವರ್ಗಗಳ ಸ್ವರೂಪವನ್ನು ಗಮನಿಸಿದರೆ, ಅಧಿಕಾರವನ್ನು ಕೇಂದ್ರದ ಕೈಯಲ್ಲಿ ಕೇಂದ್ರೀಕರಿಸಲು ಅಂದಿನಿಂದಲೂ ನಿರಂತರ ಒತ್ತಡವಿತ್ತು. ಏಕೆಂದರೆ ಆಡಳಿತ ವರ್ಗ ಮೈತ್ರಿಕೂಟದ ನಾಯಕರಾಗಿರುವ ದೊಡ್ಡ ಬೂರ್ಜ್ವಾಗಳಿಗೆ, ಬಂಡವಾಳ ಮತ್ತು ಸರಕುಗಳ ಮುಕ್ತ ಚಲನೆಗೆ ಯಾವುದೇ ಅಡೆತಡೆಗಳಿಲ್ಲದ ಏಕೀಕೃತ ಅಖಿಲ ಭಾರತ ಮಾರುಕಟ್ಟೆಯಲ್ಲಿ ಆಸಕ್ತಿ ಹೊಂದಿದ್ದಾರೆ. ದೊಡ್ಡ ವ್ಯವಹಾರಗಳನ್ನು ಪ್ರತಿನಿಧಿಸುವ ಆಡಳಿತರೂಡರು ಭಾಷಾವಾರು ರಾಜ್ಯಗಳ ರಚನೆಯನ್ನು ವಿರೋಧಿಸಿದ್ದವು. ಆರ್‌ಎಸ್‌ಎಸ್ ಕೂಡ ಭಾಷವಾರು ರಾಜ್ಯಗಳ ರಚನೆಯನ್ನು ವಿರೋಧಿಸಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು.

1970 ಮತ್ತು 80ರ ದಶಕಗಳಲ್ಲಿ, ಸತತವಾಗಿ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಕೇಂದ್ರದ ಕೈಯಲ್ಲಿ ಹೆಚ್ಚಿನ ಅಧಿಕಾರವನ್ನು ಕೇಂದ್ರೀಕರಿಸಲು ಕ್ರಮಗಳನ್ನು ತೆಗೆದುಕೊಂಡಿತ್ತು. ಇದು ವಿಶೇಷವಾಗಿ ಇಂದಿರಾ ಗಾಂಧಿಯವರ ಆಳ್ವಿಕೆಯಲ್ಲಿ ಕಂಡುಬಂದಿತು. ಆದಾಗ್ಯೂ, ಇಂದು ಸಾಕ್ಷಿಯಾಗುತ್ತಿರುವುದು ಗುಣಾತ್ಮಕವಾಗಿ ವಿಭಿನ್ನವಾಗಿದೆ. ರಾಜ್ಯಗಳ ಹಕ್ಕುಗಳ ಮೇಲೆ ಉದ್ದೇಶಪೂರ್ವಕ ಮತ್ತು ವ್ಯವಸ್ಥಿತ ದಾಳಿ ಮತ್ತು ಸಂವಿಧಾನದಲ್ಲಿ ಅಂತರ್ಗತವಾಗಿರುವ ಫೆಡರಲ್ ವೈಶಿಷ್ಟ್ಯಗಳನ್ನು ಕೆಡವಲು ಕ್ರಮಗಳು ನಡೆಯುತ್ತಿವೆ. ಇವು ಒಕ್ಕೂಟ ವ್ಯವಸ್ಥೆಯ ರಾಜಕೀಯ, ಹಣಕಾಸು ಮತ್ತು ಸಾಂಸ್ಕೃತಿಕ ಅಂಶಗಳಲ್ಲಿ ವ್ಯಕ್ತವಾಗುತ್ತವೆ.

ಫೆಡರಲ್ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಲಾಗುತ್ತಿದೆ

ಚುನಾಯಿತ ರಾಜ್ಯ ಸರ್ಕಾರಗಳ ಅಧಿಕಾರ ಮತ್ತು ರಾಜ್ಯ ಶಾಸಕಾಂಗಗಳ ಹಕ್ಕುಗಳನ್ನು ಬುಡಮೇಲು ಮಾಡಲು ರಾಜ್ಯಪಾಲರನ್ನು ಬಳಸಿಕೊಳ್ಳುವುದು ಬಿಜೆಪಿ–ಆರ್‌ಎಸ್‌ಎಸ್ ಒಕ್ಕೂಟದ ಸರ್ವಾಧಿಕಾರಿ ಚಾಲನೆಯಲ್ಲಿ ಹೊಸ ಆಯಾಮವಾಗಿದೆ. ಈ ಹಿಂದೆ, ಮುಖ್ಯವಾಗಿ ಹಿಂದಿನ ಕಾಂಗ್ರೆಸ್ ಸರ್ಕಾರಗಳು ರಾಜ್ಯಪಾಲರ ಹುದ್ದೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದವು ಎಂಬುದನ್ನು ಮರೆಯಬಾರದು. ರಾಜ್ಯಪಾಲರು ರಾಜ್ಯ ಸರ್ಕಾರವನ್ನು ವಜಾಗೊಳಿಸಲು ಮತ್ತು ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲು 356ನೇ ಪರಿಚ್ಛೇಧವನ್ನು ಸಾಧನವನ್ನಾಗಿ ಅನ್ವಯಿಸುತ್ತಿದ್ದರು. ಆದಾಗ್ಯೂ, 1995ರ ಸುಪ್ರೀಂ ಕೋರ್ಟ್‌ನ ಬೊಮ್ಮಾಯಿ ತೀರ್ಪು ರಾಜ್ಯಪಾಲರ ಪಾತ್ರದ ಈ ದುರುಪಯೋಗಕ್ಕೆ ಕಡಿವಾಣ ಹಾಕಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು.

ಮೋದಿ ಆಳ್ವಿಕೆಯ ಸರ್ಕಾರದ ಅಡಿಯಲ್ಲಿ, ರಾಜ್ಯಪಾಲರು ರಾಜಕೀಯವಾಗಿ ಸಕ್ರಿಯರು ಮತ್ತು ಪಕ್ಷಪಾತಿಗಳಾಗಿರಬೇಕು ಎಂದು ನಿರೀಕ್ಷಿಸಲಾಗಿದೆ. ವಿಶೇಷವಾಗಿ ಬಿಜೆಪಿಯೇತರ ಆಡಳಿತದ ರಾಜ್ಯಗಳಲ್ಲಿ, ರಾಜ್ಯಪಾಲರು ರಾಜ್ಯ ಸರ್ಕಾರವನ್ನು ಟೀಕಿಸಿವುದು ಮತ್ತು ಸಾರ್ವಜನಿಕ ಹೇಳಿಕೆಗಳನ್ನು ನೀಡುವುದು, ರಾಜ್ಯ ಸರ್ಕಾರವನ್ನು ಬೈ–ಪಾಸ್ ಮಾಡುವ ಅಧಿಕಾರಿಗಳನ್ನು ಸಮನ್ಸ್ ಮಾಡುವುದು, ರಾಜ್ಯ ಶಾಸಕಾಂಗವು ಅಂಗೀಕರಿಸಿದ ಮಸೂದೆಗಳನ್ನು ತಡೆಹಿಡಿದು ಒಪ್ಪಿಗೆ ನೀಡದಿರುವುದು ಹೆಚ್ಚಾಗಿದೆ. ಹಾಗೆಯೇ, ಕುಲಪತಿ ಹುದ್ದೆಯನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ರಾಜ್ಯಪಾಲರೇ ವಿಶ್ವವಿದ್ಯಾಲಯಗಳ ಉಪಕುಲಪತಿಗಳನ್ನು ನೇಮಿಸುವುದು ಒಂದು ಮಾದರಿಯಾಗಿ ಬಿಟ್ಟಿದೆ. ಬಿಜೆಪಿಯೇತರ ಸರ್ಕಾರಗಳಿರುವ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಪಂಜಾಬ್ ಮತ್ತು ಕರ್ನಾಟಕದ ರಾಜ್ಯಪಾಲರು ರಾಜ್ಯಪಾಲರ ಹುದ್ದೆಗೆ ನಿಯೋಜಿಸಲಾದ ಸಾಂವಿಧಾನಿಕ ಪಾತ್ರವನ್ನು ನಿರಂತರವಾಗಿ ಉಲ್ಲಂಘಿಸುತ್ತಿರುವುದನ್ನು ನೋಡುತ್ತಿದ್ದೇವೆ. ಇಂತಹ ಅಸಹಜ ನಡವಳಿಕೆಯು ಕೇಂದ್ರದ ಆದೇಶಗಳಿಂದ ಮಾತ್ರ ಆಗುತ್ತಿರುವುದು ಗೋಚರಿಸುತ್ತಿವೆ, ಹೀಗೆ ರಾಜ್ಯಗಳ ರಾಜಕೀಯ ಕ್ಷೇತ್ರದ ಮೇಲೆ ಅತಿಕ್ರಮಣ ಮಾಡುವುದು ಅತ್ಯಂತ ಕಪಟ ವಿಧಾನವಾಗಿದೆ.

ವಿರೋಧ ಪಕ್ಷದ ಆಳ್ವಿಕೆಯ ರಾಜ್ಯಗಳು ರಾಜ್ಯಪಾಲರ ಸಂವಿಧಾನ ವಿರೋಧಿ ಕ್ರಮಗಳ ವಿರುದ್ಧ ಹೋರಾಡುತ್ತಿವೆ. ಉದಾಹರಣೆಗೆ, ರಾಜ್ಯ ಶಾಸಕಾಂಗವು ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡದಿರುವ ವಿಷಯದ ಕುರಿತು, ತಮಿಳುನಾಡು ಮತ್ತು ಕೇರಳ ಸರ್ಕಾರಗಳು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಿದವು. ಇದಕ್ಕೂ ಮೊದಲು, ಪಂಜಾಬ್ ಸರ್ಕಾರ ಸಲ್ಲಿಸಿದ ಪ್ರಕರಣವೊಂದರಲ್ಲಿ, ನ್ಯಾಯಾಲಯವು ನವೆಂಬರ್ 2023ರಲ್ಲಿ, ಸ್ಪೀಕರ್ ಕರೆದ ವಿಧಾನಸಭಾ ಅಧಿವೇಶನದ ಸಿಂಧುತ್ವವನ್ನು ರಾಜ್ಯಪಾಲರು ಪ್ರಶ್ನಿಸುವಂತಿಲ್ಲ ಅಥವಾ ವಿಧಾನಸಭೆ ಅಂಗೀಕರಿಸಿದ ನಾಲ್ಕು ಮಸೂದೆಗಳಿಗೆ ಒಪ್ಪಿಗೆಯನ್ನು ತಡೆಹಿಡಿಯುವಂತಿಲ್ಲ ಎಂದು ತೀರ್ಪು ನೀಡಿತ್ತು. ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅವರ ರಾಜ್ಯ ವಿಧಾನಸಭೆ ಅಂಗೀಕರಿಸಿದ 12 ಮಸೂದೆಗಳಿಗೆ ಅನಿರ್ದಿಷ್ಟಾವಧಿಗೆ ಒಪ್ಪಿಗೆಯನ್ನು ತಡೆಹಿಡಿಯುವಲ್ಲಿ ಅವರ ಪಾತ್ರದ ವಿರುದ್ಧದ ಅರ್ಜಿಯಲ್ಲಿ, ಸುಪ್ರೀಂ ಕೋರ್ಟ್ ಏಪ್ರಿಲ್ 2025ರಲ್ಲಿ ಒಂದು ಮಹತ್ವದ ತೀರ್ಪು ನೀಡಿತು. ಸಂವಿಧಾನದ 200ನೇ ಪರಿಚ್ಛೇದದ ಅಡಿಯಲ್ಲಿ ಈ ವಿಷಯದಲ್ಲಿ ರಾಜ್ಯಪಾಲರ ಪಾತ್ರವನ್ನು ನ್ಯಾಯಾಲಯ ವ್ಯಾಖ್ಯಾನಿಸಿದೆ. ರಾಜ್ಯಪಾಲರು ಯಾವುದೇ ಮಸೂದೆಯನ್ನು ವೀಟೋ ಮಾಡಲು ಯಾವುದೇ ವಿವೇಚನಾ ಅಧಿಕಾರವನ್ನು ಹೊಂದಿಲ್ಲ ಮತ್ತು ರಾಜ್ಯಪಾಲರು ಒಪ್ಪಿಗೆ ನೀಡಲು ಅಥವಾ ಮಸೂದೆಯನ್ನು ವಿಧಾನಸಭೆಯಿಂದ ಮರುಪರಿಶೀಲನೆಗೆ ಹಿಂದಿರುಗಿಸಲು ಸಮಯ ಮಿತಿಗಳನ್ನು ನಿಗದಿಪಡಿಸಲಾಗಿದೆ ಎಂದು ದ್ವಿಸದಸ್ಯ ಪೀಠ ಸ್ಪಷ್ಟಪಡಿಸಿದೆ. ರಾಷ್ಟ್ರಪತಿಗಳು ತಮಗೆ ಉಲ್ಲೇಖಿಸಲಾದ ಮಸೂದೆಗಳ ಮೇಲೆ ಕ್ರಮ ಕೈಗೊಳ್ಳಲು ಇದು ಸಮಯ ಮಿತಿಯನ್ನು ಸಹ ನಿಗದಿಪಡಿಸಿದೆ. ಇದಲ್ಲದೆ, ಮಸೂದೆಗಳಿಗೆ ಒಪ್ಪಿಗೆಯನ್ನು ತಡೆಹಿಡಿಯುವ ರಾಜ್ಯಪಾಲರ ಕ್ರಮವು ಶೂನ್ಯ ಮತ್ತು ಅನೂರ್ಜಿತ ಎಂದು ನ್ಯಾಯಾಲಯ ನಿರ್ಧರಿಸಿತು ಮತ್ತು ಮಸೂದೆಗಳನ್ನು ಕಾನೂನಾಗಿ ಅಂಗೀಕರಿಸಲಾಗಿದೆ ಎಂದು ಪರಿಗಣಿಸಲಾಯಿತು.

ಈ ತೀರ್ಪು ಮೋದಿ ಸರ್ಕಾರವು ತಮ್ಮ ಸಂಕುಚಿತ ಪಕ್ಷಪಾತದ ಉದ್ದೇಶಗಳಿಗಾಗಿ ರಾಜ್ಯಪಾಲರನ್ನು ದುರುಪಯೋಗಪಡಿಸಿಕೊಳ್ಳುವ ನಡವಳಿಕೆಗೆ ತೀಕ್ಷ್ಣವಾದ ಖಂಡನೆಯಾಗಿದೆ. ಈ ತೀರ್ಪನ್ನು ಒಪ್ಪಿಕೊಳ್ಳಲು ಸಾಧ್ಯವಾಗದೆ, ನ್ಯಾಯಾಂಗವು ಉನ್ನತ ಸಾಂವಿಧಾನಿಕ ಅಧಿಕಾರಿಗಳು ಎಷ್ಟು ಕಾರ್ಯನಿರ್ವಹಿಸಬೇಕು ಎಂಬುದರ ಕುರಿತು ನಿಯಮಗಳನ್ನು ಸ್ಥಾಪಿಸಬಹುದೇ? ಎಂದು ಸುಪ್ರೀಂ ಕೋರ್ಟ್‌ನ ಅಭಿಪ್ರಾಯವನ್ನು ಪ್ರಶ್ನಿಸಲು ರಾಷ್ಟ್ರಪತಿಗಳ ಉಲ್ಲೇಖವನ್ನು ಪಡೆಯುವ ಅಸಾಧಾರಣ ಹೆಜ್ಜೆಯನ್ನು ಅದು ಇಟ್ಟಿದೆ. ಏಕಪಕ್ಷೀಯ ಸರ್ವಾಧಿಕಾರಿ ಆಡಳಿತವನ್ನು ಅನುಸರಿಸುವಲ್ಲಿ ಮೋದಿ ಸರ್ಕಾರ ಎಷ್ಟು ಹಠಮಾರಿಯಾಗಿದೆ ಎಂಬುದನ್ನು ಇದು ಎತ್ತಿ ತೋರಿಸುತ್ತದೆ.

ಲೋಕಸಭೆ, ರಾಜ್ಯ ಶಾಸಕಾಂಗಗಳು ಮತ್ತು ಸ್ಥಳೀಯ ಸಂಸ್ಥೆಗಳ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವ 'ಒಂದು ರಾಷ್ಟ್ರ, ಒಂದು ಚುನಾವಣೆ' (ONOE) ವ್ಯವಸ್ಥೆಯು ರಾಜ್ಯಗಳ ಹಕ್ಕುಗಳನ್ನು ಮತ್ತು ರಾಜ್ಯ ಶಾಸಕಾಂಗಗಳಿಗೆ ಐದು ವರ್ಷಗಳ ಅವಧಿಯ ಸಾಂವಿಧಾನಿಕ ಖಾತರಿಯನ್ನು ಗಂಭೀರವಾಗಿ ಮೊಟಕುಗೊಳಿಸುತ್ತದೆ. ಇದನ್ನು ಜಾರಿಗೆ ತರಲು ಮೋದಿ ಸರ್ಕಾರ ಸಂಸತ್ತಿನಲ್ಲಿ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಈಗಾಗಲೇ ಮಂಡಿಸಿ ಪರಿಚಯಿಸಲಾಗಿದೆ. ಚುನಾವಣಾ ವ್ಯವಸ್ಥೆಯಲ್ಲಿನ ಈ ಬದಲಾವಣೆಯ ಪರಿಣಾಮಗಳು ದೂರಗಾಮಿಯಾಗಿರುತ್ತವೆ. ಕೆಲವು ರಾಜ್ಯ ವಿಧಾನಸಭೆಗಳ ಐದು ವರ್ಷಗಳ ಅವಧಿಯನ್ನು ಮೊಟಕುಗೊಳಿಸುವುದು, ರಾಜ್ಯಪಾಲರ ಆಳ್ವಿಕೆಯನ್ನು ಪರಿಚಯಿಸುವುದು ಮತ್ತು ಹೆಚ್ಚಿದ ಕೇಂದ್ರ ಹಸ್ತಕ್ಷೇಪವು ಇದರ ಪರಿಣಾಮವಾಗಿರುತ್ತದೆ. ಇದು ಫೆಡರಲ್ ರಾಜಕೀಯ ವ್ಯವಸ್ಥೆಗೆ ಘೋರ ಹೊಡೆತವಾಗಲಿದೆ.

ಹಣಕಾಸಿನ ಹಿನ್ನಡೆ

ಇನ್ನೊಂದು ಪ್ರಮುಖ ಕ್ಷೇತ್ರವೆಂದರೆ ಆರ್ಥಿಕ ಮತ್ತು ಹಣಕಾಸಿನ ಕ್ಷೇತ್ರ. ವಿರೋಧ ಪಕ್ಷಗಳು ನಡೆಸುವ ರಾಜ್ಯ ಸರ್ಕಾರಗಳಿಗೆ ಆರ್ಥಿಕವಾಗಿ ತಾರತಮ್ಯ ಮಾಡಲ್ಪಡುತ್ತಿರುವುದು ಕಣ್ಣಿಗೆ ರಾಚುತ್ತಿದೆ. ಕೇರಳದಂತಹ ಕೆಲವು ಸಂದರ್ಭಗಳಲ್ಲಿ, ಅವರನ್ನು ಆರ್ಥಿಕವಾಗಿ ಕತ್ತು ಹಿಸುಕಲು ಪ್ರಯತ್ನಿಸಲಾಗುತ್ತಿದೆ. ಕೇಂದ್ರವು, ವಿಭಜಿಸಬಹುದಾದ ತೆರಿಗೆಗಳ ಸಂಗ್ರಹವನ್ನು ಕಡಿಮೆ ಮಾಡುವುದು, ರಾಜ್ಯಗಳಿಗೆ ಸಂಪನ್ಮೂಲಗಳ ನಿರಾಕರಣೆ ಮತ್ತು GST ಪರಿಹಾರವನ್ನು ಮುಂದುವರಿಸದಿರುವುದು ಮುಂತಾದ ಕ್ರಮಗಳ ಮೂಲಕ ವಿರೋಧ ಪಕ್ಷಗಳು ಆಳುವ ಕೆಲವು ರಾಜ್ಯಗಳಿಗೆ ಹಣಕಾಸಿನ ಬಿಕ್ಕಟ್ಟನ್ನು ಸೃಷ್ಟಿಸಿದೆ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಬಜೆಟ್‌ಗಳಲ್ಲಿ ವಿಭಜಿಸಬಹುದಾದ ನಿಧಿಯಲ್ಲಿ ರಾಜ್ಯಗಳ ಪಾಲು ಕಡಿಮೆಯಾಗಿದೆ. 2016ರಲ್ಲಿ ಇದು ಶೇ. 41.1 ರಷ್ಟಿದ್ದರೂ, 2023ರಲ್ಲಿ ಅದು ಶೇ. 35.1ಕ್ಕೆ ಇಳಿದಿದೆ.

ಕೇಂದ್ರವು ವಿಭಜಿಸಲಾಗದ ಸೆಸ್‌ಗಳು ಮತ್ತು ಸರ್‌ಚಾರ್ಜ್‌ಗಳ ಮೇಲಿನ ಹೆಚ್ಚುತ್ತಿರುವ ಅವಲಂಬನೆಯು ರಾಜ್ಯಗಳೊಂದಿಗೆ ಹಂಚಿಕೊಳ್ಳಲಾದ ತೆರಿಗೆ ಆದಾಯದ ಒಟ್ಟಾರೆ ವಿಭಜಿಸಬಹುದಾದ ನಿಧಿಯನ್ನು ಕಡಿಮೆ ಮಾಡಿದೆ. ಇದರ ಜೊತೆಗೆ, ಕುಗ್ಗುತ್ತಿರುವ ಸಂಪನ್ಮೂಲಗಳನ್ನು ಎದುರಿಸುತ್ತಿರುವ ರಾಜ್ಯಗಳು ಸಾಲಗಳ ಮೇಲೆ

ಪುಟ 11 ನೋಡಿ

ಕ.ಕೇ.ವಿ.ವಿ.ದ ಕೋಮುವಾದೀಕರಣದ ವಿರುದ್ಧ ಹೋರಾಟದ ಕಹಳೆ

ಪುಟ 8 ರಿಂದ

ಕಲ್ಪಿಸಲಾಗಿತ್ತು. ಕ್ಯಾಂಟಿನ್ ನಡೆಸುವಾತನು ವಿದ್ಯಾರ್ಥಿನಿಯೊಬ್ಬಳಿಗೆ ಲೈಂಗಿಕ ಕಿರುಕುಳ ಕೊಟ್ಟಿದ್ದನ್ನು ಅವಳು ದೂರು ಸಲ್ಲಿಸಿದರೂ, ರಾಜಿ ಮಾಡಿಸಿ ಕೇಸು ಮುಚ್ಚಿ ಹಾಕಿದ್ದು ನಡೆದಿದೆ. ಹೊರಗೆಲ್ಲೂ ಹೇಳದಂತೆ ತಾಕೀತು ಮಾಡಲಾಗಿದೆ. ಹೀಗೆ ರಾಜಿ ಮಾಡಿಸಿ ಬಾಯಿ ಮುಚ್ಚಿಸುವುದು ಉಪಕುಲಪತಿ ಸತ್ಯಾನಾರಾಯಣ ಬಟ್ಟು ಮತ್ತು ರಿಜಿಸ್ಟಾರ್ ಸಮ್ಮುಖದಲ್ಲಿ ನಡೆದಿದೆ. ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳದಂತಹ ಭಯಾನಕ ವಾತಾವರಣ ಇರುವಾಗ ತಪ್ಪಿತಸ್ಥರಿಗೆ ಶಿಕ್ಷಿಸುವ ಕರ್ತವ್ಯ ವಿವಿಯದ್ದಾಗಿತ್ತು. ಆದರೆ ಸಂಬಂಧಪಟ್ಟ ವಿಸಿ ಮತ್ತು ಅಧಿಕಾರಿಗಳು ಹಾಗೆ ಮಾಡಲಿಲ್ಲ, ಏಕೆ ಶಿಕ್ಷಿಸಲಿಲ್ಲ ಎಂದು ಕೇಳಿದರೆ ಕ್ಯಾಂಟಿನ್ ಪರವಾನಗಿ ರದ್ದುಗೊಳಿಸಲಾಗಿದೆ, ಅದೇ ಶಿಕ್ಷೆ ಎಂದು ರಿಜಿಸ್ಟ್ರಾರ್ ಹೇಳುತ್ತಾರೆ. ಇದರಿಂದ ಕಂಡುಬರುವುದು ಏನೆಂದರೆ, ವಿದ್ಯಾರ್ಥಿಗಳಿಗೆ ವಿವಿಯಲ್ಲಿ ಯಾವುದೇ ರಕ್ಷಣೆ ಇಲ್ಲ ಎಂಬುದು. ಹೀಗಾಗಿಯೇ ದಲಿತ ವಿದ್ಯಾರ್ಥಿನಿಯು ತನ್ನ ನೋವನ್ನು ಹೇಳಿಕೊಂಡ ನಂತರವೂ ಅವಳಲ್ಲಿ ಬದುಕುವ ಮತ್ತು ಸಮಸ್ಯೆ ಎದುರಿಸುವ ಮನೋಬಲ ಮೂಡಿಸಲು ಆಗಲಿಲ್ಲ. ಎಲ್ಲ ಆಸರೆಗಳು ಕಳೆದು ಹೋದ ಮೇಲೆ ಜೀವವು ಸಾಯುವ ಆಲೋಚನೆಗೆ ಇಳಿಯುವುದು ಸಹಜವಾಗಿದೆ.


ಮನುಸ್ಮೃತಿಯನ್ನು ಜಾರಿಗೊಳಿಸಲು ಆದ್ಯತೆ

ಕೋಮುವಾದದ ಚಟುವಟಿಕೆಗಳೇ ಆದ್ಯತೆಯಾಗುವುದೆಂದರೆ, ಮನುಸ್ಮೃತಿಯನ್ನು ಜಾರಿಗೊಳಿಸುವ ಆದ್ಯತೆ ಎಂದರ್ಥ. ಮನುಸ್ಮೃತಿ ಎಂದರೆ ದಲಿತರನ್ನು, ಮಹಿಳೆಯರನ್ನು, ಶ್ರಮಿಕರನ್ನು ಅದು ಅಪಮಾನಗೊಳಿಸುತ್ತದೆ, ತುಚ್ಛೀಕರಿಸುತ್ತದೆ. ಅವರ ಅಸ್ತಿತ್ವ, ಅಸ್ಮಿತೆಗೆ ಧಕ್ಕೆ ತರುತ್ತದೆ. ಅಲ್ಪಸಂಖ್ಯಾತರನ್ನು ಕಲ್ಪಿತ ಶತ್ರುವಾಗಿಸಿ ಭಯೋತ್ಪಾದನೆಯ ಮೂಲಕ ಅವರ ಮನೋಬಲ ಕುಗ್ಗಿಸಲಾಗುತ್ತದೆ. ದುರಂತವೆಂದರೆ ಕೇವಿವಿಯು ಇಂತಹ ಎಲ್ಲ ಹೀನಾತಿ ಹೀನ ಚಟುವಟಿಕೆಗೆ ಕುಮ್ಮಕ್ಕು ಕೊಡುತ್ತಿದೆ. ಸುಳ್ಳುಗಳನ್ನು ಮಾದ್ಯಮಗಳ ಮೂಲಕ ಬಿತ್ತರಿಸಿ ಕೋಮು ಪ್ರಚೋದನೆ ಮಾಡುತ್ತಿದೆ. ದಲಿತ ವಿದ್ಯಾರ್ಥಿನಿಯ ಆತ್ಮಹತ್ಯೆಯ ಪ್ರಕರಣವನ್ನು ಮುಚ್ಚಿಹಾಕಲು ಅನೇಕ ವರ್ಷಗಳಿಂದ ಇರುವ ಮಜರ್ ಕುರಿತು ಸುಳ್ಳುಗಳನ್ನು ಮಾಧ್ಯಮಗಳ ಮೂಲಕ ಬಿತ್ತರಿಸಿ ಜನರ ಚಿತ್ತವನ್ನು ಬೇರೆಡೆ ತಿರುಗಿಸಲು ಷಡ್ಯಂತ್ರ ಹೆಣೆಯಲಾಗಿದೆ. ಚಟುವಟಿಕೆಗಳಿಂದ ದಲಿತ ವಿದ್ಯಾರ್ಥಿನಿಯ ಸಾಂಸ್ಥಿಕ ಸಾವನ್ನು (ಹತ್ಯೆಯನ್ನು) ಮುಚ್ಚಿ ಹಾಕುವ ಹುನ್ನಾರ ನಡೆಸಲಾಗುತ್ತಿದೆ.

ಮಾಧ್ಯಮಗಳ ಮೂಲಕ ಮಜರ್ ಗಳ ಬಗ್ಗೆ ಸುಳ್ಳುಗಳ ಬಿತ್ತರ

ಈಗಾಗಲೇ ವಿವರಿಸಿದಂತೆ ಕೇಂದ್ರಿಯ ವಿನಿಯ ವ್ಯಾಪ್ತಿಯಲ್ಲಿ ಲಕ್ಷ್ಮಿ ಗುಡಿ, ಜೀರಲಿಂಗೇಶ್ವರ ಗುಡಿ ಮತ್ತು ಎರಡು ಮಜರ್ ಗಳು ಇದ್ದು, ಅವುಗಳಲ್ಲಿ ಲಕ್ಷ್ಮಿ ಗುಡಿಯನ್ನು ಆರ್‌ಎಸ್‌ಎಸ್ ಅಭಿವೃದ್ಧಿ ಪಡಿಸಿದೆ. ಈಗ ದಲಿತ ವಿದ್ಯಾರ್ಥಿನಿಯ ಆತ್ಮಹತ್ಯೆಯಿಂದ ಉಂಟಾಗುತ್ತಿರುವ ಕಾವನ್ನು ತಗ್ಗಿಸಲು ಉಳಿದ ಮಜರ್‌ಗಳ ಬಗ್ಗೆ ಸುಳ್ಳುಗಳನ್ನು 2025ರ ಆಗಸ್ಟ್ 3ರಂದು ಮೂರು ಎಲೆಕ್ಟ್ರಾನಿಕ್ ಮಾದ್ಯಮಗಳ ಮೂಲಕ ಬಿತ್ತರಿಸಲಾಗಿದೆ. ಮೊದಲು ಒಂದೇ ಮಜರ್ ಇತ್ತು. ಈಗ ಎರಡು ಮಜರ್ ಗಳನ್ನು ಹೊಸದಾಗಿ ನಿರ್ಮಿಸಲಾಗುತ್ತಿದೆ. ಕರೆಂಟ್ ಕನೆಕ್ಷನ್ ಸಹ ಹೊಂದಲಾಗಿದೆ. ಒಬ್ಬ ಮುಸ್ಲಿಂ ಪ್ರೊಫೆಸರ್ ಕುಮ್ಮಕ್ಕಿನಿಂದ ಈ ಸಮುದಾಯದ ವಿದ್ಯಾರ್ಥಿಗಳು ಮಜರ್‌ಗಳನ್ನು ನಿರ್ಮಿಸಿ ಮತಾಂಧತೆ ಹೆಚ್ಚಿಸುತ್ತಿದ್ದಾರೆ ಎಂದು ದಿನವಿಡೀ ಬಿತ್ತರಿಸಲಾಯಿತು. ವಾಸ್ತವದಲ್ಲಿ ಇದು ಪೂರ್ಣ ಸುಳ್ಳು ಎಂಬುದನ್ನು ಕಡಗಂಚಿ ಗ್ರಾಮದ ಜನರು ವಿವರಿಸಿದರು. ಕೆಲವು ಮಾಧ್ಯಮದವರು ಸತ್ಯನಾರಾಯಣ ಬಟ್ಟು ಉಪಕುಲಪತಿಯನ್ನೇ ಪ್ರಶ್ನಿಸಲಾಗಿ 'ಹಾಗೇನೂ ನಡೆದಿಲ್ಲ, ಎಲ್ಲವನ್ನೂ ಪರಿಶೀಲಿಸುತ್ತೇವೆ' ಎಂದು ಸಮಜಾಯಿಸಿ ಕೊಟ್ಟಿದ್ದನ್ನು ಮಾಧ್ಯಮವು ಬಿತ್ತಿರಿಸಿತು.

ಹೊರಗಿನಿಂದ ಯಾರನ್ನೂ ಒಳಬಿಡಲಾರದ ಮೇಲೆ ಮಜರ್ ನಿರ್ಮಿಸಲು ಉಸುಕು, ಸಿಮೆಂಟು, ಇಟ್ಟಂಗಿ, ಕಲ್ಲುಗಳು ಹೇಗೆ ಒಳಹೋದವು? ಅಥವ ಶ್ರೀರಾಮಸೇನೆಯು ಸಿಂದಗಿಯಲ್ಲಿ ತಾವೇ ಪಾಕ್ ಧ್ವಜ ಹಾರಿಸಿ ಮುಸ್ಲಿಂರ ತಲೆಗೆ ಕಟ್ಟಿದಂತೆ, ಇಲ್ಲಿಯೂ ನೀವೇ ನಿರ್ಮಿಸಿ ಮುಸ್ಲಿಂರ ತಲೆಗೆ ಕಟ್ಟಿ, ಕೋಮು ದಂಗೆ ಹಬ್ಬಿಸಲು ಹುನ್ನಾರ ನಡೆಸುತ್ತಿರುವಿರೇನು? ಎಂದು ಕೇವಿವಿಯ ಮುಂದೆ ನಡೆದ ಹೋರಾಟದಲ್ಲಿ ಹೋರಾಟಗಾರರು ನೇರವಾಗಿ ಪ್ರಶ್ನಿಸಿದರು. ಈ ಸುಳ್ಳು ಸುದ್ದಿಯು ಕೋಮು ಪ್ರಚೋದನಾತ್ಮಕವಾಗಿದ್ದು, ಜನತೆಗೆ ತಪ್ಪು ಸಂದೇಶ ಕೊಟ್ಟು ವಿಷ ತುಂಬಿಸಲಾಗಿದೆ ಇದಕ್ಕೆ ಯಾರು ಹೊಣೆ? ಎಂದು ಪ್ರಶ್ನಿಸಿದ್ದಕ್ಕೆ ಸತ್ಯನಾರಾಯಣ ಬಟ್ಟು ಬಳಿ ಉತ್ತರವಿರಲಿಲ್ಲ. ಎಲ್ಲದಕ್ಕೂ ಒಂದೇ ಉತ್ತರವೆಂದರೆ 'ಪರಿಶೀಲಿಸುತ್ತೇವೆ..' ಹೀಗೆ ಅತ್ಯಂತ ನಿರ್ಲಜ್ಜತೆಯಿಂದ ಕೇವಿವಿಯಲ್ಲಿ ಕೋಮುವಿಷ ಬೀಜ ಬಿತ್ತಿ ಬೆಳೆಯಲಾಗುತ್ತಿದೆ.


Complaint about canteen uncle (aadikeshavulu) Inbox

CUK DSW 5 days ago
to me

Dear Student,

With reference to your mail, you are informed to attend meeting at Meeting room, Department of Law, CUK today at 10.30 am.

On Wed, 16 Apr, 2025, 11:08 pm Karuna Cressida, <karunacressida.24@gmail.com> wrote:

Good evening sir, i am cressida from ma economics today that is on 16th April i went to canteen to talk with uncle regarding some information so the canteen is full and he said me to come inside the room which is inside the canteen and i went and i spoke to him while i was coming back he touched my face and kissed myy cheek and after i questioned him he gave me the answer that i am like his daughter.. this tagline is just like a covering and I've asked him why did u do this several times he was skipping the matter and giving me the answer that I'll call u beta beta which means daughter don't think in a bad way... It's my mistake

Reply

ಅಲ್ಪಸಂಖ್ಯಾತ ಉಪನ್ಯಾಸಕರನ್ನು ಬಲಿ ಮಾಡುವ ಷಡ್ಯಂತ್ರ

ಕೇವಿವಿಯು ಏಕಕಾಲಕ್ಕೆ ಅನೇಕ ಅಪಾಯಗಳನ್ನು ನಮ್ಮ ನಾಡಿಗೆ ತಂದೊಡ್ಡುತ್ತಿದೆ. ಕೋಮುಭಾವನೆ ಪ್ರಚೋದಿಸಲು ಹಿಜಾಬ್ ಧರಿಸಲು ಒತ್ತಾಯಿಸಿದ್ದರು ಎಂದು ಸುಳ್ಳು ದೂರನ್ನು ಮೇಲ್ ಮೂಲಕ, ಹೈದರಾಬಾದ್ ಮೂಲದ ಸಂಘವೊಂದು ಕಳಿಸಿದ್ದನ್ನು ಗಂಭೀರವಾಗಿ ಪರಿಗಣಿಸಿ, ತನಿಖೆ ಕೈಗೊಳ್ಳುವುದಾಗಿ ಕೇವಿವಿ ಹೇಳುತ್ತದೆ. ಕೇವಿವಿಯ ಅಲ್ಪಸಂಖ್ಯಾತ ಸಮುದಾಯದ ಇತಿಹಾಸ ವಿಭಾಗದ ಪ್ರೊಫೆಸರ್ ತಮ್ಮ ವಿದ್ಯಾರ್ಥಿಗಳನ್ನು ಅಧ್ಯಯನ ಪ್ರವಾಸಕ್ಕೆ ಕರೆದೊಯ್ದಿದ್ದಾರೆ. ಎಲ್ಲ ಐತಿಹಾಸಿಕ ತಾಣಗಳಂತೆ ದರ್ಗಾವೊಂದಕ್ಕೂ ಹೋಗಿದ್ದಾರೆ. ಅಲ್ಲಿ ಪುರುಷರು ಮಹಿಳೆಯರು ಎಲ್ಲರೂ ಒಳಗೆ ಬರುವಾಗ ತಲೆಗೆ ವಸ್ತ್ರ ಹಾಕಿಕೊಳ್ಳಿ ಎಂದು ಹೇಳಿದ್ದನ್ನು ಪ್ರೊಫೆಸರು ಅದನ್ನು ತರ್ಜುಮೆ ಮಾಡಿ ವಿದ್ಯಾರ್ಥಿಗಳಿಗೆ ಹೇಳಿದ್ದಾರೆ. ಅಷ್ಟೆ ನಡೆದಿದ್ದು. ಮತ್ತೇನಿಲ್ಲ. ಆದರೆ ಅನೇಕ ತಿಂಗಳುಗಳ ನಂತರ ಹೈದಾರಾಬಾದ್ ನ ಸಂಸ್ಥೆಯೊಂದು ಮೇಲ್ ಮೂಲಕ ಈ ಪ್ರೊಫೆಸರ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸುವಂತೆ ಒತ್ತಾಯ ಮಾಡಿದ್ದಾರೆ. ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂಬ ದೂರು ಬರುತ್ತದೆ. ಹಾಗೆ ನಡೆದಿದೆ ಎಂದು ಯಾವ ವಿದಾರ್ಥಿನಿಯೂ ದೂರು ಕೊಡವಿದ್ದರೂ, ರಿಜಿಸ್ಟಾರ್ ತನಿಖೆ ನಡೆಸುವುದಾಗಿ ಮಾದ್ಯಮಕ್ಕೆ ಹೇಳುತ್ತಾರೆ. ಆದರೆ ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿಯ ಮೇಲಿನ ಲೈಂಗಿಕ ಕಿರುಕುಳದ ದೂರು ಬಂದರೆ ಅದನ್ನು ಮುಚ್ಚಿ ಹಾಕಲಾಗುತ್ತದೆ. ನಮ್ಮ ನಾಡಿನ ದರ್ಗಾ, ಗುರುದ್ವಾರ ಮುಂತಾದ ಶ್ರದ್ಧಾ ಕೇಂದ್ರಗಳಲ್ಲಿ ದರ್ಶನಕ್ಕೆ ಹೋದ ಎಲ್ಲರೂ ತಲೆಗೆ ವಸ್ತ್ರ ಹಾಕಿಕೊಳ್ಳುವರು. ಆದರೆ ಹಿಜಾಬ್ ಎಂಬ ಶಬ್ದ ಬಳಸಿ ಅಲ್ಪಸಂಖ್ಯಾತ ಉಪನ್ಯಾಸಕರನ್ನು ಬಲಿ ಮಾಡುವ ಷಡ್ಯಂತ್ರವನ್ನು ಕೇವಿವಿಯು ಹೆಣೆಯುತ್ತದೆ. ತನ್ಮೂಲಕ ನಮ್ಮ ನಾಡಿನ ಭಾವೈಕ್ಯತೆಗೆ ಧಕ್ಕೆ ತರುತ್ತದೆ. ವಿದ್ಯಾರ್ಥಿಗಳಲ್ಲಿ ಕೋಮು ವಿಭಜನೆ ತರುತ್ತದೆ. ಸಮಾಜದಲ್ಲಿ ಭಯ, ಆತಂಕವನ್ನು ಹುಟ್ಟು ಹಾಕುತ್ತದೆ. ಇಂತಹ ಸಂವಿಧಾನ ವಿರೋಧಿ ಕೃತ್ಯಕ್ಕಾಗಿ ಕೇವಿವಿಯ ವಿಸಿಯವರಿಗೆ ಅಧಿಕಾರ ಕೊಟ್ಟವರು ಯಾರು?

ನಾಡಿನ ಬಹುಸಾಂಸ್ಕೃತಿಕ ಪರಂಪರೆಯನ್ನು ನಾಶಗೊಳಿಸುವ ಪ್ರಯತ್ನ

ಕೇವಿವಿಯು ಇಲ್ಲಿ ಬರುವ ಮೂಲಕ ಶೈಕ್ಷಣಿಕ ಅಭಿವೃದ್ಧಿ, ತನ್ಮೂಲಕ ನಾಡಿನ ಅಭಿವೃದ್ಧಿಯಾಗಲಿ ಎಂದು ನಮ್ಮ ನಿರೀಕ್ಷೆ ಇತ್ತು. ಆದರೆ ವಿಸಿಯವರಾದ ಸತ್ಯನಾರಾಯಣ ಬಟ್ಟು ಅವರು ಕೆಲವು ಸಿಬ್ಬಂದಿಗಳನ್ನು ಕಟ್ಟಿಕೊಂಡು ಕೇವಿವಿಯಲ್ಲಿ ಕೋಮುವಾದಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಮತ್ತು ನಮ್ಮ ನಾಡಿನ ಬಹುಸಾಂಸ್ಕೃತಿಕ ಪರಂಪರೆಯನ್ನು ನಾಶಗೊಳಿಸಿ ಜನರಲ್ಲಿ ಕೋಮು ವಿಷವನ್ನು ಹಬ್ಬಿಸುತ್ತಿದ್ದಾರೆ. ಇವರು ಈ ಕುಕೃತ್ಯಕ್ಕಾಗಿ ವಿಸಿಯಾಗಿ ಯಾಕೆ ಇರಬೇಕು? ದಲಿತ ವಿದ್ಯಾರ್ಥಿನಿಯು ಸತ್ತರೆ ಸಂತಾಪವಿಲ್ಲದ ವಿಸಿ ಯಾಕೆ ಬೇಕು? ಲೈಂಗಿಕ ಕಿರುಕುಳದ ದೂರು ಬಂದರೂ ಕ್ರಮವಹಿಸದ ವಿಸಿ ಯಾಕೆ ಬೇಕು? ಈ ವಿಸಿಯವರು ಪ್ರತಿಪಾದಿಸುತ್ತಿರುವುದು ಮನುಸ್ಮೃತಿಯನ್ನು, ಚಾತುರ್ವರ್ಣ ಪದ್ಧತಿಯನ್ನು. ಆದ್ದರಿಂದಲೇ ಮಹಿಳೆಯರನ್ನು, ದಲಿತರನ್ನು, ಅಲ್ಪಸಂಖ್ಯಾತರನ್ನು ಗುರಿಯಾಗಿಸಲಾಗಿದೆ. ಇದರಿಂದ ಆತ್ಮಹತ್ಯೆ, ಕಿರುಕುಳಗಳನ್ನು ವಿದ್ಯಾರ್ಥಿಗಳು ಎದುರಿಸುವಂತಾಗಿದೆ.

ವಿದ್ಯಾರ್ಥಿನಿಯ ಸಾಂಸ್ಥಿಕ ಹತ್ಯೆಯ ತನಿಖೆ ನಡೆಯಬೇಕು

ದಲಿತ ವಿದ್ಯಾರ್ಥಿನಿಯ ಸಾಂಸ್ಥಿಕ ಹತ್ಯೆಯ ತನಿಖೆ ನಡೆಯಬೇಕು. ಪೋಲಿಸರು ಬರುವ ಮುನ್ನವೇ ಬಾಗಿಲು ಒಡೆದು ಒಳಗೆಲ್ಲ ಓಡಾಡಿದ್ದು ಯಾಕೆ ಎಂಬುದನ್ನು ಜನತೆಗೆ ವಿವರಿಸಬೇಕು. ತನಿಖೆಯ ವ್ಯಾಪ್ತಿಗೆ ಕುಲಪತಿಗಳನ್ನೂ, ಸ್ಟುಡೆಂಟ್ ವೆಲ್ ಫೇರ್ ಅಧಿಕಾರಿ ಬಸವರಾಜ ಕುಬಕಡ್ಡಿಯವರನ್ನೂ ತರಬೇಕು. ಏಕೆಂದರೆ ಮೃತಳು ಕುಬಕಡ್ಡಿಯವರ ಮುಂದೆ ತನ್ನ ಗೋಳನ್ನು ತೋಡಿಕೊಂಡಿದ್ದಾಳೆ ಎಂಬ ವರದಿ ಇದೆ. ಹಾಗಾದರೆ ವಿದ್ಯಾರ್ಥಿಗಳಿಗೆ ಮನೋಬಲ ಮೂಡಿಸುವ ಸಾಮಾನ್ಯ ಸಾಮರ್ಥ್ಯವೂ ಕೇವಿವಿಗಿಲ್ಲ ಎಂದರ್ಥವಲ್ಲವೆ? ಮುಂದಕ್ಕೆ ಇಂತಹ ಪ್ರಕರಣಗಳು ಘಟಿಸದಂತೆ ಕೇವಿವಿಯು ಏನು ಕ್ರಮವಹಿಸುತ್ತದೆ ಎಂಬುದನ್ನು ಜನತೆಗೆ ವಿವರಿಸಬೇಕು. ಲೈಂಗಿಕ ದೌರ್ಜನ್ಯ ತಡೆ ಸಮಿತಿಯನ್ನು ರಚಿಸಿ ಕ್ರಿಯಾಶೀಲಗೊಳಿಸಬೇಕು. ಇಷ್ಟೆಲ್ಲ ಸಮಸ್ಯೆಗಳಿಗೆ ಮೂಲ ಕಾರಣವಾಗಿರುವ ಕೇವಿವಿಯ ಉಪಕುಲಪತಿಗಳಾದ ಸತ್ಯನಾರಾಯಣ ಬಟ್ಟು ಅವರ ಸ್ಥಾನವನ್ನು ಕೂಡಲೇ ತೆರವುಗೊಳಿಸಬೇಕು ಮುಂತಾದ ಹಕ್ಕೊತ್ತಾಯಗಳನ್ನು ಇಟ್ಟುಕೊಂಡು ಎಸ್‌ಎಫ್‌ಐ. ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆ ಮತ್ತು ದಲಿತ ಹಕ್ಕುಗಳ ಸಮಿತಿಗಳು 2025ರ ಆಗಸ್ಟ್ 5ರಂದು ಕೇವಿವಿಯ ಮುಂದೆ ತೀವ್ರತರ ಪ್ರತಿಭಟನೆ ನಡೆಸಿವೆ.

ಕೋಮುವಾದವು ಜಾತಿ, ಲಿಂಗ ತಾರತಮ್ಯವನ್ನು ಉಲ್ಬಣಗೊಳಿಸುವುದೆ? ಹೌದು. ಉಲ್ಬಣಗೊಳಿಸುವುದು ಮಾತ್ರವಲ್ಲ ಸಮಾಜವನ್ನು ಎಲ್ಲ ರೀತಿಯ ತಾರತಮ್ಯದಿಂದ ಛಿದ್ರಗೊಳಿಸಿ. ಕಲ್ಪಿತ ಶತೃವೊಂದನ್ನು ಸೃಷ್ಟಿಸಿ ಅದು ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುತ್ತದೆ. ಕೋಮುವಿಭಜನೆಗೆ ತೊಡಗುತ್ತದೆ. ತಾರತಮ್ಯವೆಂಬುದು ಮಹಿಳೆಯರು ಮತ್ತು ದಲಿತರ ಮೇಲಿನ ಎಲ್ಲ ರೀತಿಯ ದೌರ್ಜನ್ಯದ ಕ್ರೌರ್ಯತೆಯಲ್ಲಿ ಅನಾವರಣಗೊಳ್ಳುತ್ತದೆ. ಲೈಂಗಿಕ ಕಿರುಕುಳ, ಅತ್ಯಾಚಾರಗಳು ಸಾಮಾನ್ಯವಾಗಿ ಘಟಿಸಲ್ಪಡುತ್ತವೆ. ಕ್ರಮೇಣ ಇಡೀ ಸಮಾಜವನ್ನೇ ಮನುವಾದಿ ನೆಲೆಯತ್ತ ಜಾರಿಸಲ್ಪಡುತ್ತದೆ. ಕೋಮುವಾದೀಕರಣದ ದುಷ್ಪರಿಣಾಮಕ್ಕೆ ಬಲಿಯಾಗುವುದು ಮಹಿಳೆಯರು, ಮಕ್ಕಳು, ದಲಿತರು, ಅಲ್ಪಸಂಖ್ಯಾತರು ಮತ್ತು ಸಮಸ್ತ ಶ್ರಮಿಕರು. ಇದನ್ನು ತಡೆಗಟ್ಟಲು ಕೋಮುವಾದದ ಅಪಾಯವನ್ನು ಮನಗಾಣಿಸುತ್ತ ಸಂಘಟಿತ ಹೋರಾಟಗಳು ತೀವ್ರಗೊಳ್ಳಬೇಕಾಗುತ್ತದೆ. ವೈಜ್ಞಾನಿಕ ವೈಚಾರಿಕ ಚಿಂತನೆಗಳು ಆಯಾಸವಿಲ್ಲದೆ ಜನಮಾನಸಕ್ಕೆ ತಲುಪಿಸಲು ಶ್ರಮಿಸಬೇಕಾಗುತ್ತದೆ.

ಹಿಂದಿನಿಂದಲೂ ಹೋರಾಟಗಳು ಮೊದಲುಗೊಂಡಿವೆ

ಕೇವಿವಿಯೊಳಗಿನ ಈ ಕೋಮುವಾದಿ ಚಟುವಟಿಕೆಗಳು ಹೊರಜಗತ್ತಿಗೆ ಆಘಾತಕಾರಿಯಾದದ್ದಾಗಿತ್ತು. ರೋಹಿಣಾಕ್ಷ ಶಿರ್ಲಾಲ ಎಂಬ ಉಪನ್ಯಾಸಕ ಸ್ಥಾನ್ ಸ್ವಾಮಿ ಕುರಿತು ಬರೆದ ಮತೀಯ ಲೇಖನವನ್ನು ಪ್ರಶ್ನಿಸಿ ಕಲಬುರಗಿಯ ಬುದ್ದಿಜೀವಿಗಳು ಹೋರಾಟಗಾರರು ಕೇಂದ್ರಿಯ ವಿವಿಗೆ ಹೋಗಿ ಎಚ್ಚರಿಕೆ ಕೊಟ್ಟು ಬಂದರು. ವಿವಿಯ ಒಳಗೂ ವಿದ್ಯಾರ್ಥಿಗಳು ಹೋರಾಟ ಸುರು ಮಾಡಿದರು. ಸ್ವತಃ ಉಪಕುಲಪತಿಗಳೇ ಮನುಸ್ಮೃತಿಯ ಚಟುವಟಿಕೆ ನಡೆಸುವಾಗ ವಿದ್ಯಾರ್ಥಿಗಳು ಬಾಬಾಸಾಹೇಬ ಅಂಬೇಡ್ಕರ್ ಮೂರ್ತಿಯನ್ನು ಸ್ಥಾಪಿಸುವ ಮೂಲಕ ಬಂಡಾಯ ಸಾರಿದರು. ಇದರಿಂದ ಕೆರಳಿದ ಆಡಳಿತ ಮಂಡಳಿಯು ಮುಂಚೂಣಿಯಲ್ಲಿರುವ ವಿದ್ಯಾರ್ಥಿಗಳಿಗೆ ಕಿರುಕುಳ ಕೊಡತೊಡಗಿದರು. ಕಳೆದ ವರ್ಷ ಕಲಬುರಗಿ ನಗರದಲ್ಲಿ ಕೇಂದ್ರೀಯ ವಿಶ್ವ ವಿದ್ಯಾಲಯ ಶುದ್ದೀಕರಣ ಹೋರಾಟ ಆರಂಭಿಸಲಾಯಿತು. ಕೋಮುವಾದ ಅಳಿಸಿ ಕೇಂದ್ರೀಯ ವಿಶ್ವ ವಿದ್ಯಾಲಯ ಉಳಿಸಿ ಸಮಿತಿ ರಚಿಸಲಾಯಿತು. ಎಲ್ಲ ಜೀವಪರ ಶಕ್ತಿಗಳನ್ನು ಒಗ್ಗೂಡಿಸಿ ಚಲೋ ಕೇವಿವಿ ನಡೆಸಲಾಯಿತು.

ಸಾವಿರಾರು ಜನರು ಈ ಪಾದಯಾತ್ರೆಯಲ್ಲಿ ಪಾಲ್ಗೊಂಡರು. ಸತ್ಯನಾರಾಯಣ ಬಟ್ಟು ಹಠಾವೋ ಘೋಷಣೆಯಲ್ಲೊಂದಾಗಿತ್ತು. ಹೈದರಾಬಾದ ತರುತ್ತಿರುವುದನ್ನು ಖಂಡಿಸಲಾಯಿತು ಮತ್ತು ಎಚ್ಚರಿಕೆ ಕೊಡಲಾಯಿತು. ನಿಲ್ಲದ ಕೇವಿವಿಯ ಕೇಸರಿಕರಣ ತಡೆಯಲು ಹೋರಾಟವು ಜನಾಂದೋಲನವು ಇದಕ್ಕೆ ತಕ್ಕ ಉತ್ತರವಾಗುವುದು. ಕರ್ನಾಟಕದ ಭಾವೈಕ್ಯ ಪರಂಪರೆಗೆ ಧಕ್ಕೆ ಆಯಾಮದಲ್ಲಿ ಹುರಿಗೊಳಿಸಬೇಕಿದೆ.

....ಒಕ್ಕೂಟ ವ್ಯವಸ್ಥೆಯನ್ನು ಕಿತ್ತುಹಾಕುವುದು ಆರ್‌ಎಸ್‌ಎಸ್–ಬಿಜೆಪಿಯ ಗುರಿ

ಪುಟ 9 ರಿಂದ

ಹೆಚ್ಚುತ್ತಿರುವ ನಿರ್ಬಂಧಗಳನ್ನು ಎದುರಿಸುತ್ತಿವೆ. ಕೇಂದ್ರವು ಸಾಲಗಳ ಮೇಲಿನ ಅಂತಹ ನಿರ್ಬಂಧ ’ಗಳನ್ನು ಬಳಸಿಕೊಂಡು ರಾಜ್ಯಗಳ ಹಣಕಾಸು ದುರ್ಬಲಗೊಳಿಸಲು ಮತ್ತು ಅವುಗಳ ಅಭಿವೃದ್ಧಿ ಚಟುವಟಿಕೆಗಳಿಗೆ ಅಡ್ಡಿಪಡಿಸುತ್ತದೆ. ಆಡಳಿತ ಪಕ್ಷವಾದ ಬಿಜೆಪಿ, ನಂತರ ರಾಜ್ಯವು ಎದುರಿಸುತ್ತಿರುವ ಆರ್ಥಿಕ ತೊಂದರೆಗಳನ್ನು ಬಳಸಿಕೊಂಡು ಜನರ ದೃಷ್ಟಿಯಲ್ಲಿ ರಾಜ್ಯ ಸರ್ಕಾರವನ್ನು ಅಪಖ್ಯಾತಿಗೊಳಿಸಲು ಪ್ರಯತ್ನಿಸುತ್ತದೆ. ರಾಜ್ಯಗಳಿಗೆ ನೀಡುವ ತಾರತಮ್ಯದ ಪದ್ಧತಿಗಳು ಮತ್ತು ನಿಧಿ ನಿರಾಕರಣೆಯು ರಾಜ್ಯಗಳನ್ನು ಕೇಂದ್ರದ ಅರ್ಜಿದಾರರನ್ನಾಗಿ ಪರಿವರ್ತಿಸುವ ಮತ್ತು ಒಕ್ಕೂಟ ತತ್ವದ ಸಾರವನ್ನು ರದ್ದುಗೊಳಿಸುವ ಉದ್ದೇಶವನ್ನು ಹೊಂದಿದೆ.

ಹಿಂದೂತ್ವ ಹೇರಿಕೆ

ಕೇಂದ್ರೀಕರಣದ ಚಾಲನೆಯು ಒಕ್ಕೂಟ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಮೂರನೇ ಕ್ಷೇತ್ರವೆಂದರೆ ಶಿಕ್ಷಣ, ಭಾಷೆ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಒಳಗೊಂಡಿರುವ ಸಂಸ್ಕೃತಿ. ‘ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ’ ಎಂಬ ಬಿಜೆಪಿ–ಆರ್‌ಎಸ್‌ಎಸ್ ಘೋಷಣೆಯನ್ನು ದೇಶಾದ್ಯಂತ ಏಕರೂಪವಾಗಿ ಹೇರಲು ಪ್ರಯತ್ನಿಸಲಾಗುತ್ತಿದೆ. ಇದು ಒಕ್ಕೂಟ ವ್ಯವಸ್ಥೆಯ ಮೂಲಕ ರಕ್ಷಿಸಲ್ಪಟ್ಟ ಸಂಸ್ಕೃತಿಯ ವೈವಿಧ್ಯತೆ ಮತ್ತು ಬಹುತ್ವವನ್ನು ತುಳಿದು ಹಾಕಲಾಗುತ್ತಿದೆ. ವಿರೋಧ ಪಕ್ಷದ ಆಳ್ವಿಕೆಯ ರಾಜ್ಯಗಳಲ್ಲಿ ರಾಜ್ಯಪಾಲರನ್ನು ಬಳಸಿಕೊಂಡು ರಾಜ್ಯ ಸರ್ಕಾರಗಳು ನಡೆಸುವ ವಿಶ್ವವಿದ್ಯಾಲಯಗಳಲ್ಲಿ ಉಪಕುಲಪತಿಗಳನ್ನು ನೇಮಿಸುವಲ್ಲಿ ರಾಜ್ಯ ಸರ್ಕಾರಗಳನ್ನು ನಿರ್ಲಕ್ಷಿಸುವ ಮೂಲಕ ಶೈಕ್ಷಣಿಕ ವ್ಯವಸ್ಥೆಯಲ್ಲಿ ಹಿಂದುತ್ವ ಮೌಲ್ಯಗಳನ್ನು ಅಳವಡಿಸುವ ಚಾಲನೆಯನ್ನು ಮುಂದುವರಿಸಲು ಪ್ರಯತ್ನಿಸಲಾಗುತ್ತಿದೆ. ತಮಿಳುನಾಡು, ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಅಂತಹ ಉಪಕುಲಪತಿಗಳ ಆಯ್ಕೆಯು ಕೇಂದ್ರದ ಆಜ್ಞೆಯ ಮೇರೆಗೆ ಆಗಿದೆ.

ಹೊರಡಿಸಲಾದ ಕರಡು ಯುಜಿಸಿ ಮಾರ್ಗಸೂಚಿಗಳು, ಉಪಕುಲಪತಿಗಳನ್ನು ನೇಮಿಸುವಲ್ಲಿ ಕುಲಪತಿ/ರಾಜ್ಯಪಾಲರ ಪಾತ್ರವನ್ನು ಮತ್ತಷ್ಟು ಬಲಪಡಿಸುತ್ತವೆ. ಶಿಕ್ಷಣವು ಏಕಕಾಲೀನ ವಿಷಯವಾಗಿದ್ದರೂ, ವಿವಿಧ ಕೇಂದ್ರೀಯ ಶಿಕ್ಷಣ ಸಂಸ್ಥೆಗಳು ಮತ್ತು ಕೇಂದ್ರ ಯೋಜನೆಗಳ ಮೂಲಕ, ರಾಜ್ಯ ಸರ್ಕಾರಗಳು ಶಾಲಾ ಶಿಕ್ಷಣದಲ್ಲಿ ಯೋಜನೆಗಳನ್ನು ಪರಿಚಯಿಸಲು ಒತ್ತಾಯಿಸಲಾಗುತ್ತಿದೆ ಮತ್ತು ಅವರು ಪಾಲಿಸದಿದ್ದರೆ ಹಣವನ್ನು ಹಿಂಪಡೆಯುವ ಬೆದರಿಕೆ ಇದೆ. ಭಾಷಾ ನೀತಿಯ ಕ್ಷೇತ್ರದಲ್ಲಿ, ಹಿಂದಿಯನ್ನು ಉತ್ತೇಜಿಸಲು ಮತ್ತು ಹಿಂದಿಯೇತರ ರಾಜ್ಯಗಳ ಮೇಲೆ ಅದನ್ನು ಹೇರಲು ವಿವಿಧ ಕ್ರಮಗಳು ನಡೆಯುತ್ತಿವೆ. ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ (CBFC) ಮೂಲಕ ಹಿಂದುತ್ವದ ವಿಷಯಗಳನ್ನು ಹೊಗಳುವ ಮತ್ತು ಪ್ರಜಾಪ್ರಭುತ್ವ ಸಾಂಸ್ಕೃತಿಕ ಮೌಲ್ಯಗಳನ್ನು ಹೊಂದಿರುವ ಚಲನಚಿತ್ರಗಳನ್ನು ಮೊಟಕುಗೊಳಿಸುವ ಅಥವಾ ತಡೆಯುವ ಸಿನಿಮಾಗಳನ್ನು ಉತ್ತೇಜಿಸಲು ಸ್ಪಷ್ಟ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇಲ್ಲಿಯೂ ಸಹ, ಬಿಜೆಪಿ–ಆರ್‌ಎಸ್‌ಎಸ್ ಆಡಳಿತಗಾರರಿಗೆ, ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ನಿರ್ಮಾಣಗಳನ್ನು ಕೇಂದ್ರೀಕರಿಸುವುದು ಮತ್ತು ಏಕರೂಪಗೊಳಿಸುವುದು ಮುಖ್ಯವಾಗಿದೆ.

ಹಿಂದುತ್ವ ಸರ್ವಾಧಿಕಾರವಾದಕ್ಕೆ ರಾಜ್ಯಗಳ ಹಕ್ಕುಗಳು ಮತ್ತು ಒಕ್ಕೂಟವಾದಕ್ಕೆ ಪ್ರತಿಕೂಲವಾದ ಕೇಂದ್ರೀಕರಣ ಚಾಲನೆಯ ಅಗತ್ಯವಿದೆ. ಆದ್ದರಿಂದ ಒಕ್ಕೂಟ ಮತ್ತು ರಾಜ್ಯಗಳ ಹಕ್ಕುಗಳ ರಕ್ಷಣೆಯನ್ನು ಸರ್ವಾಧಿಕಾರ ವಿರೋಧಿ ಮತ್ತು ಹಿಂದುತ್ವ ವಿರೋಧಿ ಹೋರಾಟದ ಭಾಗವಾಗಿಸುವುದು ಮುಖ್ಯವಾಗಿದೆ. ಈ ಹೋರಾಟವನ್ನು ಎಲ್ಲಾ ಬಿಜೆಪಿಯೇತರ ರಾಜ್ಯ ಸರ್ಕಾರಗಳು ಜಂಟಿಯಾಗಿ ನಡೆಸಬೇಕು ಮತ್ತು ಎಲ್ಲಾ ಎಡ, ಪ್ರಜಾಪ್ರಭುತ್ವ, ಜಾತ್ಯತೀತ ಶಕ್ತಿಗಳ ವಿಶಾಲವಾದ ಏಕತೆಯನ್ನು ರೂಪಿಸಬೇಕು. ●

ಮಾಧ್ಯಮಗಳ ಮೇಲೆ ಧಾಳಿ.....

ಪುಟ 3 ರಿಂದ

ಕೋರ್ಟಿನ ಮುಖ್ಯಸ್ಥರಿಗೆ ದೂರು ಸಲ್ಲಿಸಲ್ಪಟ್ಟಿತೋ ಆಗ ಮೆಲ್ಲನೆ ಅವರು ಕೇಸನ್ನು ಬೇರೆಯವರಿಗೆ ವರ್ಗಾಯಿಸಲು ಕೋರಿದರು! ಆದರೆ ಅಷ್ಟರಲ್ಲಿ ಹೈಕೋರ್ಟ್ ಈ ಬಗ್ಗೆ ನಿಬರ್ಂಧ ತೆರವುಗೊಳಿಸಿ ನಿರ್ಧರಿಸಿ ಆಗಿತ್ತು. ಇದು ದೊಡ್ಡವರ ಪಟಾಲಮ್ ಗೆ ಆದ ತೀವ್ರ ಹಿನ್ನಡೆ ಮತ್ತು ಮುಖಭಂಗ. ಈ ಕೇಸ್ ಕೈಗೆತ್ತಿಕೊಳ್ಳುವಾಗ ಕನಿಷ್ಠ ನೈತಿಕವಾಗಿ ಸರಿಯಲ್ಲ ಎಂಬ ಕನಿಷ್ಠ ಪ್ರಜ್ಞೆಯೂ ಕಾಡದೇ ಹೋಗಿರುವುದು ದುರಂತ.

ಅವರು ನಿಬರ್ಂಧಿಸುವಂತೆ ಸುಪ್ರೀಂ ಕೋರ್ಟಿಗೆ ಮೇಲ್ಮನವಿಗೆ ಹೋದರೂ ಮತ್ತೆ ಅದನ್ನು ಕೆಳ ನ್ಯಾಯಾಲಯಕ್ಕೆ ಕಳಿಸಿರುವುದು ಮತ್ತೊಂದು ವಿಶೇಷ ಬೆಳವಣಿಗೆ. ನ್ಯಾಯಾಲಯವು ಸಂವಿಧಾನದ 19(1) ಅನ್ವಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಿರುವುದು ನ್ಯಾಯಾಂಗದ ಮೂಲಕ ಮಾಧ್ಯಮಗಳ ಬಾಯಿಗೆ ಬೀಗ ಹಾಕಿಸಲು ನಡೆಸಿದ ಪ್ರಯತ್ನ ವಿಫಲಗೊಂಡಿತು. ಪ್ರಜಾಪ್ರಭುತ್ವದ ಅಂಗಗಳು ಉಸಿರಾಡುವಂತೆ ಮಾಡಿತು. ಇದು ಮಾಧ್ಯಮಗಳ ಹೊಣೆಗಾರಿಕೆಯ ಪಾತ್ರಕ್ಕೆ ದೊರೆತ ಮುಕ್ತ ಅವಕಾಶ. ಆದರೆ ಕಾನೂನಿಗೆ ಗೌರವ ತೋರುವುದು ದೊಡ್ಡವರ ಪಟಾಲಂಗೆ ಬೇಕಿಲ್ಲ. ಇಲ್ಲಿ ಕಾರ್ಯ ಸಾಧನೆ ಆಗದಿದ್ದರೆ ಮತ್ತೊಂದು ಮಾರ್ಗ ಹಿಡಿಯಲು ಹೊರಟ ಅವರು ನ್ಯಾಯಕ್ಕಾಗಿ ಪ್ರತಿಪಾದಿಸುವ ಇವರ ಬಾಯಿ ಮುಚ್ಚಿಸಬೇಕೆಂದರೆ ಅನುಸರಿಸುವ ಅನಿವಾರ್ಯ ಮಾರ್ಗ ’ಭಯ ಉತ್ಪಾದನೆ’ ಎಂದು ದೈಹಿಕ ಹಲ್ಲೆ ಅಥವಾ ಸತ್ಯವನ್ನು ಎತ್ತಿ ಹಿಡಿಯುವಂತವರನ್ನು ಇಲ್ಲವಾಗಿಸುವುದು ಅವರ ಗುರಿಯಾಗಿತ್ತು.

ಧರ್ಮಸ್ಥಳಕ್ಕೆ ಬಂದು ಸೌಜನ್ಯ ಅವರ ಮನೆಗೆ ಭೇಟಿ ಕೊಡಲು ರಜತ್ ಅವರು ಬಯಸಿದ್ದಾರೆ ಎಂದು ವಿಷಯ ತಿಳಿದಾಗ ನಿನ್ನ ಗಂಡನಿಗೆ ಬುದ್ಧಿ ಹೇಳಿ ಉಳಿಸಿಕೊ ಎನ್ನುವ ಎಚ್ಚರಿಕೆಯ ಮಾತುಗಳನ್ನು ಗುಂಡಾಪಡೆ ಮಾಡಿತು. ಅದನ್ನು ಸವಾಲಾಗಿ ಸ್ವೀಕರಿಸಿದ ರಜತ್ ಸೌಜನ್ಯ ಅವರ ಮನೆಗೆ ಭೇಟಿ ಕೊಟ್ಟರು. ಬಳಿಕ ಕುಡ್ಲ ಯಾರ್ಂಪೇಜ್, ಯುನೈಟೆಡ್ ಮೀಡಿಯಾ ಮತ್ತು ಸಂಚಾರಿ ಈ ಯೂಟ್ಯೂಬರ್ ಗಳು ಸಂದರ್ಶನ ನಡೆಸುತ್ತಿರುವಾಗ ಏಕಾಏಕಿ ಬಂದಿಳಿದ 50–60 ಜನರಿಂದ ಅವರುಗಳ ಮೇಲೆ ದಾಳಿ ನಡೆಸಿದ್ದಾರೆ ರೆಕಾರ್ಡ್ ಮಾಡುತ್ತಿದ್ದ ಕ್ಯಾಮೆರಾ ಪುಡಿ ಕುಟ್ಟಿದಾರೆ. ಮೆಮೊರಿ ಕಾರ್ಡನ್ನೇ ಕದ್ದಿದ್ದಾರೆ ಎಂದ ಮೇಲೆ ಇದು ನುರಿತ ಅನುಭವಿಗಳ ಯೋಜನೆ ಮತ್ತು ಪೂರ್ವಭಾವಿ ನಿಯೋಜಿತ ಘಟನೆ ಎನ್ನುವುದು ಸ್ಪಷ್ಟ.

ಈ ಮುಖ್ಯವಾಹಿನಿ ಮಾಧ್ಯಮಗಳು ಎಂದು ಕರೆಸಿಕೊಳ್ಳುವ ಬಹುದೊಡ್ಡ ಎಲೆಕ್ಟ್ರಾನಿಕ್ ಮೀಡಿಯಾಗಳು ಇಲ್ಲಿಯ ವಾಸ್ತವಿಕ ಸಂಗತಿಗಳನ್ನು ಕಾಲದಿಂದ ಕಾಲಕ್ಕೆ ತರಲು ವಿಫಲವಾದಾಗ ಅಥವಾ ಅದನ್ನು ಹಾದಿ ತಪ್ಪಿಸಲು ಪ್ರಯತ್ನಿಸುತ್ತಿರುವಾಗ ಪರ್ಯಾಯ ಮಾಧ್ಯಮಗಳಾಗಿ ಯೂಟ್ಯೂಬರ್ ಗಳು ಕೆಲಸ ಮಾಡಿದ್ದಾರೆ ಎನ್ನುವುದು ಅಭಿನಂದನೀಯ. ಹಾಗೆ ನೋಡಿದರೆ ಈ ಮಟ್ಟದ ತನಿಖೆ ಮತ್ತು ಪ್ರತಿರೋಧ ಬೆಳೆದಿರುವುದು, ಮತ್ತಷ್ಟು ಬೆಳೆಯುವಲ್ಲಿ ಈ ಮಾಧ್ಯಮಗಳ ಸಕ್ರಿಯ ಪಾತ್ರ ಹಿರಿಯದಾಗಿದೆ. ಇಂಥವರ ಬಾಯಿ ಬಂದ್ ಮಾಡಿಸಿದರೆ ನಿರಾತಂಕವಾಗಿ ಸೆಟಲೈಟ್ ವಾಹಿನಿಗಳ ಮೂಲಕ ಬೇಕಾದ ಹಾಗೆ ಪ್ರಸಾರಿಸುವುದು ಸುಲಭ ಎಂದು ಈ ದಾಳಿ ಯೋಚಿಸಿದ್ದಂತೆ ಕಂಡು ಬರುತ್ತದೆ.

ಈ ನಡುವೆ ಸಾಮಾನ್ಯರು ಚಿಲ್ಲರೆ ತಂತ್ರ ಎಂದು ಕರೆಯುವಂತಹ ಒಂದು ಹಾಸ್ಯಸ್ಪದ ಘಟನೆಯು ನಡೆದುಹೋಯಿತು. ಗುಂಡಾಗಳಿಂದ ಒದೆ ತಿಂದು ಆಸ್ಪತ್ರೆಯಲ್ಲಿರುವಾಗ ಅಲ್ಲಿಗೆ ನುಗ್ಗಿದ ಸುವರ್ಣ ಟಿವಿ ಚಾನೆಲ್ ವರದಿಗಾರ ನನ್ನ ಮೇಲೆ ಮಟ್ಟಣ್ಣನವರು ಮತ್ತು ತಿಮರೋಡಿಯವರು ದಾಳಿ ಮಾಡಿದ್ದಾರೆ ಎಂದು ಸುವರ್ಣ ನ್ಯೂಸ್ ಚಾನೆಲ್ ನಲ್ಲಿ ಬ್ರೇಕಿಂಗ್ ನ್ಯೂಸ್ ಮಾಡಿದರು. ನಂತರ ಅದು ಸುಳ್ಳು ಎಂದು ಗೊತ್ತಾಯಿತು. ಈಗ ಅವರ ಮೇಲೆ ಸುಳ್ಳು ಸುದ್ದಿ ಹಬ್ಬಿಸಿದ ಆರೋಪ ಹೊರಿಸಿ ಅಪರಾಧಿಗಳನ್ನಾಗಿಸುವುದು, ಈ ಮೂಲಕ ಗುಂಡಾಗಿರಿ ನಡೆಸಿದವರ ಕೃತ್ಯಗಳನ್ನು ಮರೆಮಾಡಿ ಡೈವರ್ಟ್ ಮಾಡುವುದು ಅವರ ತಂತ್ರ. ಹೀಗಾಗಿಯೇ ಹಲ್ಲೆಗೊಳಗಾದವರಿದ್ದ ಆಸ್ಪತ್ರೆಗೆ ತೆರಳುವಂತೆ, ಒಳಗೆ ನುಗ್ಗುವಂತೆ ಅಜಿತ್ ಹನುಮಕ್ಕನವರು ನಿರ್ದೇಶನ ನೀಡುತ್ತಿದ್ದರು ಎನ್ನಲಾಗಿದೆ. ಅವರ ಮೇಲೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಕೂಡ ದಾಖಲಾಗಿದೆ.

ಯೂಟ್ಯೂಬರ್ ಗಳು ಅಲ್ಲಿ ನಡೆಯುವ ತನಿಖೆ ಕುರಿತು ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದ್ದಾರೆ, ಧರ್ಮಸ್ಥಳದಲ್ಲಿ ಏನೋ ನಡೆಯುತ್ತಿದೆ ಎಂದು ಅಪಪ್ರಚಾರಿಸುತ್ತಿದ್ದಾರೆ ಎನ್ನುವ, ಅಲ್ಲದೆ ಅಲ್ಲಿನ ಧರ್ಮಾಧಿಕಾರಿಗಳು ಮತ್ತು ದೇವಸ್ಥಾನ, ದೇವರ ವಿರುದ್ಧ ಅಪಪ್ರಚಾರ ಮಾಡಿ ಕ್ಷೇತ್ರಕ್ಕೆ ಮಸಿ ಬಳಿಯುತ್ತಿದ್ದಾರೆಂದು ವಾದಿಸುತ್ತಿದೆ, ಪ್ರಚಾರಸುತ್ತಿವೆ. ಆದರೆ ಆರೋಪಿಸಲಾದ ಬಹುತೇಕ ಯಾವುದೇ ಯೂಟೂಬರ್ ಗಳು ಅತ್ಯುತ್ಸಾಹ ತೋರಿಸಿರಬಹುದೇ ಹೊರತು ಹಾದಿ ತಪ್ಪಲು ಹೋಗಿಲ್ಲ ಮತ್ತು ಅತಿ ಎಚ್ಚರದಿಂದಲೇ ದೇವರು, ದೈವ ಕ್ಷೇತ್ರದ ಮಹತ್ವದ ಬಗ್ಗೆ ಎಚ್ಚರದಿಂದಲೇ ವರ್ತಿಸುತ್ತಿರುವುದು ಕಂಡು ಬರುತ್ತಿದೆ. ಹಾಗೆ ನೋಡಿದರೆ ಯಾರು ಧರ್ಮಸ್ಥಳದ ಕ್ಷೇತ್ರವನ್ನು ದೈವಗಳನ್ನು ರಕ್ಷಿಸುತ್ತಿದ್ದೇನೆ ಎಂದು ಹೇಳಿಕೊಳ್ಳುವವರು ತಮ್ಮ ಹೀನ ಕೃತ್ಯಗಳ ಮೂಲಕ ತಾವು ಎಂಥವರೆಂದು ಮತ್ತು ಧರ್ಮಸ್ಥಳದ ಶ್ರೀ ಕ್ಷೇತ್ರದ ಬಗ್ಗೆ ದೇಶ ವಿದೇಶಗಳೊಂದಿಗೆ ಮಸಿ ಬಳಿಯುವ ಕೆಲಸಕ್ಕೆ ಕಾರಣರಾಗಿದ್ದಾರೆ. ತಮ್ಮ ದುಷ್ಕೃತ್ಯ ನೀತಿ ಕತೆಗಳಿಗೆ ಸಂವಿಧಾನ ಮತ್ತು ಕಾನೂನಿನ ಕ್ರಮಗಳಿಗೆ ಅಪಮಾನ ಮಾಡುವ ಈ ಶಕ್ತಿಗಳು ಧರ್ಮ ಮತ್ತು ದೇವರನ್ನು ಗುರಾಣಿಯಾಗಿ ಬಳಸುತ್ತಿದ್ದಾರೆ.

ಒಂದು ವೇಳೆ ಈ ಪ್ರದೇಶದ ಎಲ್ಲವನ್ನು ನಿಯಂತ್ರಿಸುವ, ಹಿಡಿತ ಹೊಂದಿರುವ ಧರ್ಮಾಧಿಕಾರಿಗಳು ಅವರ ಕುಟುಂಬ ಅಪರಾಧಿಗಳನ್ನು ರಕ್ಷಿಸುತ್ತಿದ್ದಾರೆ ಎಂಬ ಆರೋಪದ ಮುಳ್ಳು ಅವರತ್ತ ತಿರುಗಿದರೆ ತನಿಖೆಗೆ ಕಾನೂನಾತ್ಮಕವಾಗಿ ಒಳಗಾಗಲು ತೊಂದರೆ ಏನಿದೆ? ಕಾನೂನಿನ ಮುಂದೆ ಎಲ್ಲರೂ ಸಮಾನರು ಇಲ್ಲವೇ? ಅದರಲ್ಲಿ ಶಾಸನ ಸಭೆಯ ಸದಸ್ಯರಾಗಿ ರಾಜ್ಯಸಭೆಯ ಸದಸ್ಯರಾಗಿ ಜನಪ್ರತಿನಿಧಿಗಳಾಗಿರುವ ಇವರು ಪ್ರಶ್ನಾತೀತರಾಗುತ್ತಾರೆಯೇ?

ಇಲ್ಲಿಯ ಬೆಳವಣಿಗೆ ಮತ್ತು ಇಲ್ಲಿ ಪ್ರಚಾರಿಸುತ್ತಿರುವ ಅಪಪ್ರಚಾರವನ್ನು ಭಕ್ತರು ಕೂಡ ಅರ್ಥಮಾಡಿಕೊಳ್ಳಬೇಕು. ಅಲ್ಲಿರುವ ಆಡಳಿತವನ್ನು ನೋಡಿಕೊಂಡು ಹೋಗುವವರೆಗೂ ಮನುಷ್ಯರೇ. ಅನೇಕ ಪುರಾಣ ಪುಣ್ಯ ಕಥೆಗಳಲ್ಲಿ ತೋರುತ್ತಿರುವಂತೆ ದೇವರೇ ತಪ್ಪು ಮಾಡಬಹುದಾದರೆ ಮನುಷ್ಯ ಏಕೆ ಮಾಡುವುದಿಲ್ಲ? ಹೀಗಾಗಿ ಅಪರಾಧ ಕೃತ್ಯಗಳ ಆರೋಪ ಇರುವುದು ಮನುಷ್ಯರ ಮೇಲೆ. ಮನುಷ್ಯರೇ ಈ ಕೃತ್ಯ ಮಾಡಲು ಸಾಧ್ಯ ಹೊರತು ದೇವರಲ್ಲ. ಹಾಗಾಗಿ ಸ್ಥಾಪಿತ ಹಿತಾಸಕ್ತಿಗಳು ಏನೇ ಪ್ರಚಾರಿಸಲಿ, ಜನ ತಪ್ಪು ಹಾದಿಗೆ ಹೋಗಬಾರದು. ಕಾನೂನು, ಸಂವಿಧಾನದಂತೆ ಎಲ್ಲವೂ ನಡೆಯಬೇಕು.

ಹೋರಾಟಗಾರರು ಒಂದು ಪ್ರಶ್ನೆ ಎತ್ತಿದ್ದಾರೆ. ಹೆಗಡೆ ಅವರ ಕುಟುಂಬಕ್ಕೆ ಇಷ್ಟೊಂದು ಅಪಾರ ಆಸ್ತಿ ಹೇಗೆ ಬಂತು? ಕೆಲವರು ಲಕ್ಷಾಂತರ ಕೋಟಿಗಳು ಆಸ್ತಿ ಇದೆ ಎನ್ನುತ್ತಾರೆ. ಐದು ಸಾವಿರಕ್ಕಿಂತಲೂ ಅಧಿಕ ಜಮೀನು ಹೊಂದಿದೆ ಎಂದು ಚಾನಲ್ ನಲ್ಲಿ ಹೋರಾಟಗಾರ ಪ್ರದೀಪ್ ಕುಮಾರ್ ಹೇಳಿದ್ದಾರೆ. ಜಮೀನು ಅಲ್ಲಿ ಆ ಧರ್ಮಾಧಿಕಾರಿಗಳ ಸ್ವಂತ ಹೆಸರಿನ ಮೇಲಿದೆ ಹೊರತು ದೇವಸ್ಥಾನದ ದೇವರ ಹೆಸರಿನಲ್ಲಿ ಇಲ್ಲ ಎನ್ನಲಾಗುತ್ತದೆ. ಇದೂ ಒಳಗೊಂಡಂತೆ ಇನ್ನೂ ಅನೇಕ ಉದ್ಯಮಗಳಲ್ಲಿ, ಯೋಜನೆಗಳಲ್ಲಿ, ವಿದೇಶಗಳಲ್ಲಿ ಹಣ ಹೂಡಲಾಗಿದೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ. ಈ ಹಿಂದೆ ನಡೆದ ಬಹುತೇಕ ಕೊಲೆಗಳು ಅದು ವೇದವಲ್ಲಿ , ಸೌಜನ್ಯ, ಆನೆಮಾವುತ ಮುಂತಾದ ಪ್ರಕರಣಗಳಲ್ಲಿ ಮುಖ್ಯವಾಗಿ ಅವರಲ್ಲಿದ್ದ ಭೂಮಿಯ ಮೇಲೆ ಕಣ್ಣು ಬಿದ್ದು ಅದನ್ನೇ ಕಿತ್ತುಕೊಳ್ಳಲು ನಡೆಸಿದ ಪ್ರಯತ್ನ. ಅದಕ್ಕೆ ಅವರು ಒಪ್ಪದೇ ಇದ್ದಾಗ ಯೋಜಿತ ಹತ್ಯೆ. ಅಲ್ಲಿ ನಡೆದ ಸಾಮಾನ್ಯ ಘಟನೆಗಳ ಬಗ್ಗೆ ಜನಸಾಮಾನ್ಯರಿಗೆ ತಿಳಿದಿರುತ್ತದೆ. ಆದರೆ ಎಲ್ಲವನ್ನು ನಿಯಂತ್ರಿಸುವ ದೊಡ್ಡವರಿಗೆ ಇಲ್ಲಿ ನಡೆಯುವ ಹತ್ಯಾಚಾರ, ಕಗ್ಗೊಲೆಯ ಘಟನೆಗಳು ಗೊತ್ತಾಗುವುದಿಲ್ಲ ಎಂದು ಭಾವಿಸಲಾದರೂ ಹೇಗೆ ಸಾಧ್ಯವಾಗುತ್ತದೆ?

ಇಲ್ಲಿ ಮತ್ತೊಂದು ಸಂಗತಿ ಇದೆ. ಹಿರಿಯ ವಕೀಲರಾದ ಬಾಲನ್ ರವರು ಇಲ್ಲಿ ನಡೆದಿರುವ ಹತ್ಯೆಗಳಿಗೆ ನರಬಲಿ ಕಾರಣ ಇರಬಹುದು ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಕೆಲವು ಪ್ರಕರಣಗಳ ವಿವರಗಳನ್ನು ನೋಡಿದರೆ ಮೇಲ್ನೋಟದಲ್ಲಿ ಕೆಲವೊಮ್ಮೆ ಹಾಗೆ ಅನಿಸಬಹುದು. ಆ ದೃಷ್ಟಿಯಲ್ಲೂ ತನಿಖೆ ನಡೆಯಲಿ. ಆದರೆ ಪದ್ಮಲತಾ, ವೇದವಲ್ಲಿ, ಸೌಜನ್ಯ, ಆನೆಮಾವುತ ಹತ್ಯೆ ಇವೆಲ್ಲವುಗಳಲ್ಲೂ ವಿಭಿನ್ನವಾದಂತಹ ಗಟ್ಟಿ ಕಾರಣಗಳಿವೆ. ಪದ್ಮಲತಾ ಅಪಹರಣ ಮತ್ತು ಅತ್ಯಾಚಾರ, ಹತ್ಯೆಯ ಹಿಂದೆ ಪಂಚಾಯಿತಿಯ ಚುನಾವಣೆಗೆ ಆಕೆಯ ತಂದೆ ದೇವಾನಂದರು ಮತ್ತು ಕಮ್ಯೂನಿಸ್ಟ್ ಪಕ್ಷದ ಪ್ರತಿನಿಧಿಗಳು ಸ್ಪರ್ಧಿಸಬಾರದು ಎಂದು ತಾಕೀತು ಮಾಡಿದ ಅಂಶವಿದೆ. ಮೇಲಾಗಿ ಧಣಿಗಳ ಹುಕುಂ ಅನ್ನು ಮೀರಿ ಭೂಮಿಗಾಗಿ ಬಡ ಗೇಣಿದಾರರ ಚಳುವಳಿ ನಡೆದದ್ದು, ಪ್ರಾಂತ ರೈತ ಸಂಘ ಬಲಗೊಳ್ಳುತ್ತಿದ್ದುದು. ಇದು ಧಣಿಗಳ ಕಣ್ಣು ಉರಿಸಿತ್ತು. ಇನ್ನು ಉಳಿದವರ ಅಪಹರಣ, ಹತ್ಯೆ, ಅತ್ಯಾಚಾರದ ಪ್ರಕರಣಗಳ ಹಿಂದೆ ಸ್ಪಷ್ಟವಾಗಿ ಭೂ ಕಬಳಿಕೆಯ ದಾಹ ಇರುವುದು. ಈ ಜನವಿಭಾಗದಲ್ಲಿ ಬೆಳೆಯುತ್ತಿದ್ದ ಪ್ರಜಾಸತ್ತಾತ್ಮಕ ಎಚ್ಚರ ಮತ್ತು ಆಗ್ರಹದ ವಿರುದ್ಧ ಉಳಿಗಮಾನ್ಯ ಪ್ರಭುಗಳ ಅಕ್ರಮಣವಿದೆ, ಆಸ್ತಿ ದಾಹವಿದೆ. ಈ ಘಟನೆಗಳಲ್ಲಿ ಈ ವರ್ಗ ಪ್ರಶ್ನೆಗಳು ನಿರ್ಣಾಯಕವಾದ ಪಾತ್ರ ವಹಿಸಿವೆ. ಇಲ್ಲಿರುವ ಸಾಮಾಜಿಕ ಶಕ್ತಿಗಳನ್ನು ಮತ್ತು ಆಡಳಿತಾತ್ಮಕ ಹಾಗೂ ರಾಜಕೀಯ ಶಕ್ತಿಗಳನ್ನು ಸಂಪೂರ್ಣವಾಗಿ ಹತೋಟಿಯಲ್ಲಿ ಇಟ್ಟುಕೊಂಡು ತಮ್ಮ ದುಷ್ಕೃತ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ. ಇದು ಮುಂದುವರಿಯಬೇಕೋ ಅಥವಾ ಇದು ಇಲ್ಲಿಗೆ ನಿಂತು ಇದರಲ್ಲಿ ಭಾಗಿಯಾದ ಶಕ್ತಿಗಳಿಗೆ ಶಿಕ್ಷೆ ಆಗಬೇಕೋ? ಈ ಬಗ್ಗೆ ಜನ ಸೂಕ್ತವಾಗಿ ಯೋಚಿಸಿ ಪ್ರಜಾಪ್ರಭುತ್ವದ ಶಕ್ತಿಗಳ ಕಡೆಗೆ ನ್ಯಾಯದ ಕಡೆಗೆ ನಿಲ್ಲುವುದು ಅತ್ಯಂತ ಜರೂರಿದೆ. ಪಾಳೇಗಾರಿ ಶಕ್ತಿಗಳ ವಿರುದ್ಧ ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟವಾಗಿ ಇದು ಬೆಳೆಯಬೇಕು. ಕ್ರಿಮಿನಲ್ ಶಕ್ತಿಗಳ ಅಟ್ಟಹಾಸ ಕೊನೆಯಾಗಬೇಕು.

ಅಮೆರಿಕದ ಜಗಳಗಂಟ ತಂತ್ರಗಳನ್ನು ಪ್ರತಿರೋಧಿಸಿ ಒತ್ತಡಕ್ಕೆ ಮಣಿಯದೆ ತಕ್ಷಣ ದೃಢ ಕ್ರಮಗಳನ್ನು ಕೈಗೊಳ್ಳಿ

ಭಾರತೀಯ ರಫ್ತುಗಳ ಮೇಲೆ ಶೇ. 50ರಷ್ಟು ಸುಂಕಗಳನ್ನು ವಿಧಿಸಿರುವುದಕ್ಕಾಗಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಮೆರಿಕವನ್ನು ಬಲವಾಗಿ ಖಂಡಿಸಿದೆ. ಈ ಏಕಪಕ್ಷೀಯ ನಡೆ ಸ್ವೇಚ್ಛಾಚಾರಿ, ಸರ್ವಾಧಿಕಾರಿ ನಡೆ ಮತ್ತು ಅಮೆರಿಕದ ಆಡಳಿತದ ಜಗಳಗಂಟ ತಂತ್ರಗಳನ್ನು ಬಿಂಬಿಸುತ್ತದೆ ಎಂದು ಅದು ಹೇಳಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಸ್ತುತ ನಡೆಯುತ್ತಿದ್ದ ವ್ಯಾಪಾರ ಮಾತುಕತೆಗಳ ಸಮಯದಲ್ಲಿ ಅಮೆರಿಕ ಮುಂದಿಟ್ಟ ಎಲ್ಲಾ ಬೇಡಿಕೆಗಳನ್ನು ಸ್ವೀಕರಿಸದೇ ಇದ್ದುದಕ್ಕಾಗಿ ಭಾರತೀಯ ರಫ್ತುಗಳ ಮೇಲೆ ಶೇಕಡಾ 25ರಷ್ಟು ಸುಂಕ ವಿಧಿಸಲಾಗುವುದು ಎಂದು ಪ್ರಕಟಿಸಿದ್ದರು. ಇದರ ಜೊತೆಗೆ, ಭಾರತವು ರಷ್ಯಾದ ತೈಲವನ್ನು ಖರೀದಿಸಿದ್ದಕ್ಕಾಗಿ ದಂಡವಾಗಿ ಹೆಚ್ಚುವರಿ ಶೇಕಡಾ 25ರಷ್ಟು ವಿಧಿಸಲಾಗಿದೆ. ಸ್ವತಃ ಯುಎಸ್ ಮತ್ತು ಯುರೋಪಿಯನ್ ಒಕ್ಕೂಟವೇ ರಷ್ಯಾದೊಂದಿಗೆ ವ್ಯಾಪಾರ ಸಂಬಂಧಗಳನ್ನು ಮುಂದುವರಿಸುತ್ತಿರುವಾಗ, ಭಾರತದಂತಹ ದೇಶಗಳು ರಷ್ಯಾದೊಂದಿಗೆ ವ್ಯಾಪಾರ ಸಂಬಂಧಗಳನ್ನು ಮುಂದುವರಿಸಿದ್ದಕ್ಕಾಗಿ ಅವುಗಳ ಕೈತಿರುಚಲು ಪ್ರಯತ್ನಿಸುತ್ತಿವೆ.

ಭಾರತ ಸರ್ಕಾರವು ದೃಢವಾಗಿ ನಿಂತು ಅಮೆರಿಕದ ಒತ್ತಡಕ್ಕೆ ಮಣಿಯದೆ ಅದನ್ನು ಪ್ರತಿರೋಧಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ. ಈ ಸುಂಕ ಹೆಚ್ಚಳಗಳಿಂದಾಗಿ ಪ್ರತಿಕೂಲ ಪರಿಣಾಮಗಳನ್ನು ಎದುರಿಸಬೇಕಾಗಿರುವ ಭಾರತೀಯ ರಫ್ತುದಾರರ ಹಿತಾಸಕ್ತಿಗಳನ್ನು ರಕ್ಷಿಸಲು ಸರ್ಕಾರ ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅದು ಹೇಳಿದೆ.

ಅಮೆರಿಕದ ಜಗಳಕೋರತನದ ವಿರುದ್ಧ ಮತ್ತು ನಮ್ಮ ದೇಶದ ಆರ್ಥಿಕ ಸಾರ್ವಭೌಮತ್ವವನ್ನು ರಕ್ಷಿಸಲು ತಕ್ಷಣ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ಸಿಪಿಐ(ಎಂ) ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಬಂಗಾಳಿಗಳಿಗೆ ಕಿರುಕುಳಗಳು ಕೊನೆಗೊಳ್ಳಬೇಕು ಬಂಗಾಳಿಯನ್ನು ವಿದೇಶಿ ಭಾಷೆ ಎಂದಿರುವುದಕ್ಕೆ ಕ್ಷಮೆ ಯಾಚಿಸಬೇಕು

ದಿಲ್ಲಿ ಪೊಲೀಸರು ಹೊರಡಿಸಿದ ಪತ್ರದಲ್ಲಿ ಬಂಗಾಳಿ ಭಾಷೆಯನ್ನು 'ಬಾಂಗ್ಲಾದೇಶಿ ಭಾಷೆ' ಎಂದು ತಪ್ಪಾಗಿ ಗುರುತಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಹಲವಾರು ಬಂಗಾಳಿ ಭಾಷಿಕರನ್ನು ಅಕ್ರಮ ಬಾಂಗ್ಲಾದೇಶಿ ವಲಸಿಗರೆಂದು ಶಂಕಿಸಿ ಬಂಧಿಸುತ್ತಿರುವ ದಿಲ್ಲಿ ಪೊಲೀಸರೊಳಗಿನ ಕಳವಳಕಾರಿ ಮನೋಭಾವವನ್ನು ಇದು ಬಿಂಬಿಸುತ್ತದೆ. ಬಂಗಾಳಿ ಎಂಬುದು ತನ್ನದೇ ವಿಶಿಷ್ಟ ಲಿಪಿಯನ್ನು ಹೊಂದಿರುವ ಒಂದೇ ಒಂದು ಭಾಷೆ ಎಂಬ ತಥ್ಯದ ಬಗ್ಗೆ ಅವರ ಅಜ್ಞಾನವನ್ನೂ ಇದು ತೋರಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಸಂವಿಧಾನದ ಎಂಟನೇ ಶೆಡ್ಯೂಲಿನಲ್ಲಿ ಭಾರತದ ರಾಷ್ಟ್ರೀಯ ಭಾಷೆಗಳು ಎಂದು ಮಾನ್ಯತೆ ಪಡೆದಿರುವ ಭಾಷೆಗಳಲ್ಲಿ ಬಂಗಾಳಿಯೂ ಒಂದು. ಇದಕ್ಕೆ ಒಂದು ವಿದೇಶಿ ಭಾಷೆ ಎಂದು ಹಣೆಪಟ್ಟಿ ಕಟ್ಟುವ ಮೂಲಕ, ನೇರವಾಗಿ ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ದಿಲ್ಲಿ ಪೊಲೀಸ್ ವಾಸ್ತವಿಕವಾಗಿ ಸಾಂವಿಧಾನಿಕ ನಿಬಂಧನೆಗಳನ್ನು ಉಲ್ಲಂಘಿಸುತ್ತಿದೆ. ಇದು ಅಮಿತ್ ಷಾ ನೇತೃತ್ವದ ಗೃಹ ಸಚಿವಾಲಯದ ಕಾರ್ಯವೈಖರಿಯ ಪ್ರತಿಬಿಂಬವಾಗಿದೆ. ಅವರು ಪದೇ ಪದೇ ಬಂಗಾಳಿ ಮಾತನಾಡುವ ಜನರ ಬಗ್ಗೆ ತನ್ನ ತಿರಸ್ಕಾರವನ್ನು ತೋರಿಸಿದ್ದಾರೆ.

ಈ ಇಡೀ ಘಟನೆಯು ನೆರೆಯ ದೇಶದೊಂದಿಗೆ ಒಂದು ಭಾಷೆಯನ್ನು ಹಂಚಿಕೊಂಡಿದ್ದಾರೆ ಎಂಬ ಕಾರಣಕ್ಕಾಗಿ ಬಂಗಾಳಿಗಳನ್ನು ನುಸುಳುಕೋರರು ಎಂದು ಚಿತ್ರಿಸುವ ಬಿಜೆಪಿ ನೇತೃತ್ವದ ಸರ್ಕಾರದ ದುಷ್ಟ ಪ್ರಯತ್ನವನ್ನು ಪ್ರಕಟಪಡಿಸುತ್ತದೆ. ಹಲವಾರು ರಾಜ್ಯಗಳಲ್ಲಿ ಪೊಲೀಸರು ಬಂಗಾಳಿಗಳನ್ನು, ವಿಶೇಷವಾಗಿ ಬಡ ವಲಸೆ ಕಾರ್ಮಿಕರನ್ನು ಅಕ್ರಮವಾಗಿ ದಸ್ತಗಿರಿ ಮಾಡುವ ಮೂಲಕ ಕಿರುಕುಳಕ್ಕೆ ಒಳಪಡಿಸುತ್ತಿದ್ದಾರೆ. ಹಲವರನ್ನು ದೌರ್ಜನ್ಯ, ಚಿತ್ರಹಿಂಸೆ ಮತ್ತು ಸೂಕ್ತ ಕಾನೂನು ಪ್ರಕ್ರಿಯೆಯಿಲ್ಲದೆ ಗಡಿಪಾರಿಗೂ ಗುರಿಪಡಿಸಲಾಗಿದೆ.

ಬಂಗಾಳಿ ಭಾಷಿಕ ನಾಗರಿಕರಿಗೆ ಕೊಡುತ್ತಿರುವ ಕಿರುಕುಳವನ್ನು ಕೇಂದ್ರ ಸರ್ಕಾರ ತಕ್ಷಣವೇ ಕೊನೆಗೊಳಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ, ಬಂಗಾಳಿಯನ್ನು ಒಂದು ವಿದೇಶಿ ಭಾಷೆ ಎಂದು ಗುರುತಿಸಿದ್ದಕ್ಕಾಗಿ ಗೃಹ ಸಚಿವಾಲಯ ಕ್ಷಮೆಯಾಚಿಸಬೇಕು ಮತ್ತು ಇದಕ್ಕೆ ಹೊಣೆಗಾರರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಪುಸ್ತಕಗಳ ನಿಷೇಧ ಸರ್ವಾಧಿಕಾರಶಾಹಿಯ ಮತ್ತೊಂದು ಅಭಿವ್ಯಕ್ತಿ

25 ಪುಸ್ತಕಗಳನ್ನು ನಿಷೇಧಿಸುವ ಜಮ್ಮು ಮತ್ತು ಕಾಶ್ಮೀರದ ಉಪರಾಜ್ಯಪಾಲರ ನಿರ್ಧಾರವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ವಿರೋಧಿಸಿದೆ. ಈ ಸೆನ್ಸಾರ್‌ಶಿಪ್ ಸರ್ವಾಧಿಕಾರಶಾಹಿಯ ಮತ್ತೊಂದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ನಗ್ನ ದಾಳಿಯಾಗಿದೆ ಎಂದು ಅದು ಹೇಳಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿರುವ ಉಪರಾಜ್ಯಪಾಲರು, ಭಾರತೀಯ ಸಂವಿಧಾನವು ಖಾತರಿಪಡಿಸಿದ ಮೂಲಭೂತ ಹಕ್ಕುಗಳನ್ನು ಆಕ್ರಮಣಕಾರಿಯಾಗಿ ಮೊಟಕುಗೊಳಿಸುತ್ತಿದ್ದಾರೆ. ಈ ಪುಸ್ತಕಗಳು 'ಪ್ರತ್ಯೇಕತೆ ಮತ್ತು ಭಯೋತ್ಪಾದನೆಗೆ' ಸಹಾಯ ಮಾಡುತ್ತವೆ ಎಂಬ ನೆಪವನ್ನು ಉಲ್ಲೇಖಿಸಿ, ಅವರ ಆಡಳಿತವು ಕಾಶ್ಮೀರದ ಇತಿಹಾಸ ಮತ್ತು ಅದರ ಪ್ರಸ್ತುತ ಸಮಸ್ಯೆಗಳ ಬೇರುಗಳನ್ನು ಅನ್ವೇಷಿಸುವ 25 ಪುಸ್ತಕಗಳ ಮೇಲೆ ನಿಷೇಧ ಹೇರಿದೆ. ಇವುಗಳಲ್ಲಿ ಎ.ಜಿ.ನೂರಾಣಿ, ಅನುರಾಧಾ ಭಾಸಿನ್, ಅರುಂಧತಿ ರಾಯ್ ರಂತಹ ಪ್ರಸಿದ್ಧ ಲೇಖಕರ ಕೃತಿಗಳು ಸೇರಿವೆ.

ಪುಸ್ತಕಗಳ ಮೇಲಿನ ನಿಷೇಧವನ್ನು ತಕ್ಷಣವೇ ರದ್ದುಗೊಳಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುವುದಾಗಿ ಪೊಲಿಟ್‌ಬ್ಯುರೊ ಹೇಳಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಪೂರ್ಣ ಪ್ರಜಾಪ್ರಭುತ್ವ ಹಕ್ಕುಗಳೊಂದಿಗೆ ರಾಜ್ಯದ ದರ್ಜೆಯನ್ನು ವಿಳಂಬವಿಲ್ಲದೆ ಪುನಃಸ್ಥಾಪಿಸಬೇಕು. ಚುನಾಯಿತ ಸರ್ಕಾರಕ್ಕೆ ಸಂಪೂರ್ಣ ಆಡಳಿತಾತ್ಮಕ ಅಧಿಕಾರ ನೀಡಬೇಕು. ಇಂತಹ ಕ್ರಮಗಳ ಮೂಲಕ ಮಾತ್ರ ಜಮ್ಮು ಮತ್ತು ಕಾಶ್ಮೀರದ ಜನರ ವಿಶ್ವಾಸವನ್ನು ಮರಳಿ ಪಡೆಯಲು ಸಾಧ್ಯ ಎಂದು ಅದು ಹೇಳಿದೆ.

ಸುಂಕಪಟ್ಟಿಯನ್ನು ಅಸ್ತ್ರವಾಗಿಸುವ ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ಒಗ್ಗಟ್ಟಿನಿಂದ ಪ್ರತಿರೋಧಿಸೋಣ

ಸಂಪತ್ತು ಸೃಷ್ಟಿಸುವ ವರ್ಗಗಳಿಗೆ ಸಿಐಟಿಯು ಕರೆ

ಭಾರತದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಜುಲೈ 31, 2025ರಂದು ಪ್ರಕಟಿಸಿದ ಶೇ. 25ರಷ್ಟು ಸುಂಕವಲ್ಲದೆ, ಇನ್ನೂ 25 ಶೇ. ಹೆಚ್ಚುವರಿ ಸುಂಕವನ್ನು ವಿಧಿಸಿರುವುದನ್ನು ಸಿಐಟಿಯು ಖಂಡಿಸಿದೆ. ಭಾರತದ ಆಮದುಗಳ ಮೇಲಿನ ಯುಎಸ್ ಸುಂಕವನ್ನು ಶೇ. 50ಕ್ಕೆ ಏರಿಸುವ ನಡೆ ಭಾರತದ ವಿರುದ್ಧ ಸುಂಕದರವನ್ನು ಅಸ್ತ್ರವಾಗಿಸಿಕೊಳ್ಳುವುದಲ್ಲದೆ ಬೇರೇನೂ ಅಲ್ಲ ಎಂದಿರುವ ಸಿಐಟಿಯು, ಈ ರೀತಿ ತೋಳು ತಿರುಚುವುದರಿಂದ ಮತ್ತು ಯುಎಸ್‌ನ ಸಾಮ್ರಾಜ್ಯಶಾಹಿ ಕುತಂತ್ರಗಳಿಂದ ಭಾರತೀಯ ಉದ್ದಿಮೆಗಳು, ಕೃಷಿ ಮತ್ತು ಇವುಗಳಿಗೆ ಸಂಬಂಧಪಟ್ಟ ದುಡಿಯುವ ಜನಗಳನ್ನು ರಕ್ಷಿಸಬೇಕು ಎಂದು ಭಾರತದ ಎಲ್ಲಾ ದೇಶಪ್ರೇಮಿ ಜನರಿಗೆ ಸಿಐಟಿಯು ಕರೆ ನೀಡಿದೆ.

ಭಾರತ-ಯುಎಸ್ ವ್ಯಾಪಾರ ಮಾತುಕತೆ ನಡೆಯುತ್ತಿರುವಾಗ, ಇಂತಹ ಬೆದರಿಕೆಗಳನ್ನು ಯುಎಸ್ ಅಧ್ಯಕ್ಷರು ಒಂದರ ನಂತರ ಒಂದರಂತೆ ಹರಿಯಬಿಡುತ್ತಿರುವುದು ಇನ್ನಷ್ಟು ಅಸಹ್ಯದ ಸಂಗತಿ ಎಂದು ಅದು ಹೇಳಿದೆ. ಭಾರತವು ರಷ್ಯಾದಿಂದ ನೇರವಾಗಿ ಅಥವಾ ಪರೋಕ್ಷವಾಗಿ ತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸುವಂತೆ ಬೆದರಿಕೆ ಹಾಕುವ ಅಮೆರಿಕದ ಹೆಚ್ಚುವರಿ ಸುಂಕ ಹೇರಿಕೆಯು, ಸಾಮ್ರಾಜ್ಯಶಾಹಿಯ ಕೊಳಕು ಮುಖವನ್ನು ಮತ್ತು ಭಾರತ ತನ್ನ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿ ಸ್ವತಂತ್ರ ವ್ಯಾಪಾರ ಸಂಬಂಧಗಳನ್ನು ಹೊಂದುವ ಸಾರ್ವಭೌಮತ್ವವನ್ನು ಮತ್ತು ವಿದ್ಯುಕ್ತ ಹಕ್ಕನ್ನು ದುರ್ಬಲಗೊಳಿಸಲು ಅದು ಟೊಂಕ ಕಟ್ಟಿ ನಿಂತಿದೆ ಎಂಬುದನ್ನು ಬಯಲಿಗೆಳೆಯುತ್ತದೆ.

ಭಾರತ ಸರ್ಕಾರವು ಇದು ಅನ್ಯಾಯ, ಅಸಮರ್ಥನೀಯ ಮತ್ತು ಅತಾರ್ಕಿಕ ಎಂದು ತಡವಾಗಿಯಾದರೂ ಪ್ರತಿಕ್ರಿಯಿಸಿದ್ದು, ಈಗ ಇದನ್ನು ನಿರಂತರವಾಗಿ ಮುಂದುವರಿಸಬೇಕು ಮತ್ತು ದೃಢತೆಯಿಂದ ಅನುಸರಿಸಬೇಕು ಹಾಗೂ ಭಾರತದ ಸಾರ್ವಭೌಮತ್ವವನ್ನು ದುರ್ಬಲಗೊಳಿಸುವ ಎಲ್ಲಾ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ದೃಢವಾದ ಪ್ರತಿರೋಧವನ್ನು ಒಡ್ಡಬೇಕು ಎಂದು ಸಿಐಟಿಯು ಹೇಳಿದೆ.

ಯುಕೆ ಯೊಂದಿಗೆ 'ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ' (ಸಿಇಟಿಎ) ಮತ್ತು ಯುರೋಪಿಯನ್ ಒಕ್ಕೂಟದೊಂದಿಗಿನ ಇಂತಹ ಇತರ ಒಪ್ಪಂದಗಳಲ್ಲಿ ಭಾರತ ಸರ್ಕಾರದ ಇತ್ತೀಚಿನ ಹೀನಾಯ ಶರಣಾಗತಿ ಮತ್ತು ತಲೆಬಾಗಿರುವುದು ಮತ್ತು ಆ ಒಪ್ಪಂದಗಳನ್ನು ಮಾಡಿಕೊಳ್ಳಲು ಭಾರತ ಸರ್ಕಾರ ಮಾಡಿದ ರಾಜಿಗಳು ಅಮೆರಿಕಕ್ಕೆ ತನ್ನ ಸುಂಕ ಬೆದರಿಕೆಗಳನ್ನು ಮತ್ತಷ್ಟು ಹೆಚ್ಚಿಸಲು ಧೈರ್ಯ ತುಂಬಿದೆ. ಅಮೆರಿಕ ಮತ್ತು ಅದರ ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ಎದುರಿಸಲು ರಷ್ಯಾ ಮತ್ತು ಚೀನಾದೊಂದಿಗೆ ಮತ್ತು ಬ್ರಿಕ್ಸ್‌ಗೆ ಸೇರಿದ ಇತರ ರಾಷ್ಟ್ರಗಳೊಂದಿಗೆ ದೃಢ ಸಹಯೋಗ ನಡೆಸಲು ಮೋದಿ ನೇತೃತ್ವದ ಸರ್ಕಾರ ಹಿಂಜರಿದಿರುವುದು, ಅಮೆರಿಕವು ಭಾರತವನ್ನು ತನ್ನ ಹಿತಾಸಕ್ತಿಗೆ ತಕ್ಕಂತೆ ಕುಣಿಸಲು ಅನುವು ಮಾಡಿಕೊಟ್ಟಿದೆ.

ಇಂತಹ ಸುಂಕ ಬೆದರಿಕೆಗಳ ನಡುವೆಯೂ, ಅಮೆರಿಕದೊಂದಿಗೆ 10 ವರ್ಷಗಳ ರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳಲು ಮೋದಿ ಸರ್ಕಾರ ಆತುರವಾಗಿರುವುದು ಕೂಡ, ಭಾರತ ಮತ್ತು ಯುಎಸ್‌ಎ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ಕುರಿತು ನಡೆಯುತ್ತಿರುವ ಮಾತುಕತೆಗಳ ನಡುವೆ, ಸಾಮ್ರಾಜ್ಯಶಾಹಿ ಯುಎಸ್‌ಎ ಷರತ್ತುಗಳನ್ನು ಒಡ್ಡುವ ಈ ಪ್ರಕ್ರಿಯೆಯಲ್ಲಿ ಒಂದು ಪ್ರಮುಖ ಅಂಶವಾಗಿದೆ.

ಭಾರತದ ವಿರುದ್ಧ ಸಾಮ್ರಾಜ್ಯಶಾಹಿ ಯುಎಸ್‌ಎ ಸುಂಕಗಳನ್ನು ಅಸ್ತ್ರವಾಗಿ ಬಳಸುವುದನ್ನು ಒಗ್ಗಟ್ಟಿನಿಂದ ಪ್ರತಿರೋಧಿಸಲು ಸಿಐಟಿಯು ಎಲ್ಲಾ ಸಂಪತ್ತು ಉತ್ಪಾದಿಸುವ ವರ್ಗಗಳಾದ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಮತ್ತು ಇತರ ವಿಭಾಗಗಳ ಜನಸಾಮಾನ್ಯರಿಗೆ ಕರೆ ನೀಡಿದೆ ಮತ್ತು ಯುಎಸ್‌ನ ಒತ್ತಡ, ಬೆದರಿಕೆಗಳಿಗೆ ಬಲಿಯಾಗಬಾರದು ಎಂದು ಮೋದಿ ನೇತೃತ್ವದ ಸರ್ಕಾರವನ್ನು ಆಗ್ರಹಿಸಿದೆ.

ಶಿಬು ಸೊರೆನ್: ಆದಿವಾಸಿಗಳ ಸಬಲೀಕರಣ ಮತ್ತು ನ್ಯಾಯಕ್ಕಾಗಿ ಚಳವಳಿಯ ಮುಂಚೂಣಿಯಲ್ಲಿ ನಿಂತವರು

ಝಾರ್ಖಂಡಿನ ಮಾಜಿ ಮುಖ್ಯಮಂತ್ರಿ ಶಿಬು ಸೊರೆನ್ ಆಗಸ್ಟ್ 4, 2025ರಂದು ನಿಧನರಾದರು. ಆದಿವಾಸಿ ದನಿಗಳನ್ನು ಒಗ್ಗೂಡಿಸುವಲ್ಲಿ ಮತ್ತು ಆದಿವಾಸಿಗಳ ಸಬಲೀಕರಣ ಮತ್ತು ನ್ಯಾಯಕ್ಕಾಗಿ ಚಳವಳಿಯ ಮುಂಚೂಣಿಯಲ್ಲಿ ನಿಂತಿದ್ದವರು ಎಂದು ಅವರನ್ನು ಸದಾ ಸ್ಮರಿಸಿಕೊಳ್ಳಲಾಗುವುದು ಎಂದು ಅವರ ನಿಧನದ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿಯ ಪರವಾಗಿ ಹಾರ್ದಿಕ ಸಂತಾಪವನ್ನು ಸೂಚಿಸುತ್ತ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿಯವರು, ಸೊರೆನ್ ಅವರ ಪುತ್ರ ಹಾಗೂ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೆನ್ ಅವರಿಗೆ ಪತ್ರ ಬರೆದಿದ್ದಾರೆ,

ತಮ್ಮ ಲಕ್ಷಾಂತರ ಅಭಿಮಾನಿಗಳಿಗೆ ಗುರೂಜಿ ಎಂದು ಪರಿಚಿತರಾಗಿರುವ ಶಿಬು ಸೊರೆನ್ ಅವರ ಜೀವನವು ತಾಳಿಕೆ, ಧೈರ್ಯ ಮತ್ತು ಜಾರ್ಖಂಡ್‌ನ ಬುಡಕಟ್ಟು ಸಮುದಾಯಗಳ ಹಕ್ಕುಗಳು ಮತ್ತು ಘನತೆಗೆ ಅಚಲವಾದ ಬದ್ಧತೆಗೆ ಪ್ರಬಲ ಸಾಕ್ಷಿಯಾಗಿದೆ ಎಂದು ಬೇಬಿಯವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಅವರು ಕಾರ್ಮಿಕ ವರ್ಗದ ಹಕ್ಕುಗಳ ಪರವಾಗಿಯೂ ನಿಂತವರು ಮತ್ತು ಕಾರ್ಮಿಕ ಚಳುವಳಿಯೊಂದಿಗೆ ಸಹಯೋಗ ಹೊಂದಿದ್ದರು. ಅವರ ಕೆಲಸವು ಅಸಂಖ್ಯಾತ ಜೀವಗಳನ್ನು ಮುಟ್ಟಿದೆ, ಇದು ಅವರನ್ನು ಕಳೆದುಕೊಂಡಿರುವ ದು:ಖವನ್ನು ಸಹಿಸಿಕೊಳ್ಳುವ ಶಕ್ತಿ ಮತ್ತು ಸ್ಥೈರ್ಯವನ್ನು ನೀಡಲಿ ಎಂದು ಆಶಿಸಿದ್ದಾರೆ.

'ಕುವೆಂಪು ವಿಚಾರ ಕ್ರಾಂತಿ'....

ಪುಟ 16ರಿಂದ

ನಾಳೆ ರಾಮಧ್ಯಾನ ಮಾಡಿ ಪ್ಲೇಗು ಓಡಿಸಲಾರರೆ ಎಂದು ಮೂಢರು ಆ ರೋಗಕ್ಕೆ ಬೇಕಾಗುವ ವೈದ್ಯಕಾರ್ಯಗಳನ್ನು ಮಾಡದೇ ನಾಶವಾಗಬಹುದು."

"(ದಲಿತರು).. ಗುಡಿಯೊಳಗೆ ಹೋಗಿ ಮತದ ಮೌಢ್ಯಕ್ಕೂ ಪುರೋಹಿತರ ಸುಲಿಗೆಗೂ ಒಳಗಾಗುವುದಕ್ಕಿಂತ, ದೂರವಾಗಿದ್ದುಕೊಂಡು ಎದೆಯ ದೇಗುಲದಲ್ಲಿಯೇ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವಭಕ್ತಿಯಿಂದ ಪೂಜಿಸ ಬಾರದೇ?" ಎಂಬ ಹಲವರ ಪ್ರಶ್ನೆಯನ್ನು ತಾವೂ ಕೇಳಿಕೊಂಡು ಕುವೆಂಪು ತಾವೇ ಉತ್ತರಿಸಿರುವುದು ಹೀಗೆ.. "(ದೇವಸ್ಥಾನ ಪ್ರವೇಶ) ಉಚ್ಚ ವರ್ಗದ ಹಿಂದುಗಳ ಪರಿಶುದ್ಧತೆಗಾಗಿ ಮತ್ತು ದೃಷ್ಟಿವೈಶಾಲ್ಯ ಸಾಧನೆಗಾಗಿಯೇ ಹೊರತು ಹರಿಜನರ (ದಲಿತರ) ಮೋಕ್ಷಕ್ಕಾಗಿಯಲ್ಲ." ಈ ಮೇಲಿನೆಲ್ಲ ಹೇಳಿಕೆಗಳು ನಮ್ಮ ಸಮಾಜಕ್ಕೆ ಬಹು ದೀರ್ಘಕಾಲ ಮಾರ್ಗದರ್ಶಕ ಮಾತುಗಳಾಗಿ ನಿಲ್ಲಬಲ್ಲ ಸತ್ವಶಾಲಿ ತತ್ವ ಪ್ರಣಾಳಿಕೆಗಳು.

ಈ ಕಾಲಕ್ಕೆ ಹೇಗೆ ಪ್ರಸ್ತುತ ಕುವೆಂಪು?

ವೃತ್ತಿಗಳಲ್ಲಿ, ಮುಖ್ಯವಾಗಿ ನಗರಗಳಲ್ಲಿ ಜನರು ಕೈಗೊಳ್ಳುವ ವೃತ್ತಿಗಳಲ್ಲಿ 'ಸಂಗ್ರಹಕಾರಕ' 'ಉತ್ಪತ್ತಿಕಾರಕ' ಎಂದು ವಿಭಜಿಸುವ ಕುವೆಂಪು ಅವರು 'ಸಂಗ್ರಹಕಾರಕ ವೃತ್ತಿಯೇ ಹೆಚ್ಚುತ್ತಾ ಹೋದರೆ, ಎಲ್ಲರೂ ಎಷ್ಟು ಕಾಲ ತಾನೆ, ಸಂಪತ್ತನ್ನು ಸೃಷ್ಟಿಸದೇ ಸಂಗ್ರಹಿಸುತ್ತಲೇ ಹೋಗಲಾಗುತ್ತದೆ.' ಎಂದು ಎಚ್ಚರಿಸಿದ್ದಾರೆ. ಕುವೆಂಪು ಅವರೊಳಗೆ ನೈತಿಕ ಪ್ರಜ್ಞೆಯ ಜಾಗೃತಿಯುಳ್ಳ ವಿಚಾರವಾದಿ ಚಿಂತಕ ಇರುವಂತೆ ಒಬ್ಬ ವಿವೇಕಶಾಲಿ 'ಆರ್ಥಿಕ ತಜ್ಞ'ನೂ ಇದ್ದಾನೆ ಎಂಬುದನ್ನು ಇಲ್ಲಿ ಗಮನಿಸಬೇಕು. ರೈತರ ಕೃಷಿ ಭೂಮಿ ಕಸಿದು ರಿಯಲ್ ಎಸ್ಟೇಟ್ ದಂಧೆ ಮಾಡುವವರು, ಹಣ ದ್ವಿಗುಣ ಮಾಡುತ್ತೇವೆ, ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿ– ಅಪಾರ ಬಡ್ಡಿ ಕೊಡುತ್ತೇವೆ, 'ಚೈನ್‌ಲಿಂಕ್' ಮಾದರಿ ಹಣಕಾಸು ವ್ಯವಹಾರ ಮಾಡುತ್ತೇವೆ ಎನ್ನುವವರ ಬಗೆಗೆ ಈ ಮಾತನ್ನು ಅನ್ವಯಿಸಿ ನಾವು ಗಂಭೀರವಾಗಿ ಚಿಂತಿಸಬೇಕು. ಹೀಗೆ ಕುವೆಂಪು ಅವರ ವಿಚಾರಗಳ ಕೇಂದ್ರ ಕೇವಲ ಜಾತಿ–ಮತಗಳಲ್ಲ ಎಂಬುದನ್ನೂ ಗಮನಿಸಬೇಕು.

ಧನ ಬಲದ ರಾಜಕೀಯ

ಚುನಾವಣೆಗಳಲ್ಲಿ ಹಣಬಲದ ಬಳಕೆ, ಭ್ರಷ್ಟಾಚಾರ–ದುರಾಚಾರಗಳ ಬಗ್ಗೆ ಕುವೆಂಪು ಎಚ್ಚರಿಕೆ ನೀಡಿದ್ದಾರೆ. ಅದನ್ನು ಓದುವಾಗ ನಮಗೆ ಇದೀಗ ಅಮಾನ್ಯಗೊಂಡ ಚುನಾವಣಾ ಬಾಂಡ್ ಪದ್ಧತಿ, 'ಆಪರೇಷನ್ ಕಮಲ'ದಂತಹ ಹೊಲಸು ರಾಜಕಾರಣವು ನೆನಪಾಗದೇ ಇರುವುದಿಲ್ಲ.

'ಅಂಕುಶವಿರಬೇಕು'

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಎಂದು ಕರೆಕೊಟ್ಟ ಕುವೆಂಪು 'ನಿರಂಕುಶಮತಿ'ತ್ವ ಎಂದರೆ 'ನಿರಂಕುಶ ಪ್ರಭುತ್ವ'ದಂತೆ ಎಂದು ತಿಳಿಯಬಾರದು, (ಬದಲಿಗೆ) ಸಂಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶಮತಿ' ಎಂದು ಸ್ಪಷ್ಟಪಡಿಸುತ್ತಾರೆ. ಆಳುವ ಸರಕಾರಗಳು ಇದನ್ನು ನೆನಪಿಡುವುದಿಲ್ಲ, ಜನಚಳುವಳಿಗಳ ನಾಯಕತ್ವ–ಕಾರ್ಯಕರ್ತರು ಇದನ್ನು ಸದಾ ಎಚ್ಚರದಿಂದ ಸರಕಾರಕ್ಕೆ ನೆನಪಿಸುತ್ತಿರಬೇಕು. ತಮಗಾಗಿಯೂ ನೆನಪಿಟ್ಟುಕೊಳ್ಳಬೇಕು.

ವಿಚಾರ ವೇದಿಕೆಗಳು

"ಯುವಜನರನ್ನು ಜಾಗೃತಿಗೊಳಿಸುವ ವಿಚಾರ ವೇದಿಕೆಗಳು ಹಳ್ಳಿಹಳ್ಳಿಗಳಲ್ಲೂ ಹುಟ್ಟಿಕೊಳ್ಳಬೇಕು" ಎಂಬ ಕುವೆಂಪು ಅವರ ಕರೆಯ ಬಗೆಗೆ ಈ ಕೃತಿಯಲ್ಲಿದೆ. ಇದನ್ನು ಓದಿ, 'ಗೋ ಸಂರಕ್ಷಕ'ರ ಹೆಸರಿನ, ದಾರಿ ತಪ್ಪಿರುವ ಯುವಜನರ ಪಡೆಯನ್ನು ಪ್ರಗತಿಪರ ಜನಚಳುವಳಿಗಳ ಕಡೆಗೆ ಸೆಳೆದುಕೊಳ್ಳುವ ಮಾರ್ಗಗಳ ಬಗೆಗೆ ನಮ್ಮಲ್ಲಿ ಯೋಚನೆ–ಯೋಜನೆ ಮೊಳೆಯಬೇಕು.

"ಹಳೆಯ ಶಾಸ್ತ್ರ, ಬೂಸಲು ಧರ್ಮ, ಕೇಡಿ ಜಗದ್ಗುರು, ಸ್ವಾರ್ಥಶೀಲ ಆಚಾರ್ಯ, ಇವರನ್ನೆಲ್ಲಾ ಮುಲಾಜಿಲ್ಲದೇ ಧಿಕ್ಕರಿಸುವಂತಾಗಬೇಕು" ಎಂದು ಕುವೆಂಪು ಅವರು ಹೇಳುವಾಗ, ನಮ್ಮ ಈಗಿನ ಹೈಟೆಕ್ ಆಧ್ಯಾತ್ಮ ಗುರುಗಳು, ದಿನ ಬೆಳಿಗ್ಗೆ ಟಿವಿಗಳಲ್ಲಿ ವಕ್ಕರಿಸಿಕೊಂಡು ಕೂತು, ಜನರಿಗೆ ಮಂಕುಬೂದಿ ಎರಚುತ್ತಿರುವ ಠಕ್ಕ ಜ್ಯೋತಿಷಿಗಳಿಗೆ ಪಾಠ ಕಲಿಸುವುದು ಹೇಗೆ ಎಂದು ನಾವು ಚಿಂತಿಸುವಂತಾಗಬೇಕು. "ತಿರುಪತಿ' ಹೆಸರಿನಲ್ಲಿ, 'ಉಡುಪಿ' ಹೆಸರಿನಲ್ಲಿ 'ಧರ್ಮಸ್ಥಳ' ಹೆಸರಿನಲ್ಲಿ ಜನರನ್ನು ಹೆದರಿಸಿ, ಯಾವ ರೀತಿ ಸುಲಿಗೆ ಮಾಡುತ್ತಿದ್ದಾರೆ? ಮೋಸ ಮಾಡುತ್ತಿದ್ದಾರೆ?" ಎಂಬ ಮಾತುಗಳನ್ನು ಓದಿ ಕುವೆಂಪು ಅವರ 'ಮುಂಗಾಣ್ಕೆ' –'ಹಿಂಗಾಣ್ಕೆ'ಗಳ ಬಗೆಗೆ ಹೆಮ್ಮೆ ಪಡಬೇಕು.

ಪೂರ್ಣದೃಷ್ಟಿ

ಕುವೆಂಪು ಅವರು ಪ್ರತಿಪಾದಿಸಿರುವ ಮನುಜ ಮತ, ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ ಎಂಬ ಪರಿಕಲ್ಪನೆಗಳನ್ನು ಜಾಗತೀಕರಣವು ಜಾರಿಯಾಗಿರುವ ಈ ಕಾಲ ಘಟ್ಟದಲ್ಲಿನ ವಾಸ್ತವವನ್ನು ಅರಿಯಲು ಅನ್ವಯಿಸಿ ನೋಡಬೇಕು. ಜಾಗತೀಕರಣದ ಕಾಲದಲ್ಲಿ ಆಧುನಿಕತೆಯ ಭ್ರಮೆಯಲ್ಲಿ, ಆಧುನಿಕೋತ್ತರವಾದ ಅಮಲಿನಲ್ಲಿ ಒಟ್ಟು ಸಮಾಜದ ಹಿತಕ್ಕೆ ವಿರುದ್ಧವಾದ ಸಮಾಜವಾದದ ಆಶಯಗಳಿಗೆ ವಿಮುಖವಾದ ಬೆಳವಣಿಗೆಗಳನ್ನು ಗುರುತಿಸಬೇಕು. ಮೊದಲೇ ಜಾತಿ, ಒಳಜಾತಿ, ಮತ, ಪಂಗಡ, ಪ್ರದೇಶ, ಲಿಂಗ ಮುಂತಾದ ಹೆಸರಿನಲ್ಲಿ, ಛಿದ್ರ ಛಿದ್ರವಾಗುತ್ತಿರುವ ಸಮಾಜದಲ್ಲಿ, ವ್ಯಕ್ತಿವಾದ, ಸ್ವಾರ್ಥ ಪ್ರೇರಿತ, ವ್ಯಕ್ತಿ ಕೇಂದ್ರಿತ ಚಿಂತನೆಗಳು ಎದ್ದು ಬರುತ್ತಿರುವುದನ್ನು ಅರಿಯಬೇಕು. ಶೋಷಿತ ವರ್ಗಗಳ ವಿಮೋಚನೆಗಾಗಿ ನಡೆಯುತ್ತ ಬಂದಿರುವ ಸಂಘಟಿತ ಜನಾಂದೋಲನ ಗಳ ಬಗೆಗೆ 'ಚಳುವಳಿಗಳ ಕಾಲ ಆಗಿ ಹೋಯಿತು', 'ಮಾರ್ಕ್ಸ್‌ವಾದದ ಕಾಲ ಮುಗಿದು ಹೋಯಿತು' ಮುಂತಾಗಿ ಒರಲುತ್ತಿರುವ ಆಧುನಿಕೋತ್ತರ ತತ್ವ 'ಜ್ಞಾನಿ'ಗಳ ವಾದದ ಒಳ ಹುನ್ನಾರಗಳನ್ನು ಅರಿಯಬೇಕು.

ಪುನರವಲೋಕನವೂ ಬೇಕು

ಕುವೆಂಪು ವಿಚಾರಗಳ ಸಾರವು ಈಗಲೂ ಸಮಾಜದ ಮುನ್ನಡೆಗೆ ಬೇಕಾಗಿದೆ, ಇಂದಿಗೂ ಅದು ಪ್ರಸ್ತುತವಾಗಿದೆ. ಹೀಗಿರುವಾಗಲೂ ಅವು ಕುವೆಂಪು ಅವರು ಬಾಳಿ ಬದುಕಿದ ಚಾರಿತ್ರಿಕ ಸಂದರ್ಭದ ಉತ್ಪನ್ನಗಳು ಎನ್ನುವುದನ್ನು ಮರೆಯಬಾರದು. ಹೀಗಾಗಿ ಕೆಲವೆಡೆ ಎಚ್ಚರದ ಗಮನವೂ ಬೇಕು.

'ಸಮಯದ ಬೊಂಬೆ'ಗಳು

ಗಾಂಧೀಜಿಯವರ ಶಿಷ್ಯರಾದ ವಿನೋಬಾ ಭಾವೆಯವರನ್ನು 'ಜಗತ್ತಿನ ಮಹೋನ್ನತ ಪುರುಷರಲ್ಲಿ ಒಬ್ಬರು' ಎಂದು ಕುವೆಂಪು ಅವರು ನೆಹರೂ ಅವರ ವೈಜ್ಞಾನಿಕ ಮನೋಭಾವದ ಕುರಿತ ತಮ್ಮ ಬರಹದಲ್ಲಿ ಸಾಂದರ್ಭಿಕವಾಗಿ ಉಲ್ಲೇಖಿಸಿದ್ದಾರೆ. ಭಾರತವು ಸ್ವಾತಂತ್ರ್ಯದ ಹೊಸ್ತಿಲಿನಲ್ಲಿದ್ದಾಗ ಬಂಗಾಳ, ತೆಲಂಗಾಣ ಮುಂತಾದ ದೇಶದ ನಾನಾ ಭಾಗಗಳಲ್ಲಿ 'ಉಳುವವನಿಗೆ ಭೂಮಿ' ಎನ್ನುವ ಭೂ ಆಕ್ರಮಣ ಚಳುವಳಿಗಳು ಸ್ಫೋಟಿಸಿದ್ದವು. ಸ್ವಾತಂತ್ರ್ಯದ ನಂತರ ಭೂಮಿ ಪ್ರಶ್ನೆ ಸಮರ್ಪಕವಾಗಿ ಇತ್ಯರ್ಥವಾಗದೇ ಹೋದಾಗ, ಇಂತಹ ಭೂಮಿ ಹೋರಾಟಗಳು ದೇಶವ್ಯಾಪಿ ಹಬ್ಬುವ ಸಾಧ್ಯತೆಯೂ ಕಾಣುತ್ತಿತ್ತು. ಇಂತಹ ಸನ್ನಿವೇಶದಲ್ಲಿ ಜಮೀನ್ದಾರರು ಹಾಗೂ ಭೂಮಾಲಕರ 'ಮನವೊಲಿಸಿ' ಉಳುವವರಿಗೆ 'ದಾನ' ಪಡೆದು ಕೊಳ್ಳುವ ಹೆಸರಿನಲ್ಲಿ ನಡೆದದ್ದು 'ಭೂ ದಾನ' ಚಳುವಳಿ. ಇದರ ನೇತೃತ್ವ ವಹಿಸಿದವರು ವಿನೋಬಾ ಭಾವೆ. ಬಹುತೇಕ, ಬೀಜ ಅರಳದ ಬಂಜರು ಭೂಮಿ, ಮಾಲಕರಿಗೆ ಬೇಡದ ಬರಡು ಭೂಮಿ–ಕಲ್ಲುಮುಳ್ಳುಗಳ ಕರಾಬು ಭೂಮಿಯನ್ನು ದಾನವಾಗಿ ಜಮೀನ್ದಾರರು ಕೊಟ್ಟರು. ಹೀಗೆ ಸರಕಾರದ ಕೈಗೆ ಬಂದ ಭೂಮಿಯೂ ಭೂಮಿ ಇಲ್ಲದವರಿಗೆ ವರ್ಗಾವಣೆಯಾಗಲಿಲ್ಲ. ಕೊಟ್ಟ ಭೂಮಿಯನ್ನು ಎಷ್ಟೋ ಕಡೆಗಳಲ್ಲಿ ವಾಪಸ್ ಕಿತ್ತುಕೊಳ್ಳಲಾಯಿತು ಎಂಬೆಲ್ಲಾ ವಿಚಾರಗಳನ್ನು ಪ್ರಜ್ಞಾವಂತರು ಮರೆಯುವಂತಿಲ್ಲ. ಹೋರಾಡುವ ವೀರ ತೆಲಂಗಾಣದ ಸ್ಫೂರ್ತಿಗೆ ಬದಲಾಗಿ ಭೂಮಿ ಬೇಡುವ 'ಭೂದಾನ'ದ ಕಲ್ಪನೆ, 'ಅವಡಿ' ಕಾಂಗೆಸ್ಸಿನಲ್ಲಿ 'ಸಮಾಜವಾದ'ದ ಪಥವನ್ನು ಘೋಷಿಸಿದ ನೆಹರೂರವರ ಅಭಿವೃದ್ಧಿ ಪಥ ಎಲ್ಲವನ್ನು ಇದೇ ಹಿನ್ನೆಲೆಯಲ್ಲಿಯೇ ಅರಿಯಬೇಕು. 'ಕಟ್ಟುವೆವು ನಾವು ಹೊಸ ನಾಡೊಂದನು..., ಹೊಸ ನೆತ್ತರುಕ್ಕಿ ಆರಿ ಹೋಗದ ಮುನ್ನ..' ಎಂಬಂತೆ ಜನರ ಸ್ಫೂರ್ತಿ ಉಕ್ಕುವಾಗ ಹೊಮ್ಮಿದ 'ಸಮಯದ ಬೊಂಬೆಗಳು' ಅಥವಾ 'ಕಾಲದ ಬೊಂಬೆಗಳು' ಈ ಮೇಲಿನ ಕೆಲವು ಪಾತ್ರಗಳು.

ಬ್ರಹ್ಮಚರ್ಯ – ತೇಜಸ್ಸು ಓಜಸ್ಸುಗಳು!!

'ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ' ಲೇಖನದಲ್ಲಿ (1938) ಕುವೆಂಪು ಅವರು "ಇಂದಿನ ಮನಶಾಸ್ತ್ರವೂ ಕೂಡ, ಬ್ರಹ್ಮಚರ್ಯದಿಂದ ತೇಜಸ್ಸು ಓಜಸ್ಸುಗಳು ದರ್ಪ, ಬಲ, ಅಧಿಕಾರಗಳು ಲಭಿಸುತ್ತವೆ ಎಂದು ಹೇಳುತ್ತಿವೆ." ಎನ್ನುತ್ತಾರೆ. ಈ ಮಾತನ್ನು ಆ ಕಾಲದಲ್ಲಿ ವ್ಯಾಪಕವಾಗಿದ್ದ ಬಾಲ್ಯವಿವಾಹಗಳು, ಕುಟುಂಬ ಯೋಜನೆಯ ಅರಿವು–ಅನುಕೂಲಗಳ ಕೊರತೆ, ಅದರಿಂದ ತರುಣ–ತರುಣಿಯರ ವಿದ್ಯಾಭ್ಯಾಸ ಮೊಟಕಾಗುತ್ತಿದ್ದ ಹಿನ್ನೆಲೆಯಲ್ಲಿ ಅರಿತುಕೊಳ್ಳಬೇಕು ಎನಿಸುತ್ತದೆ. ಇಲ್ಲವಾದಲ್ಲಿ ಇದೇ ಒಂದು ಮೌಢ್ಯವೂ ಆಗುವ ಅಪಾಯವಿದೆ.

ಕುವೆಂಪು ಅವರು ಈಗ ಬದುಕಿದ್ದಿದ್ದರೆ ಖಂಡಿತ ತಮ್ಮ ವಿಚಾರಗಳನ್ನು ಮತ್ತೆ ಮತ್ತೆ ಪರಿಶೀಲನೆಗೆ ಒಳಪಡಿಸಿ ಉತ್ತಮ ಪಡಿಸಿಕೊಳ್ಳುತ್ತಿದ್ದರು. ಹಳೆಯ ವಿಚಾರಗಳಲ್ಲಿರುವ ತಪ್ಪುಗಳನ್ನು ಹೊಸ ಸಂಶೋಧನೆ, ಅನುಭವಗಳ ಆಧಾರದಲ್ಲಿ ತಿಕ್ಕಿ ತೊಳೆದು ನೋಡಿ, ತಪ್ಪಿದ್ದಲ್ಲಿ ತಿದ್ದಿಕೊಳ್ಳುವುದು ವಿಜ್ಞಾನದ ವಿಧಾನ ಎಂದು ಕುವೆಂಪು ಅವರೇ ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ. ಕುವೆಂಪು ಅವರು ಹಾಕಿಕೊಟ್ಟ ಈ ಮಾರ್ಗದಲ್ಲಿ ಮುಂದುವರಿದರೆ ಅದು ಜನಚಳುವಳಿಗಳ ಮತ್ತು ಆ ಮೂಲಕ ಸಮಾಜದ ಮಹತ್ವದ ಮುನ್ನಡೆಗೆ ಪ್ರೇರಣೆಯಾಗುತ್ತದೆ.

ಧರ್ಮಸ್ಥಳದಲ್ಲಿ ಹೂತು ಹೋದ ಸತ್ಯ–ನ್ಯಾಯ ನೀತಿ....

ಪುಟ 6 ರಿಂದ

ಹನುಮಕ್ಕನವರ ಮೇಲೆ ದಾಖಲಾಗಿದೆ.

ಈಗ ಪ್ರಕರಣ ತೀವ್ರ ಕಾವು ಪಡೆದಕೊಂಡಿದೆ. ಸ್ಥಳೀಯವಾಗಿ ಈಗಾಗಲೇ ಇರುವ ಭಯ–ಭೀತಿಗಳನ್ನು ಸ್ಥಿರೀಕರಿಸಿಕೊಳ್ಳುವ ಕೆಲಸ ಅಲ್ಲಿ ನಡೆದಿದೆ. ಗ್ರಾಮ ಪಂಚಾಯತ್‌ನ ಮಾಜಿ ಸದಸ್ಯರುಗಳು ಮಾಧ್ಯಮಗಳಿಗೆ ಹೇಳಿಕೆ ನೀಡಿ, ಧರ್ಮಸ್ಥಳದ ನೇತ್ರಾವತಿಯಲ್ಲಿ ಅಸಹಜ ಸಾವುಗಳು ಸಂಭವಿಸಿದಾಗೆಲ್ಲ ಪಂಚಾಯತ್‌ನ ನಿಯಮಗಳಿಗೆ ಅನುಸಾರವಾಗಿಯೇ ಹೂಳಲಾಗಿದೆ ಎಂದು ಸ್ಪಷ್ಟೀಕರಣ ನೀಡುತ್ತಿದ್ದಾರೆ.

ಠಾಣೆಯಲ್ಲಿನ ದಾಖಲೆಗಳ ನಾಶ

ಸ್ಥಳೀಯ ಪೊಲೀಸ್ ಸ್ಟೇಷನ್‌ನಲ್ಲಿ ಆ ಅವಧಿಯ ಎಲ್ಲ ದಾಖಲೆಗಳನ್ನು ನಾಶ ಪಡಿಸಲಾಗಿದೆ ಎಂಬ ಆಘಾತಕಾರೀ ಸುದ್ದಿಗಳು ಹೊರಬಿದ್ದಿವೆ. ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕು ಎಂದು ಒತ್ತಾಯಿಸುವಾಗಲೇ ಅಧಿಕೃತ ಸಾಕ್ಷಿ, ದಾಖಲೆಗಳನ್ನು ನಾಶಮಾಡದಂತೆ ಕ್ರಮಕೈಗೊಳ್ಳುವ ಹೊಣೆಗಾರಿಕೆಯನ್ನು ಸರ್ಕಾರ ನಿಭಾಯಿಸಬೇಕು. ತನಿಖಾ ತಂಡವೊಂದು ಕೆಲಸ ಮಾಡುತ್ತಿರುವಾಗ ಸ್ಥಳೀಯ ಪೊಲೀಸ್ ಸ್ಟೇಷನ್‌ನಲ್ಲಿ UDR ಪ್ರಕರಣಗಳ ದಾಖಲೆಗಳನ್ನು ನಾಶಪಡಿಸಲು ಅವಕಾಶ ಸಿಕ್ಕಿದೆ ಎಂದರೆ ಕಾಣದ ಕೈಗಳ ಚಾಚು ಎಷ್ಟು ಬಲವಾಗಿದೆ ಎಂದು ಅರ್ಥ ಮಾಡಿಕೊಳ್ಳಬಹುದು. ಸೌಜನ್ಯ ಪ್ರಕರಣದಲ್ಲಿಯೂ ಎಲ್ಲ ಸಾಕ್ಷಿಗಳನ್ನೂ ದುರುದ್ದೇಶ ಪೂರ್ವಕವಾಗಿ ನಾಶ ಮಾಡಿದ್ದಾರೆಂಬ ಗಂಭೀರ ಆರೋಪಗಳಿರುವಾಗ ಮತ್ತೆ ಈ ಪ್ರಕರಣದಲ್ಲಿಯೂ ಅಂತಹುದೇ ಸಾಧ್ಯತೆಗಳನ್ನು ಸೂಚಿಸುತ್ತಿದೆ. ಸರಕಾರ ಇದರ ಹೊಣೆ ಹೊರಬೇಕು.

ಧರ್ಮಸ್ಥಳದ ಪ್ರಕರಣಗಳನ್ನು ಸುಮ್ಮನೆ ಅಸಹಜ ಸಾವುಗಳೆಂದು ಪರಿಗಣಿಸಲಾಗದು. ಅದನ್ನು ಅಲ್ಲಿಯ ಭೂಮಿಯ ಪ್ರಶ್ನೆ, ರಾಜ್ಯವ್ಯಾಪೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳ ಮೂಲಕ ನಡೆಸುತ್ತಿರುವ ಚಟುವಟಿಕೆಗಳು, ಮೈಕ್ರೋ ಫೈನಾನ್ಸ್ ಕಂಪನಿಗಳ ಮೂಲಕ ಸಾಲ ನೀಡಿಕೆ, ದುಬಾರಿ ಬಡ್ಡಿ ಮತ್ತು ವಸೂಲಿ ಕಿರುಕುಳಗಳ ಅಂಶಗಳನ್ನು ಜೊತೆಯ ಜೋಡಿಸಿಕೊಂಡು ನೋಡಬೇಕಲ್ಲದೇ ಅನ್ಯ ಮಾರ್ಗವೇ ಇಲ್ಲ.

ಆರ್‌ಎಸ್‌ಎಸ್‌ನ ಒಂದು ಬಣವೂ ಇದೆ

ದಕ್ಷಿಣ ಕನ್ನಡದ ಆರ್‌ಎಸ್‌ಎಸ್‌ನ ಒಂದು ಬಣವೂ ಇಲ್ಲಿನ ವಿದ್ಯಮಾನಗಳ ವಿರುದ್ಧದ ಹೋರಾಟದಲ್ಲಿ ಇದೆ. ಅದು ನ್ಯಾಯಕ್ಕಾಗಿಯೇ ಹೌದು ಆದರೆ ಅದರ ಹಿಂದೆ ಹಿಂದುತ್ವವಾದೀ ಪ್ರತಿಪಾದನೆಯೂ ಸೇರಿದೆ ಎಂಬುದು ಕೂಡಾ ಬಹಿರಂಗ ಗುಟ್ಟು. RSS ನ ಒಂದು ಬಣ ತನ್ನ ಅಜೆಂಡಾ ಕಾರಣಕ್ಕಾಗಿ ಇಲ್ಲಿ ಹೋರಾಟದಲ್ಲಿ ತೊಡಗುವದಕ್ಕೂ ಬಹಳ ಮೊದಲೇ ಸವಾಲೊಡ್ಡಿರುವುದು ಸಿಪಿಐ(ಎಂ) ಎನ್ನುವುದು ಸತ್ಯದ ವಿಷಯ.

ಕಮ್ಯೂನಿಸ್ಟ್ ಪಕ್ಷ, ಕೇರಳ ಸರ್ಕಾರವನ್ನು ಗುರಿಯಾಗಿಸಿ

ಇತರ ಯಾವುದೆ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಯಾವುದೇ ಪ್ರತಿಕ್ರಿಯೆ ಮಾಡುತ್ತಿಲ್ಲ ಎನ್ನುವುದನ್ನು ನಾವು ಗುರುತಿಸಬೇಕು. ನೂರಾರು ಜನರ ಅಸಹಜ ಸಾವು, ಮಹಿಳೆಯರ ಮೇಲೆ ಅತ್ಯಾಚಾರ, ಬಡವರ ಭೂಮಿ ಕಬಳಿಕೆ, ವಿಪರೀತ ಬಡ್ಡಿ ವಿಧಿಸಿ ಸಾಲ, ಸಾಲದ ಬಾಕಿ ಕಟ್ಟಲಾಗದಿದ್ದಲ್ಲಿ ಜಪ್ತಿ, ಹೀಗೆಲ್ಲ ಇರುವಾಗಲೂ ಜನರ ಪರವಾಗಿ ಧ್ವನಿ ಎತ್ತದ ವಿವಿಧ ರಾಜಕೀಯ ಪಕ್ಷಗಳು ಮತ್ತವರ ಮುಖವಾಣಿ ವಿದ್ಯುನ್ಮಾನ ಮಾಧ್ಯಮಗಳು ಪ್ರಜಾಪ್ರಭುತ್ವ ಎತ್ತ ಸಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿವೆ. ಭಾರತೀಯ ಜನತಾ ಪಕ್ಷದ ನಾಯಕರು ನೇರವಾಗಿ ಕಮ್ಯೂನಿಸ್ಟ್ ಪಕ್ಷ, ಕೇರಳ ಸರ್ಕಾರವನ್ನು ಗುರಿಯಾಗಿಸಿ ಜನರ ಮೇಲೆ ಪ್ರಭಾವ ಬೀರಲು ಅಪಪ್ರಚಾರ ನಡೆಸಿದ್ದಾರೆ. ಇನ್ನು ಸರಕಾರ ನಡೆಸುತ್ತಿರುವ ಪಕ್ಷ ಮತ್ತದರ ನೇತಾರರು ಸ್ವಯಂ ಶರಣಾಗತಿಯ ಸ್ಥಿತಿಯಲ್ಲಿ ಕಾಣಿಸಿಕೊಂಡಿದ್ದಾರೆ.

ಸೌಜನ್ಯ ಪ್ರಕರಣದಲ್ಲಿ ಸಿಬಿಐ ನ್ಯಾಯಾಲಯ ಕೊಟ್ಟ ಆದೇಶವನ್ನು ಜಾರಿಮಾಡಲು ಹಿಂದೆ ಮುಂದೆ ನೋಡಿದ ಸರಕಾರವೊಂದು ಮೂರು ಕಾಸಿಗೆ ಮಹಿಳೆಯರ ಘನತೆಯನ್ನು ಅಳೆಯುತ್ತಿದೆ. ಶಕ್ತಿ ಯೋಜನೆ, ಮತ್ತೊಂದು, ಇನ್ನೊಂದು ಎಂಬ ಗ್ಯಾರಂಟಿಗಳ ಭಜನೆ ಮಾಡುವ ಬದಲು, ನ್ಯಾಯದ ದಾರಿಯ ದೀಪ ನಂದದಂತೆ ನೋಡಲಿ.

●

ಛತ್ತೀಸ್‌ಗಢ ಕ್ರೈಸ್ತ ಸನ್ಯಾಸಿನಿಯರ ಬಂಧನ ಆರೆಸ್ಸೆಸ್‌ನ ವಿಷಪೂರಿತ 'ಹಿಂದುತ್ವ ರಾಷ್ಟ್ರ' ಕಾರ್ಯಸೂಚಿ

ಬೃಂದಾ ಕಾರಟ್

ಛತ್ತೀಸ್‌ಗಢದಲ್ಲಿ ಬಜರಂಗದಳದ ಕಾರ್ಯಕರ್ತರ ದೂರಿನ ಮೇರೆಗೆ, ಮಾನವ ಕಳ್ಳಸಾಗಣೆ ಮತ್ತು ಬಲವಂತದ ಧಾರ್ಮಿಕ ಮತಾಂತರದ ಆರೋಪದ ಮೇಲೆ ಜುಲೈ 25ರಂದು ದುರ್ಗ್ ರೈಲು ನಿಲ್ದಾಣದಲ್ಲಿ ಸರ್ಕಾರಿ ರೈಲ್ವೆ ಪೊಲೀಸರಿಂದ ಬಂಧಿಸಲ್ಪಟ್ಟಿದ್ದ ಕೇರಳದ ಇಬ್ಬರು ಕ್ರೈಸ್ತ ಸನ್ಯಾಸಿನಿಯರಿಗೆ ಮತ್ತು ಇನ್ನೊಬ್ಬ ವ್ಯಕ್ತಿ ಸುಖ್‌ಮಾನ್ ಮಾಂಡವಿ ಅವರಿಗೆ ಛತ್ತೀಸ್‌ಗಢದ ಎನ್‌ಐಎ ನ್ಯಾಯಾಲಯ ಆಗಸ್ಟ್ 2ರಂದು ಜಾಮೀನು ನೀಡಿದೆ. ಪ್ರೀತಿ ಮೇರಿ (55) ಮತ್ತು ವಂದನಾ ಫ್ರಾನ್ಸಿಸ್ (53) ಎಂಬ ಕ್ರೈಸ್ತ ಸನ್ಯಾಸಿನಿಯರು ಎಂಟು ದಿನಗಳಿಗೂ ಹೆಚ್ಚು ಕಾಲ ಜೈಲಿನಲ್ಲಿ ಕಳೆದರು. ಜೈಲಿನಲ್ಲಿದ್ದ ಇವರನ್ನು ಭೇಟಿ ಮಾಡಿ ಬಂದ ಸಿಪಿಐ(ಎಂ) ನಾಯಕಿ ಬೃಂದಾ ಕಾರಟ್ ಅವರು ಬರೆದ ಲೇಖನ ಇಲ್ಲಿದೆ.

ನಮ್ಮ ತಂಡವು ದುರ್ಗ್ ಕೇಂದ್ರ ಕಾರಾಗೃಹದಲ್ಲಿ ಸನ್ಯಾಸಿನಿಯರಾದ ಸಿಸ್ಟರ್ ಪ್ರೀತಿ ಮೇರಿ ಮತ್ತು ವಂದನಾ ಫ್ರಾನ್ಸಿಸ್ ಅವರನ್ನು ಭೇಟಿಯಾದಾಗ, ಛತ್ತೀಸ್‌ಗಢದಲ್ಲಿ ಆಡಳಿತಾರೂಢ ಬಿಜೆಪಿ ಸರ್ಕಾರ ನಡೆಸುತ್ತಿರುವ ದೌರ್ಜನ್ಯದ ಬಗ್ಗೆ ಅವರು ನಮ್ಮೊಂದಿಗೆ ಅತ್ಯಂತ ಧೈರ್ಯ ಮತ್ತು ಘನತೆಯಿಂದ ಮಾತನಾಡಿದರು. ತಮ್ಮೊಂದಿಗೆ ಬಂಧಿಸಲ್ಪಟ್ಟ ಬುಡಕಟ್ಟು ಯುವಕ ಸುಖ್ಮಾನ್ ಮಾಂಡವಿಗೆ ಏನಾಯಿತು ಎಂದು ಅವರು ತುಂಬಾ ಚಿಂತಿತರಾಗಿದ್ದರು. ದಶಕಗಳಿಂದ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಸನ್ಯಾಸಿನಿಯರು ನಿಸ್ವಾರ್ಥವಾಗಿ ಸೇವೆಗಳನ್ನು ಒದಗಿಸುತ್ತಿದ್ದಾರೆ. ಅವರು ತಮ್ಮ ಸಂಸ್ಥೆಗಳು ಸ್ಥಾಪಿಸಿರುವ ಆಸ್ಪತ್ರೆಗಳಲ್ಲಿ ಎಲ್ಲ ವರ್ಗದ ಬಡವರ ಸೇವೆ ಮಾಡುತ್ತಿದ್ದಾರೆ. ಅವರು ತಮ್ಮ ಬಳಿಗೆ ಸಹಾಯಕ್ಕಾಗಿ ಬರುವ ಜನರಲ್ಲಿ ಅವರ ಧರ್ಮ ಅಥವಾ ಜಾತಿಯ ಬಗ್ಗೆ ಎಂದಿಗೂ ಕೇಳುವುದಿಲ್ಲ. ಈ ನಿರಂತರ ಕಾರ್ಯಕ್ಕಾಗಿ ಅವರಿಗೆ ಪ್ರಶಸ್ತಿ ನೀಡಬೇಕು ಎಂದು ನಾವು ಭಾವಿಸಿದ್ದೇವೆ. ಬದಲಾಗಿ, ಅವರನ್ನು ಜೈಲಿಗೆ ಹಾಕಲಾಗಿದೆ.

ಆರೋಪಗಳು ಶುದ್ಧ ಸುಳ್ಳು

ಸನ್ಯಾಸಿನಿಯರ ವಿರುದ್ಧದ ಆರೋಪಗಳು ಸುಳ್ಳು ಮತ್ತು ಕಟ್ಟುಕಥೆ ಎಂದು ಅವರಿಗೆ ಚೆನ್ನಾಗಿ ತಿಳಿದಿದ್ದರೂ ಅವರು ಜೈಲಿನಲ್ಲಿದ್ದಾರೆ. ಅವರ ವಿರುದ್ಧ ಹೊರಿಸಲಾದ ಬಲವಂತದ ಮತಾಂತರದ ಆರೋಪ ಸುಳ್ಳು. ಏಕೆಂದರೆ ಸನ್ಯಾಸಿನಿಯರೊಂದಿಗೆ ಕೆಲಸ ಮಾಡುತ್ತಿದ್ದ ಬುಡಕಟ್ಟು ಜನಾಂಗದವರು ಹಲವು ವರ್ಷಗಳಿಂದ ಕ್ರೈಸ್ತರಾಗಿದ್ದಾರೆ. ಅವರ ನಡುವೆ ಬಲವಂತದ ಮತಾಂತರ ಎಂಬುದು ಹೇಗೆ ಬರುತ್ತದೆ? ಎರಡನೆಯದಾಗಿ, ಮಾನವ ಕಳ್ಳಸಾಗಣೆ ವಿಷಯದಲ್ಲಿಯೂ, ಸಂಭಂದಪಟ್ಟ ಈ ಮೂವರು ಬುಡಕಟ್ಟು ಮಹಿಳೆಯರೂ ವಯಸ್ಕರು ಎಂಬುದು ಅವರ ಆಧಾರ್ ಕಾರ್ಡ್‌ಗಳಿಂದ ಸಾಬೀತಾಗಿದೆ. ಅವರು ಸ್ವ ಇಚ್ಛೆಯಿಂದ ಸನ್ಯಾಸಿನಿಯರೊಂದಿಗೆ ಹೋಗಿದ್ದೇವೆ ಎಂದು ಹೇಳಿದ್ದಾರೆ. ಅವರ ಪೋಷಕರು ಸಹ ಇದೇ ರೀತಿಯ ಹೇಳಿಕೆಗಳನ್ನು ನೀಡಿದ್ದಾರೆ. ಆದ್ದರಿಂದ, ಮಾನವ ಕಳ್ಳಸಾಗಣೆ ಆರೋಪವೂ ಸುಳ್ಳು. ಆದರೂ, ಅವರಿಗೆ ಜಾಮೀನು ನೀಡುವುದು ಕಷ್ಟಕರವಾಗುವಂತೆ ಮಾಡಲು ಬಿಜೆಪಿ ಸರ್ಕಾರ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ ಕಳುಹಿಸಿದೆ. ವಾಸ್ತವವಾಗಿ, ಆ ರಾಜ್ಯದಲ್ಲಿ ಯಾವುದಾದರೂ ಬಲವಂತದ ಮತಾಂತರದಂತಹ ಏನಾದರೂ ಇದ್ದರೆ, ಅದು ಛತ್ತೀಸ್‌ಗಢವನ್ನು ಹಿಂದುತ್ವ ರಾಷ್ಟ್ರವನ್ನಾಗಿ ಬಲವಂತದ ಪರಿವರ್ತನೆ ಮಾಡುತ್ತಿರುವುದಾಗಿದೆ.

ಜೈಲಿನಲ್ಲಿರುವ ಸನ್ಯಾಸಿನಿಯರನ್ನು ನಾನು ಭೇಟಿಯಾದಾಗ, ಅವರ ಕೈಗಳನ್ನು ಹಿಡಿದಾಗ, ಅವರಿಬ್ಬರಿಗೂ ಜ್ವರ ಇರುವುದು ನನಗೆ ಕಂಡುಬಂದಿತು. ಅವರಿಗೆ ದೀರ್ಘಕಾಲದ ಕೆಲವು ಆರೋಗ್ಯ ಸಮಸ್ಯೆಗಳಿವೆ ಎಂದು ತಿಳಿಯಿತು. ಇವುಗಳಿಗೆ ಸೂಕ್ತ ಚಿಕಿತ್ಸೆಯ ಅಗತ್ಯವಿತ್ತು. ಆದರೆ ಜೈಲಿನ ಕೊರೆಯುವ ತಣ್ಣನೆಯ ನೆಲದಲ್ಲೇ ಅವರನ್ನು ಇರಿಸಿರುವುದು ಅವರ ಆರೋಗ್ಯ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ. ಅವರಿಗೆ ಹಾಸಿಗೆಗಳನ್ನು ಒದಗಿಸಬೇಕು ಮತ್ತು ಸರಿಯಾದ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಬೇಕು ಎಂದು ನಾವು ಜೈಲು ಸೂಪರಿಂಟೆಂಡೆಂಟ್ ಜೊತೆ ವಾದಿಸಿದೆವು. ಇದೇ ಪ್ರಕರಣದಲ್ಲಿ ಜೈಲಿನಲ್ಲಿದ್ದ ಬುಡಕಟ್ಟು ಯುವಕ ಸುಖ್ಮಾನ್ ಮಾಂಡವಿ ಅವರನ್ನು ನಾವು ಕೂಡ ಭೇಟಿಯಾಗಿದೆವು.

ಕೆಲಸಕ್ಕಾಗಿ ಪ್ರಯಾಣಿಸಿದವರು...

ಅವರು ಇಡೀ ಘಟನೆಯನ್ನು ನಮಗೆ ವಿವರಿಸಿದರು. ಆಗ್ರಾ, ಭೋಪಾಲ್ ಮತ್ತು ಶಹದೋಲ್ ನಲ್ಲಿರುವ ಅವರ ಸಂಸ್ಥೆಗಳ ಅಡುಗೆ ಮನೆಯಲ್ಲಿ ಸಹಾಯಕರು ಬೇಕಾಗಿದ್ದರು. ಮಾಜಿ ಸಹಾಯಕರಲ್ಲಿ ಒಬ್ಬರಾದ ಸುಖ್ಮತಿ ಎಂಬ ಬುಡಕಟ್ಟು ಮಹಿಳೆ, ಆಸ್ಪತ್ರೆಯಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದವಳು, ತಾನು ಮದುವೆಯಾಗಲು ಹೋಗಬೇಕಾಗಿ ಬಂದ ಕಾರಣ ಛತ್ತೀಸ್‌ಗಢದಲ್ಲಿರುವ ತನ್ನ ಹಳ್ಳಿಗೆ ಹೋಗಲು ತನ್ನ ಕೆಲಸವನ್ನು ಬಿಟ್ಟಳು. ಬೇರೆ ಯಾರಾದರೂ ಬಂದು ಕೆಲಸ ಮಾಡಲು ಸಿದ್ಧರಿದ್ದರೆ ಅವರನ್ನು ಕಳುಹಿಸಲು ಅವರಿಗೆ ಹೇಳಲಾಯಿತು. ಸಂಬಳ ತಿಂಗಳಿಗೆ 10,000 ರೂ. ಎಂದು ಹೇಳಲಾಗುತ್ತದೆ. ಸುಖ್ಮತಿ ತನ್ನ ಹಳ್ಳಿಗೆ ಮರಳಿದಳು. ಈಗ ಮೂರು ವರ್ಷದ ಮಗುವಿನ ತಾಯಿಯಾಗಿರುವ ಅವರು, ನಾರಾಯಣಪುರ ಜಿಲ್ಲೆಯ ತಮ್ಮ ಹಳ್ಳಿಯಲ್ಲಿರುವ ಕೆಲವು ಕುಟುಂಬಗಳೊಂದಿಗೆ ಈ ವಿವರಗಳನ್ನು ಹಂಚಿಕೊಂಡರು. ಮೂವರು ಯುವ ಬುಡಕಟ್ಟು ಮಹಿಳೆಯರಾದ ಲಲಿತಾ, ಕಮಲೇಶ್ವರಿ, ಮತ್ತೊಬ್ಬಳು ಸುಖ್ಮತಿ ಎಂಬ ಮೂವರು, ಆಗ್ರಾಗೆ ಹೋಗುವುದು, ನಂತರ ಕೆಲವು ಸಂಸ್ಥೆಗಳಿಗೆ ಭೇಟಿ ನೀಡಲು ತಮ್ಮ ಪ್ರಯಾಣದ ಯೋಜನೆಯನ್ನು ಅಂತಿಮಗೊಳಿಸುತ್ತಾರೆ. ಈ ಯುವತಿಯರಲ್ಲಿ ಯಾರೂ ತಮ್ಮ ಜಿಲ್ಲೆಯ ಹೊರಗೆ ಪ್ರಯಾಣಿಸಿರಲಿಲ್ಲ. ಆದ್ದರಿಂದ ಸ್ವಾಭಾವಿಕವಾಗಿಯೇ ಅವರು ಆತಂಕಗೊಂಡಿದ್ದರು. ಹೀಗಾಗಿ, ಅವರ ಪೋಷಕರು ಸುಖ್ಮತಿಯ ಅಣ್ಣನಾದ ಸುಖ್ಮಾನ್ ಮಾಂಡವಿ ಅವರನ್ನು ದುರ್ಗ್ ರೈಲು ನಿಲ್ದಾಣಕ್ಕೆ ಕರೆದೊಯ್ಯಲು ವ್ಯವಸ್ಥೆ ಮಾಡಿದರು. ಅಲ್ಲಿ ಸನ್ಯಾಸಿನಿಯರನ್ನು ಭೇಟಿಯಾಗಿ ಅವರನ್ನು ಆಗ್ರಾಕ್ಕೆ ಕರೆದೊಯ್ಯುವುದು ಎಂದು ವ್ಯವಸ್ಥೆ ಮಾಡಲಾಗಿತ್ತು. ರೈಲ್ವೇ ನಿಲ್ದಾಣದಲ್ಲಿ ಸುಖ್ಮಾನ್ ಪ್ಲಾಟ್‌ಫಾರ್ಮ್ ಟಿಕೆಟ್ ಖರೀದಿಸಲಿಲ್ಲ. ಗುಂಪನ್ನು ನೋಡಿದ ಟಿಕೆಟ್ ಇನ್ಸ್‌ಪೆಕ್ಟರ್ ಒಬ್ಬರು ಟಿಕೆಟ್ ಬಗ್ಗೆ ಕೇಳಿದಾಗ, ಅವು ಸನ್ಯಾಸಿನಿಯರ ಬಳಿ ಇವೆ ಎಂದು ಅವರು ಹೇಳುತ್ತಾರೆ. ಆ ಸಮಯದಲ್ಲಿ ಸನ್ಯಾಸಿನಿಯರೂ ಬಂದರು.



ಬಜರಂಗದಳದ ದಾಳಿ

ಇದನ್ನೆಲ್ಲಾ ನೋಡುತ್ತಿದ್ದ ಬಜರಂಗದಳದ ಸದಸ್ಯರೊಬ್ಬರು ತಮ್ಮ ಗುಂಪನ್ನು ಒಟ್ಟುಗೂಡಿಸಿ ಸಮಸ್ಯೆಯನ್ನು ಬೇರೆಡೆಗೆ ತಿರುಗಿಸಿದರು. ಬುಡಕಟ್ಟು ಮಹಿಳೆಯರನ್ನು ಅಪಹರಿಸಲಾಗುತ್ತಿದೆ ಮತ್ತು ರೈಲ್ವೆ ಪೊಲೀಸರು ಅವರನ್ನು ಬಂಧಿಸಬೇಕು ಎಂದು ಅವರು ಆಕ್ರಮಣಕಾರಿ ರೀತಿಯಲ್ಲಿ ಘೋಷಣೆಗಳನ್ನು ಕೂಗಿದರು. ಆ ಗುಂಪು ಅವರನ್ನು ಬಲವಂತವಾಗಿ ರೈಲ್ವೆ ಪೊಲೀಸ್ ನಿಯಂತ್ರಣ ಕೊಠಡಿಗೆ ತಳ್ಳಿತು. ಅಲ್ಲಿ ಅವರೆಲ್ಲರೂ ತಾವಾಗಿಯೇ ಹೋಗುತ್ತಿದ್ದೇವೆ ಎಂದು ಹೇಳಿದರು. ಸುಖ್ಮಾನ್ ಹುಡುಗಿಯರ ಪೋಷಕರನ್ನು ದೂರವಾಣಿ ಮೂಲಕ ಸಂಪರ್ಕಿಸಿದರು, ಮತ್ತು ಅವರು ತಮ್ಮ ಹೆಣ್ಣುಮಕ್ಕಳನ್ನು ಕೆಲಸಕ್ಕೆ ಕಳುಹಿಸಲು ತಮ್ಮ ಒಪ್ಪಿಗೆ ಇದೆ ಎಂದು ಪೊಲೀಸರಿಗೆ ತಿಳಿಸಿದರು.

ಆದರೆ ಬಜರಂಗದಳ ಗ್ಯಾಂಗ್ ಇದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಆರ್‌ಎಸ್‌ಎಸ್‌ನ ವಿಷಕಾರಿ ಅಜೆಂಡಾವನ್ನು ಅನುಷ್ಠಾನಗೊಳಿಸುವ ಗುರಿಯನ್ನು ಈ ಗ್ಯಾಂಗ್ ಹೊಂದಿತ್ತು. ದುರ್ಗಾ ವಾಹಿನಿ ಚಳವಳಿಯ ಜ್ಯೋತಿ ಶರ್ಮಾ ಎಂಬ ಮಹಿಳೆ ನೇತೃತ್ವದ ಬಜರಂಗದಳ ಗ್ಯಾಂಗ್ ಅವರನ್ನು ತುಂಬಾ ಕೆಟ್ಟ ಪದಗಳಲ್ಲಿ ನಿಂದಿಸಿ ನಂತರ ಅವರ ಮೇಲೆ ಹಲ್ಲೆ ನಡೆಸಿತು. ಅವರನ್ನು ನಿಂದಿಸಿದರು, ಬೆದರಿಸಿದರು ಮತ್ತು ಅವಮಾನಿಸಿದರು. ಮೂವರು ಬುಡಕಟ್ಟು ಮಹಿಳೆಯರನ್ನು ತೀವ್ರವಾಗಿ ಥಳಿಸಿದರು. ತಾನು ಅಪಹರಣಕ್ಕೊಳಗಾಗಿರುವುದಾಗಿ ಒಪ್ಪಿಕೊಳ್ಳುವಂತೆ ಜ್ಯೋತಿ ಶರ್ಮಾ ತನಗೆ ಎರಡು ಬಾರಿ ಕಪಾಳಮೋಕ್ಷ ಮಾಡಿದಳು ಎಂದು ಅವರಲ್ಲಿ ಒಬ್ಬ ಮಹಿಳೆ ಸಾಕ್ಷ್ಯ ನುಡಿದಿದ್ದಾಳೆ. ಪ್ರತಿಯೊಬ್ಬ ಮಹಿಳೆಯನ್ನು ಪ್ರತ್ಯೇಕವಾಗಿ ಪ್ರತ್ಯೇಕ ಕೋಣೆಗೆ ಕರೆದೊಯ್ದು ಇಂತಹ ಹೇಳಿಕೆ ನೀಡುವಂತೆ ಒತ್ತಾಯಿಸಿದರು. ಅವರು ಹೇಳಿದ್ದಕ್ಕೂ ಪೊಲೀಸರು ಬರೆದಿದ್ದಕ್ಕೂ ಸಂಪೂರ್ಣ ವ್ಯತ್ಯಾಸವಿದೆ.

ದಿಢೀರನೆ NIAಗೆ ವರ್ಗಾಯಿದ ಬಿಜೆಪಿ ಸರ್ಕಾರ

ಬಿಜೆಪಿ ಸರ್ಕಾರದ ಸಂಪೂರ್ಣ ಬೆಂಬಲವಿದೆ ಎಂಬ ಕಾರಣಕ್ಕೆ ಭಜರಂಗದಳದವರು ಪೊಲೀಸರ ಮುಂದೆಯೇ ಈ ರೀತಿ ಮಾಡುತ್ತಿದ್ದಾರೆ. ದೌರ್ಜನ್ಯ ನಡೆಸಿದ ಸ್ಪಷ್ಟ ಪುರಾವೆಗಳಿದ್ದರೂ, ಭಜರಂಗದಳ ಗ್ಯಾಂಗ್ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ. ಬಂಧಿತರಿಗೆ ಜಾಮೀನು ಕೋರಿ ಕೆಳ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಕೆಳ ನ್ಯಾಯಾಲಯ ತಿರಸ್ಕರಿಸಿತು. ನಂತರ, ಪ್ರಕರಣವನ್ನು ಸೆಷನ್ಸ್ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಸೆಷನ್ಸ್ ನ್ಯಾಯಾಧೀಶರು ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯ ಅಡಿಯಲ್ಲಿರುವ ವಿಶೇಷ ನ್ಯಾಯಾಲಯ ಮಾತ್ರ ತನಿಖೆ ನಡೆಸಬೇಕು ಮತ್ತು ತನಿಖೆ ನಡೆಸಲು ತಮಗೆ ಯಾವುದೇ ಅಧಿಕಾರವಿಲ್ಲ ಎಂದು ಹೇಳಿದರು. ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕೆಳ ನ್ಯಾಯಾಲಯವು ಜಾಮೀನು ಅರ್ಜಿಯನ್ನು ವಿಚಾರಣೆ ನಡೆಸಿದೆ. ಆ ಸಮಯದಲ್ಲಿ, ಸರ್ಕಾರವು ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ಬಗ್ಗೆ ಏನನ್ನೂ ಉಲ್ಲೇಖಿಸಲಿಲ್ಲ. ಮೇಲ್ಮನವಿಯಲ್ಲಿ, ಸೆಷನ್ಸ್ ನ್ಯಾಯಾಧೀಶರು ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ ಕಳುಹಿಸುವ ಕುರಿತು ಯಾವುದೇ ಸೂಚನೆಯನ್ನು ನೀಡಲಿಲ್ಲ. ಹೀಗಿರುವಾಗ ರಾಷ್ಟ್ರೀಯ ತನಿಖಾ ಸಂಸ್ಥೆಗೆ ಸಂಬಂಧಿಸಿದಂತೆ ಸರಕಾರದ ವಾದವನ್ನು ಸೆಷನ್ಸ್ ನ್ಯಾಯಾಲಯ ಹೇಗೆ ಒಪ್ಪಿಕೊಂಡಿತು ಎಂಬುದು ಪ್ರಶ್ನಾರ್ಹವಾಗಿದೆ. ಇದು ಮತ್ತೊಂದು ದೊಡ್ಡ ಅನ್ಯಾಯವಾಗಿದೆ. ಇದು ಡಬಲ್ ಎಂಜಿನ್ ಮೋದಿ ಸರ್ಕಾರದ ಮುಖ.

ಕೆಲಸ ಹುಡುಕಿ ಹೋಗಲು ಆರ್‌ಎಸ್‌ಎಸ್ ಅನುಮತಿ ಬೇಕೇ?

ಈ ಪ್ರಕರಣವು ಕ್ರಿಶ್ಚಿಯನ್ ಸಮುದಾಯವನ್ನು ಗುರಿಯಾಗಿಸಿಕೊಂಡಿರುವುದರ ಜೊತೆಗೆ, ಇನ್ನೂ ಅನೇಕ ಸಮಸ್ಯೆಗಳನ್ನು ನಮ್ಮ ಮುಂದೆ ತಂದಿಟ್ಟಿದೆ. ನಮ್ಮ ಸಂವಿಧಾನ ನೀಡಿರುವ ಹಕ್ಕುಗಳ ಪ್ರಕಾರ ಯಾವುದೇ ನಾಗರಿಕರು ದೇಶದ ಯಾವುದೇ ಭಾಗಕ್ಕೆ ಕೆಲಸ ಹುಡುಕಿಕೊಂಡು ಹೋಗಬಹುದು. ಅಂತಹ ಆ ಹಕ್ಕಿನ ಮೇಲೆ ಇಲ್ಲಿ ದಾಳಿ ಮಾಡಲಾಗಿದೆ. ಕ್ರೈಸ್ತ ಸಮುದಾಯಕ್ಕೆ ಸೇರಿದ ಬುಡಕಟ್ಟು ಜನಾಂಗದ ಯುವ ಮಹಿಳೆಯರು ತನ್ನ ತವರು ರಾಜ್ಯದಿಂದ ಬೇರೆ ರಾಜ್ಯಕ್ಕೆ ಕೆಲಸ ಹುಡುಕಿಕೊಂಡು ಹೋದರೆ ಆಕೆ ಬಜರಂಗದಳದಂತಹ ಆರ್ ಎಸ್ ಎಸ್ ಸಂಘಟನೆಯ ಅನುಮತಿ ಪಡೆಯಬೇಕೆ? ವಯಸ್ಕ ಬುಡಕಟ್ಟು ಮಹಿಳೆಯರು ತಾವು ಏಕೆ ಮತ್ತು ಯಾರೊಂದಿಗೆ ಪ್ರಯಾಣಿಸುತ್ತಿದ್ದೇವೆ ಎಂದು ಪುರಾವೆಗಳನ್ನು ಏಕೆ ತೋರಿಸಬೇಕು? ಈ ಪ್ರಕರಣವು ಕೆಲಸಕ್ಕಾಗಿ ತಮ್ಮ ಗ್ರಾಮಗಳನ್ನು ತೊರೆಯುವ ಬುಡಕಟ್ಟು ಜನಾಂಗದ ಯುವ ಮಹಿಳೆಯರ ಜೀವನ ಮತ್ತು ಜೀವನೋಪಾಯದ ಮೇಲೆ ನೇರವಾಗಿ ಪರಿಣಾಮ ಬೀರುವ ಭಯಾನಕ ಪರಿಸ್ಥಿತಿಯನ್ನು ನಿರ್ಮಿಸುತ್ತದೆ.

ಸನ್ಯಾಸಿನಿಯರು ಮತ್ತು ಬುಡಕಟ್ಟು ಮಹಿಳೆಯರ ಮೇಲೆ ದಾಳಿ ಮಾಡಿದ ರೀತಿ ಮತ್ತೊಂದು ಅತ್ಯಂತ ಘೋರ ಅಂಶವಾಗಿದೆ. ಅವರು ಪೊಲೀಸರ ಎದುರೇ ಅತ್ಯಂತ ಅಸಭ್ಯ ಪದಗಳನ್ನು ಬಳಸಿ ಉದ್ಧಟತನದಿಂದ ನಡೆದುಕೊಂಡಿದ್ದಾರೆ. ಇದು ಎಲ್ಲಾ ಮಹಿಳೆಯರ ಹಕ್ಕುಗಳ ಮೇಲಿನ ಘೋರ ದೌರ್ಜನ್ಯವಾಗಿದೆ. ಸಿಸ್ಟರ್ ಪ್ರೀತಿ ಮೇರಿ ನಮ್ಮೊಂದಿಗೆ ಮಾತನಾಡುತ್ತ, ಭಜರಂಗದಳದ ಗೂಂಡಾಗಳು ತಮ್ಮನ್ನು ದೇಶದ

→

→ಹಿತಕ್ಕೆ ವಿರುದ್ಧವಾಗಿ ಕೆಲಸ ಮಾಡುವ "ವಿದೇಶಿ" ಎಂದು ಕರೆದರು ಎಂದು ತುಂಬಾ ನೋವಿನಿಂದ ಹೇಳಿಕೊಂಡರು. "ದೂರದ ಹಳ್ಳಿಯ ಬಡವರಿಗಾಗಿ, ಯಾವುದೇ ಸೌಲಭ್ಯಗಳಿಲ್ಲದೆ ಹಲವು ವರ್ಷಗಳಿಂದ ಕುಷ್ಠರೋಗಿಗಳಿಗಾಗಿ ಕೆಲಸ ಮಾಡುತ್ತಿರುವುದಕ್ಕಾಗಿ ನನ್ನನ್ನು ದೇಶ ವಿರೋಧಿ ಗೆದ್ದಲು ಎಂದು ಕರೆಯಲಾಗಿದೆಯೇ? ಬಡವರಿಗೆ ಸಹಾಯ ಮಾಡಬೇಕೆಂದು ನನ್ನ ಧರ್ಮವು ನನಗೆ ಸೂಚಿಸಿದೆ. ಅದಕ್ಕಾಗಿ ನನಗೆ ಶಿಕ್ಷೆಯಾಗಬೇಕೇ?" ಎಂದು ಅವರು ಕಣ್ಣೀರು ಸುರಿಸುತ್ತಾ ನಮ್ಮನ್ನು ಕೇಳಿದರು.

ಮೊದಲು ಬಂಗಾಳಿ ಮುಸ್ಲಿಮರು, ಈಗ ಕೇರಳ ಕ್ರಿಶ್ಚಿಯನ್ನರು

ಬಂಗಾಳಿ ಭಾಷಿಕ ಮುಸ್ಲಿಮರನ್ನು ಅಕ್ರಮ ವಲಸಿಗರು ಎಂದು ನಿಂದಿಸಲು ಕೇಂದ್ರ ಗೃಹ ಸಚಿವರು ಬಳಸಿದ "ಗೆದ್ದಲುಗಳು" (ಣಜಡಿಟುಣಿಝ) "ವಿದೇಶಿಯರು"ಎಂಬ ಪದಗಳು ಈಗ ಇಲ್ಲಿ ಕ್ರಿ

ಶ್ಚಿಯನ್ ಸನ್ಯಾಸಿನಿಯರಿಗೂ ಬಳಸಲಾಗುತ್ತಿದೆ. ಹಿಂದುತ್ವದ ಚೌಕಟ್ಟಿಗೆ ಹೊಂದಿಕೆಯಾಗದ ಯಾರನ್ನಾದರೂ "ವಿದೇಶಿ" ಅಥವಾ "ಗೆದ್ದಲುಗಳು" ಎಂದು ಕರೆಯಲಾಗುತ್ತದೆ. ಅವರ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತದೆ. ಈಗ ಇವರು ಬಿಹಾರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಬಿಹಾರದಲ್ಲಿ ವಿಶೇಷ ತೀವ್ರ ಪರಿಷ್ಕರಣೆಯ ಮೂಲಕ ಲಕ್ಷಾಂತರ ಮತದಾರರು, ವಿಶೇಷವಾಗಿ ಬಡವರು, ದಲಿತರು ಮತ್ತು ಹಿಂದುಳಿದ ಸಮುದಾಯಗಳ ಜನರನ್ನು ಮತದಾರರ ಪಟ್ಟಿಯಿಂದ "ಶುದ್ಧೀಕರಣ" ಮತ್ತು ತೆಗೆದುಹಾಕುವ ಕೆಲಸವನ್ನು ಮಾಡಲಾಗುತ್ತಿದೆ. ಭಾರತದಾದ್ಯಂತ ಏನು ನಡೆಯುತ್ತಿದೆ ಎಂಬುದನ್ನು ಒಟ್ಟುಗೂಡಿಸಿ ನೋಡಬೇಕಿದೆ. ಸನ್ಯಾಸಿನಿಯರು ಮತ್ತು ಸ್ಥಳೀಯ ಬುಡಕಟ್ಟು ಕ್ರೈಸ್ತರ ಮೇಲಿನ ಕ್ರೂರ ದಾಳಿ ಮತ್ತು ಬಂಧನವು ಒಂದು ಪ್ರತ್ಯೇಕ ಘಟನೆಯಲ್ಲ. "ಇಂದು ನಾವು ಮೌನವಾಗಿದ್ದರೆ, ನಾಳೆ ಅವರು ನಮ್ಮನ್ನು ಹುಡುಕಿಕೊಂಡು ಬಂದಾಗ ಪ್ರತಿಭಟಿಸಲು ಯಾರೂ ಇರುವುದಿಲ್ಲ." ಎಂದು ಪಾದ್ರಿ ನಿಮೊಲರ್ ಹೇಳಿದ್ದನ್ನು ನೆನಪಿಸಿಕೊಳ್ಳೋಣ.

ದುರ್ಬಲಗೊಳಿಸಿದ ಕಾಂಗ್ರೆಸ್ ನ ದ್ವಂದ್ವ ನಿಲುವು

ನಮ್ಮ ಭೇಟಿಯ ನಂತರ, ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಸಂಸದರ ಗುಂಪು ಜೈಲಿಗೆ ಭೇಟಿ ನೀಡಿದೆ ಎಂದು ನಾವು ಕೇಳಿದೆವು. ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ನೇತೃತ್ವದ ಕಾಂಗ್ರೆಸ್ ನಾಯಕರು ಸಂಸತ್ತಿನ ಹೊರಗೆ ಬ್ಯಾನರ್‌ಗಳನ್ನು ಹಿಡಿದಿದ್ದ ಪತ್ರಿಕಾ ವರದಿಗಳನ್ನು ನಾವು ನೋಡಿದೆವು. ಇದು ಆಗಬೇಕಾದ್ದೆ. ಆದರೆ, ಛತ್ತೀಸ್‌ಗಢದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ, ಅಕ್ಟೋಬರ್ 2022 ರಿಂದ ಫೆಬ್ರವರಿ 2023 ರವರೆಗೆ, ಕ್ರಿಶ್ಚಿಯನ್ ಬುಡಕಟ್ಟು ಜನಾಂಗದವರ ಮೇಲೆ ಸರಣಿ ಕ್ರೂರ ದಾಳಿಗಳು ನಡೆದವು. ನಾರಾಯಣಪುರದಲ್ಲಿರುವ ಪ್ರಮುಖ ಕ್ಯಾಥೋಲಿಕ್ ಚರ್ಚ್ ಮೇಲೆ ದಾಳಿ ನಡೆಯಿತು, ಯೇಸುಕ್ರಿಸ್ತ ಮತ್ತು ಮೇರಿ ಮಾತೆಯ ಪ್ರತಿಮೆಗಳನ್ನು ಧ್ವಂಸಗೊಳಿಸಲಾಯಿತು. ದುರ್ಗ್ ನಲ್ಲಿ ಇಬ್ಬರು ಸನ್ಯಾಸಿನಿಯರ ಮೇಲೆ ದಾಳಿ ಮಾಡಿದ ಆರ್‌ಎಸ್‌ಎಸ್ ನ ಅದೇ ಗ್ಯಾಂಗ್ ಗಳು ಆಗಲೂ ಅದರ ಜವಾಬ್ದಾರಿಯನ್ನು ಹೊತ್ತುಕೊಂಡವು. ನಂತರ ನಾರಾಯಣಪುರ ಮತ್ತು ಸಂತ್ರಸ್ತ ಪ್ರದೇಶಗಳಿಗೆ ತೆರಳಿ ಸಂತ್ರಸ್ತರೆಲ್ಲರನ್ನು ಭೇಟಿ ಮಾಡಿದ್ದು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಮಾತ್ರ. ನಾನು ಆ ತಂಡದಲ್ಲಿದ್ದೆ. ನಾವು ಕಾಂಗ್ರೆಸ್ ಮುಖ್ಯಮಂತ್ರಿಗೆ ವರದಿ ನೀಡಿದ್ದೇವೆ. ಆದರೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಕಾಂಗ್ರೆಸ್ ನ ಯಾವ ಸಮಿತಿಯೂ ಈ ಕುಟುಂಬಗಳನ್ನು ಭೇಟಿ ಮಾಡಿಲ್ಲ. ಛತ್ತೀಸ್‌ಗಢದಲ್ಲಿ ಕಾಂಗ್ರೆಸ್ ಪಕ್ಷದ ದ್ವಂದ್ವ ನಿಲುವು ಬಿಜೆಪಿ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸಿತು.

ಸನ್ಯಾಸಿನಿಯರು ಮತ್ತು ಬುಡಕಟ್ಟು ಜನಾಂಗದವರೊಂದಿಗೆ ನಾವು ಒಗ್ಗಟ್ಟಿನಲ್ಲಿ ನಿಂತಿದ್ದೇವೆ. ನಾವು ಆಗಲೂ ಅದನ್ನೇ ಮಾಡಿದ್ದೇವೆ. ಈಗಲೂ ಅದನ್ನೇ ಮಾಡುತ್ತೇವೆ. ನನ್ನ ಜೊತೆಗಿದ್ದ ತಂಡದಲ್ಲಿ ಸಂಗಾತಿಗಳಾದ ಆನಿ ರಾಜಾ, ಸಂಸದರಾದ ಜೋಸ್, ಕೆ. ಮಣಿ, ಕೆ. ರಾಧಾಕೃಷ್ಣನ್, ಎ.ಎ. ರಹೀಮ್, ಪಿ.ಪಿ. ಸುನೀರ್ ಸೇರಿದ್ದಾರೆ.

ಕನ್ನಡಕ್ಕೆ: ಸಿಚಿ

ಯು.ಕೆ.ಯಲ್ಲಿ ಹೊಸ ಎಡಪಂಥೀಯ ಪಕ್ಷದ ಉದಯ



ಲಂಡನ್– ಲೇಬರ್ ಸಂಸತ್ ಸದಸ್ಯರು ಮತ್ತು ನಾಯಕರಾಗಿದ್ದ ಜೆರೆಮಿ ಕಾರ್‌ಬಿನ್ ಮತ್ತು ಝಾರಾ ಸುಲ್ತಾನಾ ಅವರು, ಯು. ಕೆ ಯಲ್ಲಿ ಒಂದು ಹೊಸ ಎಡಪಂಥೀಯ ಪಕ್ಷವನ್ನು ಕಟ್ಟುವ ತಮ್ಮ ಉದ್ದೇಶವನ್ನು ಪುನಃ ದೃಢಪಡಿಸಿದ್ದಾರೆ. ಈ ಇಬ್ಬರು, ಜುಲೈ 24ರಂದು ಜಂಟಿ ಪ್ರಕಟಣೆ ನೀಡಿದ್ದು, ಸುಲ್ತಾನಾ ಲೇಬರ್ ಪಕ್ಷ ತೊರೆದ ನಂತರ ಮೂರು ವಾರಗಳ ಗಂಭೀರ ಚರ್ಚೆಗಳ ಬಳಿಕ ಹೊಸ ಪಕ್ಷ ಸ್ಥಾಪನೆ ಮಾಡುವುದಾಗಿ ಹೇಳಿದ್ದರು.

ಅವರು "ಇದು ನಿಮಗೆ ಸೇರಿದ ಹೊಸ ರೀತಿಯ ರಾಜಕೀಯ ಪಕ್ಷವಾಗಿರುತ್ತದೆ" ಎಂಬ ಆಶಯವನ್ನೂ, "ಪಕ್ಷದ ದಿಕ್ಕು, ನಾಯಕತ್ವದ ಮಾದರಿ ಮತ್ತು ಸಮಾಜವನ್ನು ರೂಪಾಂತರಗೊಳಿಸಲು ಅಗತ್ಯವಿರುವ ನೀತಿಗಳನ್ನು ಸದಸ್ಯರು ನಿರ್ಧರಿಸುವ ಸ್ಥಾಪನೆಯ ಸಮ್ಮೇಳನ" ನಿರ್ಧರಿಸುತ್ತದೆಯೆಂದೂ ತಿಳಿಸಿದ್ದಾರೆ.

ಈ ಸ್ಥಾಪನಾ ಪ್ರಕ್ರಿಯೆಯು ಹೊಸ ಪಕ್ಷದ ಹೆಸರನ್ನೂ ನಿರ್ಧರಿಸುತ್ತದೆ. ಈ ಪ್ರಕ್ರಿಯೆ, ಕಾರ್‌ಬಿನ್ ಮತ್ತು ಸುಲ್ತಾನಾ ಇಬ್ಬರೂ ಸದಸ್ಯರಾಗಿರುವ ಸ್ವತಂತ್ರ ಸಂಸತ್ ಸದಸ್ಯರ ಕೂಟದ ರಚಿಸುವ ಕಾರ್ಯಪಡೆ ಮೂಲಕ ನಡೆಯಲಿದೆ ಎಂದೂ ಅವರು ತಿಳಿಸಿದ್ದಾರೆ.

ಇತ್ತೀಚಿನ ಒಂದು ಸಮೀಕ್ಷೆ, ಲೇಬರ್ ಪಕ್ಷದೊಂದಿಗೆ ಸಮಾನ ಮಟ್ಟದಲ್ಲಿ ಈ ಹೊಸ ಪಕ್ಷ ಶೇ. 15 ಮತಬೆಂಬವನ್ನು ಈಗಾಗಲೇ ಹೊಂದಿದೆ ಎಂಬುದನ್ನು ತೋರಿಸಿದೆ. ಈ ಪಕ್ಷವು ತನ್ನದೇ ಆದ ನಾಯಕತ್ವ ಹೋರಾಟದಲ್ಲಿರುವ ಗ್ರೀನ್ ಪಕ್ಷದ ಜೊತೆಗೆ ಕೈಜೋಡಿಸಿದರೆ, ಲೇಬರ್ ಪಕ್ಷಕ್ಕಿಂತ ಮುಖ್ಯವಾದ ಎಡಪಂಥೀಯ ಚುನಾವಣಾ ಸಾಧನವಾಗಿ ಮಾರ್ಪಡಬಹುದು.

ಈ ಹೊಸ ಪಕ್ಷದ ಉದಯದ ಸುದ್ದಿಯೇ ಪ್ರಧಾನ ಮಂತ್ರಿ ಕೀರ್ ಸ್ಟಾರ್ಮರ್ ಅವರ ರಾಜಕೀಯ ತಂತ್ರವನ್ನು ಬುಡಮೇಲು ಮಾಡಹತ್ತಿದೆ. ಇದುವರೆಗಿನ ರಾಜಕೀಯ ಖಾಲಿತನವನ್ನು ಈ ಹೊಸ ಪಕ್ಷದ ಅಭಿಯಾನ ತುಂಬಲು ಮುಂದಾಗಿದೆ.

ಕಾರ್ಬಿನ್–ಸುಲ್ತಾನಾ ಘೋಷಣೆಯಲ್ಲಿ ಹೀಗೆ ಹೇಳಿದ್ದಾರೆ

"ಜಗತ್ತಿನ ಹದಿನಾರನೆಯ ಶ್ರೀಮಂತ ದೇಶದಲ್ಲಿ 45 ಲಕ್ಷ ಮಕ್ಕಳಿಗೆ ದಾರಿದ್ರ್ಯವಿದೆ ಅಂದರೆ ಈ ವ್ಯವಸ್ಥೆ ಕುಸಿದಿದೆ ಎಂದರ್ಥ. ಈ ಬೆಲೆಗಳು ಏರುತ್ತಿರುವಾಗಲೇ ಬೃಹತ್ ಕಾರ್ಪೊರೆಟ್‌ಗಳು ಅಪಾರ ಹಣ ಮಾಡುತ್ತಿವೆ ಎಂದರೆ, ಇದು ಅವರ ಅನುಕೂಲಕ್ಕೆ ಮಾಡಿವ ವ್ಯವಸ್ಥೆ ಎಂದೇ ಅರ್ಥ"

"ಬಡವರಿಗೆ ಹಣ ಇಲ್ಲವೆಂದು ಹೇಳುವ ಸರಕಾರ, ಯುದ್ಧಕ್ಕೆ ಬಿಲಿಯಾಂತರ ಪೌಂಡುಗಳನ್ನು ಕೊಡಮಾಡುತ್ತದೆ ಎಂದರೆ, ಇದು ಅವರ ಅನುಕೂಲಕ್ಕೆ ಮಾಡಿವ ವ್ಯವಸ್ಥೆ ಎಂದೇ ಅರ್ಥ. ನಾವು ಈ ಅನ್ಯಾಯಗಳನ್ನು ಒಪ್ಪಿಕೊಳ್ಳಲಾರೆವು ಮತ್ತು ನೀವು ಕೂಡ ಒಪ್ಪಿಕೊಳ್ಳಬಾರದು."

ಇದಲ್ಲದೆ:

"ನಮ್ಮ ಸಮಾಜದ ಬಿಕ್ಕಟ್ಟುಗಳನ್ನು ನಿವಾರಿಸೋದು ಬಹುಮಟ್ಟದ ಸಂಪತ್ತು ಮತ್ತು ಅಧಿಕಾರದ ಪುನರ್ ಹಂಚಿಕೆಯ ಮೂಲಕ ಮಾತ್ರ ಸಾಧ್ಯ. ಅಂದರೆ ಸಮಾಜದ ಅತ್ಯಂತ ಶ್ರೀಮಂತರಿಗೆ ತೆರಿಗೆ ವಿಧಿಸುವುದು."

"ಅಂದರೆ NHS (ರಾಷ್ಟ್ರೀಯ ಆರೋಗ್ಯ ವ್ಯವಸ್ಥೆ) ಖಾಸಗೀಕರಣದಿಂದ ಮುಕ್ತವಾಗಿರಬೇಕು. ಇಂಧನ, ನೀರು, ರೈಲು, ಅಂಚೆ ಸೇವೆಗಳನ್ನು ಸಾರ್ವಜನಿಕ ಮಾಲೀಕತ್ವಕ್ಕೆ ತರಬೇಕು" ಎಂದೂ, "ಪ್ರಚಂಡ ಸರ್ಕಾರಿ ಗೃಹ ನಿರ್ಮಾಣ ಯೋಜನೆಗೆ ಹೂಡಿಕೆ ಮಾಡಬೇಕು" ಎಂದೂ, ಇದು ಕಾರ್ಬಿನ್ ಅವರ ಲೇಬರ್ ನಾಯಕರಾಗಿದ್ದ ಕಾಲದ ಜನಪ್ರಿಯ ನೀತಿಗಳನ್ನು ಸ್ಮರಿಸುತ್ತದೆ.

ಈ ಘೋಷಣೆಯಲ್ಲಿ "ಸರ್ಕಾರ ಮಾನವತೆಗೆ ವಿರುದ್ಧವಾದ ಅಪರಾಧಗಳಲ್ಲಿ ಭಾಗಿಯಾಗಿರುವುದನ್ನೂ" ಖಂಡಿಸುತ್ತದೆ. "ಇದೇ ಸಮಯದಲ್ಲಿ ಜನಸಂಹಾರದ ವಿರುದ್ಧ ಪ್ರತಿಭಟಿಸಲು ಹಕ್ಕನ್ನು ನಾವು ರಕ್ಷಿಸಬೇಕು." ಎನ್ನುತ್ತದೆ.

"ಆದ್ದರಿಂದ ನಾವು ಇಸ್ರೇಲ್‌ಗೆ ಎಲ್ಲ ಆಯುಧ ಮಾರಾಟ ನಿಲ್ಲಿಸಲು ಮತ್ತು ಶಾಂತಿಯ ಏಕೈಕ ದಾರಿಯಾದ ಸ್ವತಂತ್ರ ಪ್ಯಾಲೆಸ್ತೈನ್ ಸ್ಥಾಪನೆಗಾಗಿ ಆಗ್ರಹಿಸುತ್ತೇವೆ."

"ಸಮಾಜದ ಸಮಸ್ಯೆಗಳಿಗಾಗಿ ವಲಸಿಗರನ್ನು ಅಥವಾ ವಲಸಿಗರನ್ನು ಆರೋಪಿಸುವವರು ನಿಮ್ಮನ್ನು ಭ್ರಷ್ಟಮಾರ್ಗಕ್ಕೆ ಒಯ್ಯುತ್ತಿದ್ದಾರೆ. ವಾಸ್ತವದಲ್ಲಿ ಇದು ಬೃಹತ್ ಸಂಸ್ಥೆಗಳು ಮತ್ತು ಅತಿ ಸಿರಿವಂತರನ್ನು ರಕ್ಷಿಸುವ ಆರ್ಥಿಕ ವ್ಯವಸ್ಥೆಯ ಫಲಿತಾಂಶ."

"ಸಂಪತ್ತನ್ನು ಸೃಷ್ಟಿಸುವವರು ಸಾಮಾನ್ಯ ಜನರು, ಹಾಗೆಯೇ ಅದನ್ನು ಮತ್ತೆ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಶಕ್ತಿಯೂ ಅವರಲ್ಲಿದೆ."

"ಇದು ನಿಮ್ಮ ಸಮುದಾಯಗಳಲ್ಲಿ, ಕಾರ್ಮಿಕ ಯೂನಿಯನ್ ಗಳು ಮತ್ತು ಸಾಮಾಜಿಕ ಚಳವಳಿಗಳಲ್ಲಿ ನೆಲೆಯಿರುವ, ಹೊಸ ರೀತಿಯ ರಾಜಕೀಯ ಪಕ್ಷವಾಗಿರಲಿದೆ. ಇದು ಎಲ್ಲಾ ಪ್ರದೇಶಗಳಲ್ಲಿ ಶಕ್ತಿಯನ್ನು ನಿರ್ಮಿಸಲಿದೆ. ಇದು ನಿಮ್ಮದು."

ಇನ್ನೂ ಕಾರ್ಬಿನ್ ಪಕ್ಷದ ನಾಯಕರು ಯಾರಾಗಿಲಿದ್ದಾರೆ ಎಂಬುದು ಖಚಿತವಾಗಿಲ್ಲ. ಆದರೆ, ಸಮೀಕ್ಷೆಗಳು ಅವರು ಪ್ರಧಾನ ಮಂತ್ರಿಗಿಂತ ಹೆಚ್ಚು ಜನಪ್ರಿಯರಾಗಿದ್ದಾರೆ ಎನ್ನುತ್ತದೆ. ಸ್ಟಾರ್ಮರ್ ಅವರ ಜನಪ್ರಿಯತೆ ಎಲ್ಲ ವಯೋಮಾನದ ಜನರ ನಡುವೆ ಕಡಿಮೆಯಾಗಿದ್ದು, ಯುವಜನರಲ್ಲಿ –30 ಅಂಕಕ್ಕೆ ಇಳಿದಿದೆ.

ಕಾರ್ಬಿನ್ ಹೊಸ ಪಕ್ಷದ ಕುರಿತು ಹೀಗೆ ಹೇಳಿದರು

"ಲೇಬರ್ ಪಕ್ಷ ಅತಿಯಾಗಿ ಕೇಂದ್ರೀಕೃತ ಪಕ್ಷವಾಗಿದೆ. ಅಲ್ಲಿ ಅತಿಯಾದ ನಿಯಂತ್ರಣವಿದೆ. ಆದರೆ ಇದು ಸಮುದಾಯದ ನಾಯಕತ್ವದಲ್ಲಿ ಬೆಳೆಯುವ ಪಕ್ಷವಾಗಿರಲಿದೆ, ಇದು ಭಿನ್ನವಾಗಿರುತ್ತದೆ ಮತ್ತು ಇದು ಖುಷಿಕರವಾಗಿರುತ್ತದೆ."


ಈ ಘೋಷಣೆಯ ನಂತರ ಈಗಾಗಲೇ 5 ಲಕ್ಷಕ್ಕೂ ಹೆಚ್ಚು ಜನರು ಸೇರ್ಪಡೆಗೊಂಡಿದ್ದು, ಇದು ದೇಶದ ಅತಿದೊಡ್ಡ ಪಕ್ಷವಾಗುವ ಸಾಧ್ಯತೆ ಇದೆ. ಲೇಬರ್ ಪಕ್ಷದ ಸದಸ್ಯತ್ವ 3.09 ಲಕ್ಷ, ಟೋರಿ ಪಕ್ಷದ ಸದಸ್ಯತ್ವ 1.23 ಲಕ್ಷವಿದ್ದು, ಯು.ಕೆ ರಿಫಾರ್ಮ್ (ನವ–ಫ್ಯಾಸಿಸ್ಟ್ ಪಕ್ಷ) 2.27 ಲಕ್ಷ ಸದಸ್ಯರನ್ನು ಹೊಂದಿವೆ ಎಂದು ಇಲ್ಲಿ ಗಮನಿಸಬಹುದು. ಇದರ 6 ಎಂಪಿಗಳು ಈಗಾಗಲೇ ಫಾರೇಜ್ ನೇತೃತ್ವದ ಗುಂಪಿಗಿಂತ ಹೆಚ್ಚು ಸಂಸದೀಯ ಶಕ್ತಿಯನ್ನೂ ಹೊಂದಿವೆ.

ಪಕ್ಷದ ಮೊದಲ ಸಮ್ಮೇಳನವು ಶೀಘ್ರದಲ್ಲಿ ನಡೆಯಲಿದೆ ಎಂಬ ನಂಬಿಕೆ ಇದೆ. ಇದೊಂದು ದೇಶದಾದ್ಯಂತದ ಎಡಪಂಥೀಯ ಮತ್ತು ಸ್ವತಂತ್ರ ಚುನಾವಣೆ ಚಟುವಟಿಕೆಗಳ ಒಕ್ಕೂಟವಾಗಿರಬಹುದೇ ಅಥವಾ ಖಚಿತ ಸಂರಚನೆಯಿರುವ ಸುವ್ಯವಸ್ಥಿತ ಸಂಸ್ಥೆಯಾಗಿರಬಹುದೇ ಎಂಬದು ಇನ್ನೂ ನಿರ್ಧಾರವಾಗಿಲ್ಲ. ಯಾವ ರೂಪವನ್ನೇ ತಾಳಲಿ, ಇದು ಚುನಾವಣಾ ಆಯೋಗದಲ್ಲಿ ಪಕ್ಷವಾಗಿ ನೋಂದಾಯಿಸಲಾಗುವುದು.

ಈಗಿರುವ ಪ್ರಮುಖ ಪಕ್ಷಗಳು ಕಳೆಗುಂದಿದ್ದು, ಅವುಗಳಿಂದ ಜನತೆ ನಿರಾಶರಾಗಿದ್ದು, ಸಕಾರಾತ್ಮಕ ಹೊಸ ಕಾರ್ಯಕ್ರಮವಿರುವ ಹೊಸ ಎಡ ಪಕ್ಷವು ಜನಪರ ರಾಜಕೀಯಕ್ಕೆ ಹೊಸ ಜೀವ ತುಂಬಬಹುದು.

ಟ್ರೇಡ್ ಯೂನಿಯನುಗಳು, ಸಾಮಾಜಿಕ ಸಂಘಟನೆಗಳು/ ಚಳುವಳಿಗಳು ಈ ಹೊಸ ಪಕ್ಷದ ಜತೆಗೆ ಕೈಗೂಡಿಸುವುದು ಅದರ ಸಫಲತೆಗೆ ಅಷ್ಟೇ ಮುಖ್ಯವಾದ ಸಂಗತಿಯಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE August 11- 17, 2025 Price: Rs. 10/- Date of Publication: 08 August 2025 RNI No. KARKAN/2006/17926 Posted on 11-08-2025
Posted at BG PSO, BG - 560026 Posted at Periodical Rate - Rs. 2




‘ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?’

‘ಕುವೆಂಪು ವಿಚಾರ ಕ್ರಾಂತಿ’–ಕೃತಿ ಜನಾರ್ಪಣೆ

ಜನರೆಡೆಗೆ ಕೊಂಡೊಯ್ಯುವ ತೀರ್ಮಾನದ ಘೋಷಣೆ

ಆರ್. ರಾಮಕೃಷ್ಣ



ರಾಷ್ಟ್ರಕವಿ ಕುವೆಂಪು ಅವರ ಮಹತ್ವದ ಆಯ್ದ ವೈಚಾರಿಕ ಲೇಖನಗಳ ಸಂಗ್ರಹ ರೂಪದಲ್ಲಿ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಸಂಪಾದಿಸಿರುವ, ‘ಜನ ಪ್ರಕಾಶನ’ವು ಹೊರತಂದಿರುವ ‘ಕುವೆಂಪು ವಿಚಾರ ಕ್ರಾಂತಿ’ ಪುಸ್ತಕದ ಜನಾರ್ಪಣೆಯ ಸಮಾರಂಭವು ಜುಲೈ 5, 2025ರಂದು ಬೆಂಗಳೂರಿನ ಎನ್.ಜಿ.ಒ. ಹಾಲ್‌ನಲ್ಲಿ ನಡೆಯಿತು. ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪುಸ್ತಕವನ್ನು ಬಿಡುಗಡೆ ಮಾಡಿದರು. ಒಂದು ಸಂಕ್ಷಿಪ್ತ ವರದಿ, ಪುಸ್ತಕದ ಸೂಕ್ತ ಅಂಶಗಳ ಪರಿಚಯದೊಂದಿಗೆ.

“ಕುವೆಂಪು ಅವರ ಪ್ರಖರ ವೈಚಾರಿಕತೆ ಸಮಾಜದಲ್ಲಿ ಜಾತಿ ಅಸಮಾನತೆ ಇರುವವರೆಗೂ ಪ್ರಸ್ತುತವಾಗಿರುತ್ತದೆ. ವೈಚಾರಿಕತೆ, ವೈಜ್ಞಾನಿಕತೆಯ ಬಗ್ಗೆ ಕುವೆಂಪು ಅವರಿಗೆ ಸ್ಪಷ್ಟ ದೃಷ್ಟಿಕೋನ ಇತ್ತು. ಜಾತಿ ತಾರತಮ್ಯ ಇಲ್ಲದ ಸಮಾಜ ಕುವೆಂಪು ಅವರ ಆಶಯವಾಗಿತ್ತು. ಆದರೆ, ಇಂದು ಶಿಕ್ಷಣ ಹೆಚ್ಚಾದಷ್ಟೂ ಮೌಢ್ಯ, ಕಂದಾಚಾರ ಹೆಚ್ಚಾಗಿ ವೈಜ್ಞಾನಿಕ ಪ್ರಜ್ಞೆ ಕಡಿಮೆಯಾಗುತ್ತಿದೆ. ಮೌಢ್ಯ ವಿರೋಧಿ ಕಾಯ್ದೆ ಅಂಗೀಕರಿಸಿದರೂ ಅದನ್ನು ಜಾರಿಮಾಡಲು ಸಾಧ್ಯವಾಗಿಲ್ಲ. ಏಕೆಂದರೆ ಜನರಲ್ಲಿ ಜಾಗೃತಿ ಇಲ್ಲ. ಬಾವಿಯಲ್ಲಿ ನೀರನ್ನು ಸೇದುವಾಗ ಮಧ್ಯ ತೇಲುವ ಕಸವನ್ನು ಪಕ್ಕಕ್ಕೆ ತಳ್ಳಿ ಅದು ದೂರವಾದರೂ, ಮತ್ತೆ ಮತ್ತೆ ಅದು ಮಧ್ಯಕ್ಕೆ ಬಂದು ಬಿಡುತ್ತದೆ. ಮತ್ತೆ ಮತ್ತೆ ಕಸವನ್ನು ದೂರಕ್ಕೆ ತಳ್ಳುತ್ತಲೇ ಇರಬೇಕು.” ಎಂದು ಸಿದ್ದರಾಮಯ್ಯನವರು ಹೇಳಿ, ಕುವೆಂಪು ಅವರ ವಿಚಾರವನ್ನು ಜನರ ನಡುವೆ ಕೊಂಡೊಯ್ಯುವ ಪ್ರಯತ್ನ ಬಹಳ ಮಹತ್ವದ್ದು ಎಂದರು.

ಆರಂಭದಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಆಶಯ ನುಡಿಗಳನ್ನು ಆಡಿದರು. ನಾಡೋಜ ಡಾ. ಹಂ.ಪ.ನಾಗರಾಜಯ್ಯ, ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್, ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ, ಜನಪ್ರಕಾಶನದ ಬಿ.ರಾಜಶೇಖರಮೂರ್ತಿ, ಹೆಚ್. ಎನ್.ಹರಿ, ಎ.ವಿ.ಶ್ರೀಹರಿ ಅವರು ಅತಿಥಿಗಳಾಗಿ ಉಪಸ್ಥಿತರಿದ್ದರು. ಬಿ.ರಾಜಶೇಖರ ಮೂರ್ತಿಯವರು ಆರಂಭದಲ್ಲಿ ಪ್ರಾಸ್ತಾವಿಕ ಮಾತುಗಳನ್ನು ಆಡಿ,

‘ಯುಗಯುಗದ ದಾರಿದ್ರ್ಯಭಾರದಿಂ
ಬೆನ್ ಬಾಗಿ ಗೋಳಿಡುವ ಬಡಜನರೆ, ಏಳಿರೈ ಏಳಿ!
ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದವರೆಲ್ಲ ಸಂತಸವ ತಾಳಿ!
ಕಂಗೆಟ್ಟ ಸೋದರರೆ, ಬರುತಿಹಳು ಕಾಣಿರೈ
ದಾನವರ ಸೀಳಿ, ಅದೋ ವಿಪ್ಲವದ ಕಾಳಿ

ಎಂದು ಕ್ರಾಂತಿ ಕಳಹೆಯನ್ನು ಮೊಳಗಿಸಿದ ಕುವೆಂಪು ವಿಚಾರಗಳನ್ನು ‘ಅಭದ್ರತೆಯ, ಅವಮಾನದ, ಘನತೆ ಇಲ್ಲದ ಉದ್ಯೋಗಗಳಲ್ಲಿ ಬೇಯುತ್ತಿರುವ ವಿದ್ಯಾವಂತ ಯುವಜನರಿಗೆ ಅರ್ಥಮಾಡಿಸಿಲ್ಲವಾದರೆ, ತಿಳಿದವರು ವಂಚಿಸಿದಂತಾಗುತ್ತದೆ. ಆದ್ದರಿಂದ ಈ ವಿಚಾರಗಳನ್ನು ಒಂದು ಆಂದೋಲನವಾಗಿ ರಾಜ್ಯದ ವಿದ್ಯಾರ್ಥಿ–ಯುವಜನರು ಹಾಗೂ ಜನರ ನಡುವೆ ಕೊಂಡೊಯ್ಯಲಾಗುವುದು. ತಕ್ಷಣದ ಭವಿಷ್ಯದಲ್ಲಿ ಪುಸ್ತಕದ ಒಂದು ಲಕ್ಷ ಪ್ರತಿಗಳನ್ನು, ಹಾಗೂ ಮುಂದಿನ ದಿನಗಳಲ್ಲಿ ಹತ್ತು ಲಕ್ಷ ಪ್ರತಿಗಳನ್ನು ಮುದ್ರಿಸಲು ಉದ್ದೇಶಿಸಲಾಗಿದೆ. ಈಗ ಮುದ್ರಣಗೊಂಡಿರುವ 10 ಸಾವಿರ ಪ್ರತಿಗಳಲ್ಲಿ 6 ಸಾವಿರ ಪ್ರತಿಗಳು ಈಗಾಗಲೇ ಮಾರಾಟವಾಗಿವೆ ಎಂದು ತಿಳಿಸಿದರು.

ಯಾಕೀಗ ಕುವೆಂಪು?

ಹೊಸ ಹೊಸ ಮೌಢ್ಯಗಳನ್ನು ಬಿತ್ತಿ, ಇರುವ ಮೌಢ್ಯಗಳನ್ನು ಬಳಸಿ, ಕೊರಳಿಗೆ ಸುತ್ತಿ ಮುಗ್ಧರನ್ನು ಶೋಷಿಸುವ ವ್ಯವಸ್ಥೆ ನಮ್ಮ ಸಮಾಜವನ್ನು ಯುಗಯುಗಗಳಿಂದಲೂ ಆವರಿಸಿಕೊಂಡು ಕಾಡುತ್ತಿದೆ. ಅದಕ್ಕೆ ಸಂಸ್ಕೃತಿ–ಪರಂಪರೆ, ಸನಾತನ–ಪುರಾತನ ಎಂಬ ಏನೇನೋ ಹೆಸರುಗಳು. ಇಂತಹ ಇತಿಹಾಸ–ವರ್ತಮಾನವುಳ್ಳ ಸಮಾಜದಲ್ಲಿ ಜನತೆಯನ್ನು ಎಚ್ಚರಿಸುವವರಿಗೆ ನಿಜಕ್ಕೂ ಕೆಚ್ಚು ಬೇಕು. ಅಂತಹ ಕೆಚ್ಚು ಕುವೆಂಪು ಅವರಿಗಿತ್ತು. ಇಪ್ಪತ್ತನೇ ಶತಮಾನದ ಮೊದಲ ಭಾಗದಲ್ಲೇ ಹೀಗೆ ಮೋಸ ಹೋಗಿರುವ ಮುಗ್ಧಜನರ ಮೈ ಚಿವುಟಿ ಎಚ್ಚರಗೊಳಿಸುವ ದನಿಯನ್ನು ಮೊಳಗಿಸಿದ್ದು ಕುವೆಂಪು.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ಎಂದು ಪ್ರಶ್ನಿಸಿದ ಕುವೆಂಪು ಅವರು,
ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು!

ಎಂದು ಘೋಷಿಸಿಯೇ ಬಿಟ್ಟರು.

ಹಾಗೆಯೆ, ಪ್ರಾಚೀನ ಮೌಢ್ಯಗಳಿಂದ ಪಾರುಮಾಡಿ, ಹೊಸ ಮೌಲ್ಯಗಳೇನು ಎಂದು ತಿಳಿಸುವ ಜವಾಬ್ದಾರಿ ಹೊತ್ತವರು ಅವರು. ಹಳೆಯ ಸಮಾಜವನ್ನು ಬರಿ ಹಳಿಯುವುದರಲ್ಲೇ ಉಳಿಯುವಂತಾಗದ ಕುವೆಂಪು ಅವರು ನಮ್ಮ ಸಮಾಜದಲ್ಲೇ ಹಾಸುಹೊಕ್ಕಾಗಿರುವ ಸೌಹಾರ್ದ ಜನಸಂಸ್ಕೃತಿಯನ್ನು ಎತ್ತಿ ತೋರಿಸಿದರು.

ಸರ್ವ ಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ

ಎಂದು ಇರುವ ಒಳಿತನ್ನು ಗುರುತಿಸಿ ಹಾಡಿದರು.

ನೇಗಿಲ ಹಿಡಿದಾ, ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ...

ಎಂದು ಗುರುತಿಸಿದ ಕುವೆಂಪು,

ಯಾರೂ ಅರಿಯದ ನೇಗಿಲ ಯೋಗಿಯೇ
ಲೋಕಕೆ ಅನ್ನವನೀಯುವನೋ

ಎಂದು ಹೇಳಿ ರೈತರ, ಶ್ರಮಿಕರ ಶ್ರಮದ ಕೊಡುಗೆಯನ್ನು ಅರ್ಹವಾಗಿಯೇ ಕೊಂಡಾಡಿದರು.

ರೈತರ ಅಂತರಾತ್ಮ ಹೊಕ್ಕು, ‘ರೈತನ ದೃಷ್ಟಿ’ಯಿಂದ ನೋಡಿದ ಅವರು,

ವಿಜಯನಗರವೊ ಮೊಗಲರಾಳ್ವಿಕೆಯೊ ಇಂಗ್ಲಿಷರೊ
ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ
ಕತ್ತಿ ಪರದೇಶಿಯಾದರೆ ಮಾತ್ರ ನೋವೆ
ನಮ್ಮವರೆ ಹದಹಾಕಿ ತಿವಿದರದು ಹೂವೆ?

ಎಂದು ಸಾಮ್ರಾಜ್ಯಗಳ ಶೋಷಕ ಸ್ವರೂಪವನ್ನು ಬಯಲು ಮಾಡಿದರು.

ಕರಿಯರದೊ ಬಿಳಿಯರದೊ ಯಾರದಾದರೆ ಏನು
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ

ಎಂದು ಸಾರಿದರು.

ಗದ್ಯ ಕಾವ್ಯ

“ಎಷ್ಟೋ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರದ ಪ್ರೊಫೆಸರುಗಳು ವಿಜ್ಞಾನದ ಪಾಠಗಳನ್ನು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಬೋಧಿಸಿದರೂ, ಮನೆಯಿಂದ ಹೊರಡುವಾಗ ರಾಹುಕಾಲ, ಗುಳಿಕ ಕಾಲಗಳಿಗಾಗಿ ಕ್ಯಾಲೆಂಡರನ್ನೋ, ಪಂಚಾಂಗವನ್ನೊ ನೋಡುವುದನ್ನು ನಾವು ಕಂಡಿಲ್ಲವೇ? ಅವರು ಭೌತಶಾಸ್ತ್ರ, ರಸಾಯನಶಾಸ್ತ್ರಗಳ ಭಾರಿ ಸರಕನ್ನು ಸಮರ್ಥವಾಗಿ ಹೊರುವ ಹೇಸರಗತ್ತೆಗಳಾಗುತ್ತಾರೆಯೇ ಹೊರತು, ವೈಜ್ಞಾನಿಕ ದೃಷ್ಟಿ ಸಂಪನ್ನರಾದ ವಿಚಾರಮತಿಗಳಾಗುವುದಿಲ್ಲ....” ಇವು ನಮ್ಮ ಸಮಾಜದ ಢಾಂಬಿಕರಿಗೆ, ಆಷಾಢಭೂತಿಗಳಿಗೆ ಬೀಸಿದ ಚಾಟಿ ಏಟಿನಂತಹ ಮಾತುಗಳು, ಕುವೆಂಪು ಅವರ ಲೇಖನಿಯಿಂದ ಸಿಡಿದು ಬಂದದ್ದು.

ಮನಸ್ಸನ್ನು ಮುತ್ತಿಕೊಂಡ ಭ್ರಾಂತಿಗಳನ್ನು ಹರಿವ ಕುವೆಂಪು ಅವರ ಇಂತಹ ಪ್ರಖರ ವಿಚಾರಗಳು ಬರಿಯ ಪದ್ಯ ರೂಪದಲ್ಲಿಲ್ಲ. ಗದ್ಯ ರೂಪದಲ್ಲಿಯೂ ಅಮೋಘವಾಗಿ ಅಭಿವ್ಯಕ್ತಿಗೊಂಡಿವೆ. ಇಂತಹ ಹಲವು ವೈಚಾರಿಕ ಬರಹಗಳ ಆಯ್ದಭಾಗಗಳ ಸಂಕಲನ ‘ಕುವೆಂಪು ವಿಚಾರ ಕ್ರಾಂತಿ’ ಎಂಬ ಹೊತ್ತಿಗೆ.

‘ಓ ನನ್ನ ಚೇತನ, ಆಗು ನೀ ಅನಿಕೇತನ’ ಎಂದು ನಮ್ಮೊಳಗಿನ ಚೈತನ್ಯಕ್ಕೆ ಕರೆ ನೀಡಿದ ಕುವೆಂಪು ವಿಚಾರಗಳನ್ನು ನಮ್ಮ ನಾಡಿನ ವಿದ್ಯಾರ್ಥಿ–ಯುವಜನರ ಮನಸ್ಸಿಗೆ ಮುಟ್ಟಿಸಬೇಕಾದ ಅಗತ್ಯ ಇಂದು ಹಿಂದೆಂದಿಗಿಂತಲೂ ಹೆಚ್ಚಾಗುತ್ತಿದೆ.

ಜಾತಿದ್ವೇಷವಲ್ಲ, ಸಮಾನತಾವಾದ

“ನಾನು ಸಮಾನತಾವಾದಿ. ಆದ್ದರಿಂದ ನಾನು ಮಾಡುವ ಟೀಕೆ, ಖಂಡನೆ, ಪ್ರಶಂಸೆ ಏನಿದ್ದರೂ ಅವು ಈ ಸಮಾನತಾವಾದಿ ದೃಷ್ಟಿಯಿಂದ ಹೊಮ್ಮುತ್ತವೆಯೇ ಹೊರತು ಯಾವ ಜಾತಿದ್ವೇಷದಿಂದಾಗಲಿ ಹೊಮ್ಮುವುದಿಲ್ಲ.” ಎಂದ ಕುವೆಂಪು ಅವರು, “ನನಗೆ ಯಾವ ಜಾತಿಯೂ ಇಲ್ಲ. ಹೀಗಾಗಿ ಜಾತಿದ್ವೇಷವೂ ಇಲ್ಲ” ಎಂದವರು.

“ಮನುಷ್ಯ ಜಾತಿ ತಾನೊಂದೆ ವಲಂ– ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು. ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ, ವಿನಾಶಗೊಳಿಸಬೇಕು. ‘ಮತ’ ತೊಲಗಿ ಅಧ್ಯಾತ್ಮ ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು. ಮತ ‘ಮನುಜ ಮತ’ವಾಗಬೇಕು–ಪಥ ‘ವಿಶ್ವಪಥ’ವಾಗಬೇಕು; ಮನುಷ್ಯ ‘ವಿಶ್ವಮಾನವ’ನಾಗಬೇಕು.”

“ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತ ಅದನ್ನು ನಾವು ಅಲ್ಪ ಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದು ವಿದ್ಯೆಯ ಕರ್ತವ್ಯವಾಗಬೇಕು.”

“ಇಂದು ಪರ್ಜನ್ಯ ಜಪ ಮಾಡಿ ಮಳೆ ಬರಿಸಿದವರು

ಪುಟ 13ಕ್ಕೆ

JANASHAKTHI KANNADA VARA PATRIKE: Printed, Published by G.N.NAGARAJ, No. 12, 18th Cross, Sampangirama Nagar, Bangalore 560027, Karnataka on behalf of COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Editor : S.Y.GURUSHANTH